ಸಂಪುಟ 6, ಸಂಚಿಕೆ 22

ಮೇ 16-31, 2026

# ನ್ಯೂ ಇಂಡಿಯಾ ಸಮಾಚಾರ

ಉಚಿತ ವಿತರಣೆಗಾಗಿ

Follow Us @NISPIBIndia

भारत की जनगणना

2027

CENSUS OF INDIA

जनगणना से जन कल्याण

# ರಾಷ್ಟ್ರದ ಪ್ರಗತಿಯನ್ನು ಉತ್ತೇಜಿಸುವ ಜನಗಣತಿ

ಜನಗಣತಿಗೆ ವಿಶೇಷ ರಾಷ್ಟ್ರೀಯ ಮಹತ್ವವಿದೆ; ಅದರ ದತ್ತಾಂಶವು ಮುಂಬರುವ ವರ್ಷಗಳಲ್ಲಿ ನಮ್ಮ ನೀತಿಗಳು ಮತ್ತು ಕಾರ್ಯಕ್ರಮಗಳನ್ನು ರೂಪಿಸಲು ಅಡಿಪಾಯ ಹಾಕುತ್ತದೆ. ಹೀಗಾಗಿ ವಿಶ್ವಾಸಾರ್ಹ ಮಾಹಿತಿಯನ್ನು ಒದಗಿಸುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯವಾಗಿದೆ

ಇ-ಪ್ರತಿಗಾಗಿ



# ರಾಷ್ಟ್ರ ನಿರ್ಮಾಣದಲ್ಲಿ ನಾಗರಿಕ ಪರಮಾಣು ಕಾರ್ಯಕ್ರಮದ ಅಮೂಲ್ಯ ಕೊಡುಗೆ

*ಜನಪ್ರಿಯ ರೇಡಿಯೋ ಕಾರ್ಯಕ್ರಮ 'ಮನ್ ಕಿ ಬಾತ್'ನ 133ನೇ ಸಂಚಿಕೆಯ ಮೂಲಕ, ಪ್ರಧಾನಮಂತ್ರಿ ನರೇಂದ್ರ ಮೋದಿ ಮತ್ತೊಮ್ಮೆ ಭಾರತ ಮತ್ತು ಪ್ರಪಂಚದಾದ್ಯಂತದ ಜನರೊಂದಿಗೆ ತಮ್ಮ ಆಲೋಚನೆಗಳನ್ನು ಹಂಚಿಕೊಂಡರು. ಏಪ್ರಿಲ್ 26 ರಂದು ಪ್ರಸಾರವಾದ ಈ ಸಂಚಿಕೆಯಲ್ಲಿ, ಅವರು ವಿಜ್ಞಾನ, ತಂತ್ರಜ್ಞಾನ ಮತ್ತು ರಾಷ್ಟ್ರದ ಸಾಧನೆಗಳನ್ನು ಒತ್ತಿಹೇಳಿದರು ಮತ್ತು ರಾಷ್ಟ್ರದ ಪ್ರಗತಿಯಲ್ಲಿ ವಿಜ್ಞಾನಿಗಳ ಪಾತ್ರವನ್ನು ಶ್ಲಾಘಿಸಿದರು. ಪವನ ಮತ್ತು ಸೌರಶಕ್ತಿಯಂಥ ಕ್ಷೇತ್ರಗಳಲ್ಲಿ ದೇಶದ ಶಕ್ತಿ ಹೆಚ್ಚುತ್ತಿರುವುದನ್ನು ಅವರು ಒತ್ತಿ ಹೇಳಿದರು. ಮಿಗಿಲಾಗಿ, ಅವರು ಜನಗಣತಿ ಅಭಿಯಾನ ಸೇರಿದಂತೆ ಹಲವಾರು ಪ್ರಮುಖ ವಿಷಯಗಳ ಬಗ್ಗೆ ಮಾತನಾಡಿದರು. ಮನದ ಮಾತಿನ ಸಂಪಾದಿತ ಆಯ್ದ ಭಾಗಗಳನ್ನು ಇಲ್ಲಿ ನೀಡಲಾಗಿದೆ.*

- **ಪರಮಾಣು ಕಾರ್ಯಕ್ರಮ:** ಭಾರತವು ದೇಶದ ಪ್ರಗತಿಯೊಂದಿಗೆ ವಿಜ್ಞಾನವನ್ನು ಜೋಡಿಸುವುದು ಹೇಗೆ ಎಂದು ಸದಾ ನೋಡುತ್ತದೆ. ಇದೇ ದೃಷ್ಟಿಕೋನದೊಂದಿಗೆ, ನಮ್ಮ ವಿಜ್ಞಾನಿಗಳು ನಾಗರಿಕ ಪರಮಾಣು ಕಾರ್ಯಕ್ರಮವನ್ನು ಮುನ್ನಡೆಸುತ್ತಿದ್ದಾರೆ. ಸುಸ್ಥಿರ ಇಂಧನ ಪರಿಹಾರಗಳನ್ನು ಒದಗಿಸುವ, ಪರಮಾಣು ತಂತ್ರಜ್ಞಾನದಲ್ಲಿನ ಪ್ರಗತಿ ಹಾಗೂ ರಾಷ್ಟ್ರೀಯ ಭದ್ರತೆಯನ್ನು ಹೆಚ್ಚಿಸುವ ಮೂಲಕ ಅವರ ಪ್ರಯತ್ನಗಳು ರಾಷ್ಟ್ರ ನಿರ್ಮಾಣಕ್ಕೆ ಮಹತ್ವದ ಕೊಡುಗೆ ನೀಡುತ್ತಿವೆ.
- **ಮಹತ್ವದ ಸ್ಥಿತಿಯ ಸಾಧನೆ:** ನಮ್ಮ ಪರಮಾಣು ವಿಜ್ಞಾನಿಗಳು ಮತ್ತೊಂದು ಪ್ರಮುಖ ಸಾಧನೆಯೊಂದಿಗೆ ಭಾರತದ ಹೆಮ್ಮೆಯನ್ನು ಹೆಚ್ಚಿಸಿದ್ದಾರೆ. ತಮಿಳುನಾಡಿನ ಕಲ್ಪಾಕ್ಕಂನಲ್ಲಿರುವ ಫಾಸ್ಟ್ ಬ್ರೀಡರ್ ರಿಯಾಕ್ಟರ್ ಮಹತ್ವದ ಸ್ಥಿತಿ (ಕ್ರಿಟಿಕಾಲಿಟಿ)ಯನ್ನು ಸಾಧಿಸಿದೆ. ವಾಸ್ತವವಾಗಿ, ಕ್ರಿಟಿಕಾಲಿಟಿ ಎಂದರೆ ರಿಯಾಕ್ಟರ್ ಮೊದಲ ಬಾರಿಗೆ ಸ್ವಯಂ-ಸಮರ್ಥನೀಯ ಪರಮಾಣು ಸರಪಳಿ ಪ್ರತಿಕ್ರಿಯೆಯನ್ನು ಯಶಸ್ವಿಯಾಗಿ ಸಾಧಿಸುವ ಹಂತವಾಗಿದೆ.
- **ಪವನ ಶಕ್ತಿ:** ಪವನ ಶಕ್ತಿಯು ಭಾರತದ ಅಭಿವೃದ್ಧಿಯ ಹೊಸ ಭಾಷ್ಯ ಬರೆಯುತ್ತಿದೆ. ಭಾರತವು ಇತ್ತೀಚೆಗೆ ಪವನ ಇಂಧನ ಕ್ಷೇತ್ರದಲ್ಲಿ ಪ್ರಮುಖ ಮೈಲಿಗಲ್ಲು ಸಾಧಿಸಿದೆ; ದೇಶದ ಪವನ ಇಂಧನ ಉತ್ಪಾದನಾ ಸಾಮರ್ಥ್ಯ ಈಗ 56 ಗಿಗಾವ್ಯಾಟ್ ಗಳನ್ನು ಮೀರಿದೆ.
- **ತಂಡದಲ್ಲಿ ಹೆಮ್ಮೆ:** ಫ್ರಾನ್ಸ್ ನ ಬೋರ್ಡೆಕ್ಸ್ ನಲ್ಲಿ ನಡೆದ ಯುರೋಪಿಯನ್ ಬಾಲಕಿಯರ ಗಣಿತ ಒಲಿಂಪಿಯಾಡ್ ನಲ್ಲಿ, ನಮ್ಮ ಹೆಣ್ಣುಮಕ್ಕಳು ತಮ್ಮ ಅತ್ಯುತ್ತಮ ಪ್ರದರ್ಶನವನ್ನು ನೀಡಿದ್ದಾರೆ. ಈ ಪ್ರತಿಭಾವಂತ ತಂಡದ ಬಗ್ಗೆ ನನಗೆ ಅಪಾರ ಹೆಮ್ಮೆ ಇದೆ. ನಮ್ಮ ತಂಡವು ಜಾಗತಿಕವಾಗಿ ಆರನೇ ಸ್ಥಾನವನ್ನು ಪಡೆದುಕೊಂಡಿದೆ.
- **ಬುದ್ಧನ ಬೋಧನೆಗಳು:** ಭಗವಾನ್ ಗೌತಮ ಬುದ್ಧನ ಜೀವನ ಸಂದೇಶ ಎಂದಿನಂತೆ ಇಂದಿಗೂ ಪ್ರಸ್ತುತವಾಗಿದೆ. ಶಾಂತಿ ನಮ್ಮೊಳಗೇ ಪ್ರಾರಂಭವಾಗುತ್ತದೆ ಎಂದು ಅವರು ನಮಗೆ ಕಲಿಸಿದ್ದಾರೆ; ತನ್ನ ಮೇಲೆ ತಾನು ಜಯಗಳಿಸುವುದೇ ದೊಡ್ಡ ಗೆಲುವು ಎಂದು ಅವರು ನಮಗೆ ತಿಳಿಸಿದ್ದಾರೆ. ಇಂದು ಜಗತ್ತು ಎದುರಿಸುತ್ತಿರುವ ಉದ್ವಿಗ್ನತೆ ಮತ್ತು ಸಂಘರ್ಷಗಳ ನಡುವೆ, ಬುದ್ಧನ ಬೋಧನೆಗಳು ಇನ್ನಷ್ಟು ಮಹತ್ವದ್ದಾಗಿವೆ.
- **ಸಂಪ್ರದಾಯಗಳ ಹೆಮ್ಮೆ:** ಮೊದಲ ಬಾರಿಗೆ, ಬೀಟಿಂಗ್ ರಿಟ್ರೀಟ್ ನ ಸಂಗೀತವು ವೇವ್ಸ್ ಒಟಿಟಿಯಲ್ಲಿ ಲಭ್ಯವಿದೆ. ಭವಿಷ್ಯದಲ್ಲಿ, ಇದು ಇತರ ವೇದಿಕೆಗಳಲ್ಲಿಯೂ ಲಭ್ಯವಾಗುತ್ತದೆ - ನೀವು ಅದನ್ನು ಆಲಿಸಬೇಕು. ನಮ್ಮ ಸಶಸ್ತ್ರ ಪಡೆಗಳು ಮತ್ತು ಅವರ ಸಂಪ್ರದಾಯಗಳ ಬಗ್ಗೆ ನೀವು ತುಂಬಾ ಹೆಮ್ಮೆಪಡುತ್ತೀರಿ.
- **ವರ್ಧಿತ ಸಂರಕ್ಷಣೆ:** ಛತ್ತೀಸ್ ಗಢದಲ್ಲಿ ಕೃಷ್ಣಮೃಗಗಳು ಮತ್ತೆ ಕಾಣಿಸಿಕೊಳ್ಳಲು ಪ್ರಾರಂಭಿಸಿವೆ. ಅವುಗಳ ಸಂಖ್ಯೆ ಗಮನಾರ್ಹವಾಗಿ ಕಡಿಮೆಯಾಗಿತ್ತು, ಆದರೆ ನಿರಂತರ ಪ್ರಯತ್ನಗಳು ಹೆಚ್ಚಿದ ಸಂರಕ್ಷಣೆಯಿಂದ ಇದು ಸಾಧ್ಯವಾಯಿತು. ಇಂದು, ಅವು ಮತ್ತೊಮ್ಮೆ ಮುಕ್ತ ಮೈದಾನಗಳಲ್ಲಿ ತಿರುಗಾಡುತ್ತಿರುವುದನ್ನು ಕಾಣಬಹುದು. ಗ್ರೇಟ್ ಇಂಡಿಯನ್ ಬಸ್ಟರ್ಡ್, ಗೋದಾವನದ ಸಂರಕ್ಷಣೆಯಲ್ಲೂ ಇದೇ ರೀತಿಯ ಭರವಸೆ ಕಂಡುಬರುತ್ತದೆ.
- **ಬಿದಿರು ವಲಯದಲ್ಲಿ ಈಶಾನ್ಯದ ಯಶಸ್ಸು:** ಒಂದು ಕಾಲದಲ್ಲಿ ಹೊರೆ ಎಂದು ಪರಿಗಣಿಸಲಾಗಿದ್ದ ಬಿದಿರನ್ನು 2017 ರಲ್ಲಿ ಶಾಸಕಾಂಗ ತಿದ್ದುಪಡಿಯ ಮೂಲಕ, 'ಮರಗಳ' ವರ್ಗದಿಂದ ತೆಗೆದುಹಾಕಿ ಮರುವರ್ಗೀಕರಿಸಲಾಯಿತು. ಅಂದಿನಿಂದ, ಬಿದಿರು ವಲಯವು ಉದ್ಯೋಗ, ವಾಣಿಜ್ಯ ಮತ್ತು ನಾವೀನ್ಯತೆಯ ವಿಷಯದಲ್ಲಿ ಹೊಸ ವೇಗವನ್ನು ಕಂಡಿದೆ. ನಮ್ಮ ತಾಯಂದಿರು ಮತ್ತು ಸಹೋದರಿಯರು ಪ್ರಾಥಮಿಕ ಫಲಾನುಭವಿಗಳಾಗಿ ಹೊರಹೊಮ್ಮಿದ್ದಾರೆ.
- **ವಿಶೇಷ ಪೋರ್ಟಲ್:** ರಾಷ್ಟ್ರೀಯ ಪತ್ರಾಗಾರವು ಸಮರ್ಪಿತ ಪೋರ್ಟಲ್ ನಲ್ಲಿ ವಿಶಿಷ್ಟ ಡೇಟಾಬೇಸ್ ಅನ್ನು ಹಂಚಿಕೊಂಡಿದೆ. ಈ ಸಂಸ್ಥೆಯು 200 ದಶಲಕ್ಷಕ್ಕೂ ಹೆಚ್ಚು ಅಮೂಲ್ಯ ದಾಖಲೆಗಳನ್ನು ಡಿಜಿಟಲೀಕರಣ ಮಾಡಿದೆ ಮತ್ತು ಸಾರ್ವಜನಿಕಗೊಳಿಸಿದೆ. www.abhilekh-patal.in ಭೇಟಿ ನೀಡುವಂತೆ ನಾನು ನಿಮ್ಮೆಲ್ಲರನ್ನೂ ಆಗ್ರಹಿಸುತ್ತೇನೆ.
- **ಜನಗಣತಿ 2027:** ರಾಷ್ಟ್ರೀಯ ಜನಗಣತಿ ಕೇವಲ ಸರ್ಕಾರದ ಕೆಲಸವಲ್ಲ. ಇದು ನಮ್ಮೆಲ್ಲರ ಜವಾಬ್ದಾರಿ. ನಿಮ್ಮ ಭಾಗವಹಿಸುವಿಕೆ ನಿರ್ಣಾಯಕವಾಗಿದೆ. ಬನ್ನಿ, ನಾವೆಲ್ಲರೂ ಈ ಪ್ರಕ್ರಿಯೆಯಲ್ಲಿ ಭಾಗವಹಿಸೋಣ. 2027ರ ಜನಗಣತಿಯನ್ನು ಯಶಸ್ವಿಗೊಳಿಸೋಣ.
- **ಸ್ಥಳೀಯತೆಯಿಂದ ಜಾಗತಿಕಕ್ಕೆ:** ಭಾರತೀಯ ಉತ್ಪನ್ನಗಳು ಈಗ ರಾಷ್ಟ್ರೀಯ ಗಡಿಗಳನ್ನು ದಾಟಿ ಪ್ರಪಂಚದಾದ್ಯಂತದ ಮಾರುಕಟ್ಟೆಗಳು ಮತ್ತು ರೆಸ್ಟೋರೆಂಟ್ ಗಳನ್ನು ತಲುಪುತ್ತಿವೆ. ನಾವು ಇಂದು "ಸ್ಥಳೀಯದಿಂದ ಜಾಗತಿಕ" ಪ್ರಯಾಣದ ಬಗ್ಗೆ ಮಾತನಾಡುತ್ತಿರುವಾಗ, ಭಾರತೀಯ ಚೀಸ್ ನ ಉದಾಹರಣೆಯು ಮಾರ್ಗದರ್ಶಕ ಬೆಳಕಾಗಿ ಕಾರ್ಯನಿರ್ವಹಿಸುತ್ತಾ, ಮುಂದಿನ ಮಾರ್ಗವನ್ನು ಸೂಚಿಸುತ್ತದೆ.

*'ಮನ್ ಕಿ ಬಾತ್' ಕೇಳಲು ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿ*

# ನ್ಯೂ ಇಂಡಿಯಾ ಸಮಾಚಾರ

**ಸಂಪುಟ 6, ಸಂಚಿಕೆ 22 | ಮೇ 16-31, 2026**



ಪ್ರಧಾನ ಸಂಪಾದಕರು
**ಧೀರೇಂದ್ರ ಓಝಾ**
ಪ್ರಧಾನ ಮಹಾನಿರ್ದೇಶಕರು,
ಪ್ರೆಸ್ ಇನ್‌ಫರ್ಮೇಶನ್ ಬ್ಯುರೋ
ನವದೆಹಲಿ

ಹಿರಿಯ ಸಲಹಾ ಸಂಪಾದಕ
**ಸಂತೋಷ್ ಕುಮಾರ್**

ಹಿರಿಯ ಸಹಾಯಕ ಸಲಹಾ ಸಂಪಾದಕ
**ಪವನ್ ಕುಮಾರ್**

ಸಹಾಯಕ ಸಲಹಾ ಸಂಪಾದಕ
**ಅಖಿಲೇಶ್ ಕುಮಾರ್**
**ಚಂದನ್ ಕುಮಾರ್ ಚೌಧರಿ**

ಭಾಷಾ ಸಂಪಾದಕರು
**ಸುಮಿತ್ ಕುಮಾರ್** (ಇಂಗ್ಲಿಷ್)
**ರಜನೀಶ್ ಮಿಶ್ರಾ** (ಇಂಗ್ಲಿಷ್)
**ನದೀಮ್ ಅಹ್ಮದ್** (ಉರ್ದು)

ಹಿರಿಯ ವಿನ್ಯಾಸಕರು
**ಫೂಲ್ ಚಂದ್ ತಿವಾರಿ**

ವಿನ್ಯಾಸಕರು
**ಅಭಯ್ ಗುಪ್ತಾ**
**ಸತ್ಯಂ ಸಿಂಗ್**




13 ಭಾಷೆಗಳಲ್ಲಿ ಲಭ್ಯವಿರುವ ನವಭಾರತದ ಸುದ್ದಿಗಳನ್ನು ಓದಲು ಕ್ಲಿಕ್ ಮಾಡಿ
https://newindiasamachar.pib.gov.in/news.aspx

ನ್ಯೂ ಇಂಡಿಯಾ ಸಮಾಚಾರ ಹಿಂದಿನ ಸಂಚಿಕೆಗಳನ್ನು ಓದಲು ಕ್ಲಿಕ್ ಮಾಡಿ:
https://newindiasamachar.pib.gov.in.archive.aspx

'ನ್ಯೂ ಇಂಡಿಯಾ ಸಮಾಚಾರ'ದ ನಿಯಮಿತ ಅಪ್ಡೇಟ್‌ಗಳಿಗಾಗಿ **@NISPIBIndia** ಅನ್ನು ಟ್ವಿಟ್ಟರ್‌ನಲ್ಲಿ ಅನುಸರಿಸಿ

## ಒಳ ಪುಟಗಳಲ್ಲಿ...




ಜನಗಣತಿ 2027
ಮುಖಪುಟ ಲೇಖನ

ಭಾರತದಲ್ಲಿ, ಜನಗಣತಿ ಎಂಬುದು ಕೇವಲ ಜನರ ಸಂಖ್ಯೆಯ ಎಣಿಕೆಯಲ್ಲ; ಬದಲಿಗೆ, ಇದು ಭಾರತದ ಸಂಪೂರ್ಣ ನೀತಿ ನಿರೂಪಣೆಯ ಚೌಕಟ್ಟಿನ ಬೆನ್ನೆಲುಬಾಗಿ ಕಾರ್ಯನಿರ್ವಹಿಸುತ್ತದೆ. ಸಾಮಾನ್ಯವಾಗಿ ಪ್ರತಿ ದಶಕದ ಆರಂಭದಲ್ಲಿ ನಡೆಸಲಾಗುವ ದಶವಾರ್ಷಿಕ ಜನಗಣತಿಯು ಈ ಬಾರಿ ಕೋವಿಡ್-19 ಕಾರಣದಿಂದಾಗಿ ವಿಳಂಬವಾಗಿದ್ದು, ಏಪ್ರಿಲ್ 2026 ರಲ್ಲಿ ಪ್ರಾರಂಭವಾಗಿದ್ದು, ಈಗ ಇದು ಆಧುನಿಕ ತಂತ್ರಜ್ಞಾನ ಮತ್ತು ಡಿಜಿಟಲ್ ಕ್ರಾಂತಿಯ ಸಂಕೇತವಾಗಿ ನಿಂತಿರುವ 'ವಿಕಸಿತ ಭಾರತ'ಕ್ಕೆ ಅಡಿಪಾಯ ಹಾಕಲು ಸಜ್ಜಾಗಿದೆ.


|8-26


**ಉತ್ತರ ಪ್ರದೇಶಕ್ಕೆ ಪಿಎಂ ಮೋದಿ ಭೇಟಿ**

### ಗಂಗಾ ಎಕ್ಸ್‌ಪ್ರೆಸ್ ವೇ: ಹೊಸ ಕನಸುಗಳು ಮತ್ತು ಅವಕಾಶಗಳ ಹೆಬ್ಬಾಗಿಲು




ಪ್ರಧಾನಮಂತ್ರಿ ಮೋದಿ ಅವರು ಗಂಗಾ ಎಕ್ಸ್‌ಪ್ರೆಸ್ ಹೆದ್ದಾರಿ ಸೇರಿದಂತೆ ಸಾವಿರಾರು ಕೋಟಿ ರೂಪಾಯಿಗಳ ಅಭಿವೃದ್ಧಿ ಯೋಜನೆಗಳ ಲೋಕಾರ್ಪಣೆ ಮತ್ತು ಶಂಕುಸ್ಥಾಪನೆ ನೆರವೇರಿಸಿದರು


|27-29






**ಸುದ್ದಿ ತುಣುಕುಗಳು** |4-5

**ಆಹಾರ ಭದ್ರತೆಯ ಖಾತ್ರಿ**
ಧಾನ್ಯ ದಾಸ್ತಾನು ಯೋಜನೆಯು ರಾಷ್ಟ್ರದ ಆರ್ಥಿಕತೆಯನ್ನು ಬಲಪಡಿಸುತ್ತದೆ |6-7

**ಭಾರತದಿಂದ ನ್ಯೂಜಿಲೆಂಡ್ ಗೆ ರಫ್ತು ಇನ್ನು ಸುಂಕ ಮುಕ್ತ**
ಭಾರತ-ನ್ಯೂಜಿಲೆಂಡ್ ಮುಕ್ತ ವ್ಯಾಪಾರ ಒಪ್ಪಂದಕ್ಕೆ ಸಹಿ | 32-35

**ಭಾರತ: ಜಾಗತಿಕ ಆರ್ಥಿಕತೆಯ ಪ್ರಮುಖ ಆಧಾರಸ್ತಂಭ**
ಕೊರಿಯಾ ಅಧ್ಯಕ್ಷರ ಭಾರತ ಭೇಟಿ |36-37

**ವ್ಯಕ್ತಿತ್ವ: ಕುಮುದಿನಿ ಲಖಿಯಾ**
ಭಾರತೀಯ ಶಾಸ್ತ್ರೀಯ ನೃತ್ಯದ ಪ್ರಖ್ಯಾತ ಪ್ರತಿಪಾದಕಿ |38




### ಜಾಗತಿಕ ಪ್ರವಾಸೋದ್ಯಮ ಮತ್ತು ಸಂಸ್ಕೃತಿಯ ಕೇಂದ್ರವಾಗಿ ಹೊರಹೊಮ್ಮಿದ ಈಶಾನ್ಯ

ಸಿಕ್ಕಿಂಗೆ ಭೇಟಿ ನೀಡಿದ ಸಂದರ್ಭದಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು 4,000 ಕೋಟಿ ರೂ.ಗಳಿಗೂ ಹೆಚ್ಚು ಮೌಲ್ಯದ ಅಭಿವೃದ್ಧಿ ಯೋಜನೆಗಳ ಉದ್ಘಾಟನೆ ಮತ್ತು ಶಂಕುಸ್ಥಾಪನೆ ನೆರವೇರಿಸಿದರು


|30-31



**Published:** Kanchan Prasad, Director General, on behalf of Central Bureau of Communication
**Communication Address :** Room No–1077, Soochna Bhawan, CGO Complex, New Delhi -110003.
**E-Mail : response-nis@pib.gov.in, RNI No. :** DELENG/2020/78811

# ಸಂಪಾದಕೀಯ

## ಜನಗಣತಿ 2027

# ಅಭಿವೃದ್ಧಿಯತ್ತ ಭಾರತದ ಪಯಣ...

*ಶುಭಾಶಯಗಳು!*

ಭಾರತವು 2027ರ ಜನಗಣತಿಯನ್ನು ಪ್ರಾರಂಭಿಸಿದೆ - ಇದು ವಿಶ್ವದ ಅತಿದೊಡ್ಡ ಜನಸಂಖ್ಯೆಯ ತಲೆ ಎಣಿಕೆಯಾಗಿದೆ. ಇದು ದೇಶದ ಅತ್ಯಂತ ವ್ಯಾಪಕವಾದ ಆಡಳಿತಾತ್ಮಕ ಮತ್ತು ಸಾಂಖ್ಯಿಕ ಕಸರತ್ತಿನ ಆರಂಭದ ದ್ಯೋತಕವಾಗಿದೆ. ಸಂಪೂರ್ಣ ಡಿಜಿಟಲ್ ದತ್ತಾಂಶ ಸೆರೆಹಿಡಿಯುವ ಕಾರ್ಯವಿಧಾನದ ಜೊತೆಗೆ ಸ್ವಯಂ-ಎಣಿಕೆಯನ್ನು ಒಳಗೊಂಡಿರುವ ಭಾರತದ ಮೊದಲ ಜನಗಣತಿ ಇದಾಗಿದೆ. ಪ್ರತಿಯೊಂದು ಕಲ್ಯಾಣ ಯೋಜನೆ, ಪ್ರತಿ ಚುನಾವಣಾ ಕ್ಷೇತ್ರ ಮತ್ತು ಪ್ರತಿ ಅಭಿವೃದ್ಧಿ ಯೋಜನೆಯನ್ನು ಜನಗಣತಿಯ ದತ್ತಾಂಶದ ಆಧಾರದ ಮೇಲೆ ತಯಾರಿಸಲಾಗುತ್ತದೆ. ಭಾರತದಲ್ಲಿ 150 ವರ್ಷಗಳಿಗಿಂತಲೂ ಹೆಚ್ಚು ಕಾಲದಿಂದ ಜನಗಣತಿಯನ್ನು ನಡೆಸಲಾಗುತ್ತಿದೆ. ಆಧುನಿಕ ಕಾಲದಲ್ಲಿ ಮೊದಲ ಸಂಪೂರ್ಣ ಜನಗಣತಿಯನ್ನು 1881 ರಲ್ಲಿ ಬ್ರಿಟಿಷ್ ಆಳ್ವಿಕೆಯ ಸಮಯದಲ್ಲಿ ನಡೆಸಲಾಗಿತ್ತು; ಅಂದಿನಿಂದ, ಇದನ್ನು ಪ್ರತಿ ಹತ್ತು ವರ್ಷಗಳಿಗೊಮ್ಮೆ ನಡೆಸಲಾಗುತ್ತಿದೆ. ಹಿಂದಿನ ಜನಗಣತಿಯು 2011 ರಲ್ಲಿ ನಡೆದಿತ್ತು. ಮುಂದಿನ ಜನಗಣತಿ 2021ಕ್ಕೆ ನಿಗದಿಪಡಿಸಲಾಗಿತ್ತು. ಆದರೆ, ಕೋವಿಡ್-19 ಸಾಂಕ್ರಾಮಿಕ ರೋಗದಿಂದಾಗಿ, ಜನಗಣತಿಯನ್ನು ಮುಂದೂಡಬೇಕಾಯಿತು. ಪರಿಣಾಮವಾಗಿ, 2027 ರ ಜನಗಣತಿಯು ನಿರ್ದಿಷ್ಟ ಮಹತ್ವವನ್ನು ಪಡೆದುಕೊಳ್ಳುತ್ತದೆ, ಏಕೆಂದರೆ ಇದು ಸುದೀರ್ಘ ವಿರಾಮದ ನಂತರ ಜನಸಂಖ್ಯೆಯ ಹೊಸ ಚಿತ್ರಣವನ್ನು ಪ್ರಸ್ತುತಪಡಿಸುತ್ತದೆ. ಈ ಜನಗಣತಿಯು ಗಮನಾರ್ಹವಾಗಿದೆ, ಏಕೆಂದರೆ ಸ್ವಾತಂತ್ರ್ಯದ ನಂತರ ಮೊದಲ ಬಾರಿಗೆ, ಜಾತಿ ಗಣತಿಯನ್ನು ಒಟ್ಟಾರೆ ಪ್ರಕ್ರಿಯೆಯಲ್ಲಿ ಸೇರಿಸಲಾಗಿದೆ. ಇದು ಸಾಮಾಜಿಕ ಸೌಹಾರ್ದತೆ ಮತ್ತು ನ್ಯಾಯದ ನಿಟ್ಟಿನಲ್ಲಿ ನಿರ್ಣಾಯಕ ಹೆಜ್ಜೆಯಾಗಿದೆ.

ಸರಳವಾಗಿ ಹೇಳುವುದಾದರೆ, ಜನಗಣತಿಯು ಒಂದು ದೇಶದೊಳಗಿನ ಪ್ರತಿಯೊಬ್ಬ ವ್ಯಕ್ತಿಯ ಎಣಿಕೆ ಮತ್ತು ಸಂಬಂಧಿತ ಸಾಮಾಜಿಕ-ಆರ್ಥಿಕ ದತ್ತಾಂಶಗಳ ಸಂಕಲನವನ್ನು ಒಳಗೊಂಡಿರುತ್ತದೆ. ಈ ದಶಮಾನದ ಪ್ರಕ್ರಿಯೆಯು ದೇಶದಲ್ಲಿ ವಾಸಿಸುವ ಒಟ್ಟು ಜನಸಂಖ್ಯೆ, ಅವರ ವಯಸ್ಸು, ಶೈಕ್ಷಣಿಕ ಸಾಧನೆ, ಉದ್ಯೋಗ ಸ್ಥಿತಿ ಮತ್ತು ಅವರು ವಿವಿಧ ಸೌಲಭ್ಯಗಳನ್ನು ಹೊಂದಿರುವ ಅಥವಾ ಕೊರತೆಯನ್ನು ಕಂಡುಹಿಡಿಯುವುದನ್ನು ಸುಲಭಗೊಳಿಸುತ್ತದೆ. ಜನಗಣತಿಯಿಂದ ಪಡೆದ ದತ್ತಾಂಶವು ಸರ್ಕಾರದ ನೀತಿ ನಿರೂಪಣೆಯ ಅಡಿಪಾಯವಾಗಿ ಕಾರ್ಯನಿರ್ವಹಿಸುತ್ತದೆ. ರಸ್ತೆಗಳು, ಶಿಕ್ಷಣ, ಆರೋಗ್ಯ ರಕ್ಷಣೆ, ನೀರು ಸರಬರಾಜು, ವಸತಿ ಮತ್ತು ಉದ್ಯೋಗ ಮುಂತಾದ ಎಲ್ಲಾ ಕ್ಷೇತ್ರಗಳ ಯೋಜನೆಯನ್ನು ಈ ಅಂಕಿಅಂಶಗಳ ಆಧಾರದ ಮೇಲೆ ನಿಖರವಾಗಿ ರೂಪಿಸಲಾಗಿದೆ. ಒಟ್ಟಾರೆಯಾಗಿ ಹೇಳುವುದಾದರೆ, ಈ ಅಂಕಿ-ಅಂಶಗಳು ನೀತಿಗಳು ಮತ್ತು ಯೋಜನೆಗಳ ರಚನೆ ಮತ್ತು ಅನುಷ್ಠಾನ ಎರಡರಲ್ಲೂ ಪ್ರಮುಖ ಪಾತ್ರ ವಹಿಸುತ್ತವೆ. ಜನಗಣತಿಯ ಯಶಸ್ಸು ಕೇವಲ ಸರ್ಕಾರದ ಪ್ರಯತ್ನಗಳ ಮೇಲೆ ಅವಲಂಬಿತವಾಗಿಲ್ಲ; ಸಾರ್ವಜನಿಕ ಸಹಭಾಗಿತ್ವವೂ ಅಷ್ಟೇ ಮುಖ್ಯ. ನಿಖರ ಮತ್ತು ಸಂಪೂರ್ಣ ಮಾಹಿತಿಯನ್ನು ಒದಗಿಸುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯವಾಗಿದೆ. ಇದು ಕೇವಲ ಅಧಿಕಾರಶಾಹಿ ಔಪಚಾರಿಕತೆಯಲ್ಲ, ಆದರೆ ರಾಷ್ಟ್ರ ನಿರ್ಮಾಣಕ್ಕೆ ಸ್ಪಷ್ಟವಾದ ಕೊಡುಗೆಯಾಗಿದೆ. ಅಭಿವೃದ್ಧಿ ಹೊಂದಿದ ರಾಷ್ಟ್ರವಾಗಿ ಭಾರತದ ಪಯಣಕ್ಕೆ ಜನಗಣತಿಯ ಪ್ರಕ್ರಿಯೆ, ಉದ್ದೇಶಗಳು, ಮಹತ್ವ, ಉಪಯುಕ್ತತೆ ಮತ್ತು ಕೊಡುಗೆಯನ್ನು ಎತ್ತಿ ತೋರಿಸುವ ಜನಗಣತಿ 2027 ನಮ್ಮ ಪ್ರಸ್ತುತ ಸಂಚಿಕೆಯ ಮುಖಪುಟ ಲೇಖನವಾಗಿದೆ.

ಜೊತೆಗೆ, ವ್ಯಕ್ತಿತ್ವ ವಿಭಾಗದಲ್ಲಿ ಭಾರತೀಯ ಶಾಸ್ತ್ರೀಯ ನೃತ್ಯದ ಪ್ರಖ್ಯಾತ ಪ್ರತಿಪಾದಕಿ ಕುಮುದಿನಿ ಲಖಿಯಾ ಕುರಿತ ಲೇಖನವಿದೆ. ಈ ಸಂಚಿಕೆಯು ಪ್ರಮುಖ ಧಾನ್ಯ ದಾಸ್ತಾನು ಯೋಜನೆ ಸೇರಿದಂತೆ ಪ್ರಧಾನಮಂತ್ರಿ ನರೇಂದ್ರ ಮೋದಿಯವರ ಹದಿನೈದು ದಿನಗಳ ಕಾರ್ಯಕ್ರಮಗಳನ್ನೂ ಒಳಗೊಂಡಿದೆ.

ಜೊತೆಗೆ, ನಿಯತಕಾಲಿಕದ ಮುಖಪುಟದ ಒಳ ಪುಟವು ಮನ್ ಕಿ ಬಾತ್ ಕುರಿತು ವಿಶೇಷ ವಸ್ತುವಿಷಯವನ್ನು ಒಳಗೊಂಡಿದ್ದರೆ, ಹಿಂದಿನ ರಕ್ಷಾಪುಟವು 'ದೇವಭೂಮಿ' - ಉತ್ತರಾಖಂಡದಲ್ಲಿ ಚಾರ್ ಧಾಮ್ ಯಾತ್ರೆಯ ಪ್ರಾರಂಭದ ಸಂದರ್ಭದಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಹಂಚಿಕೊಂಡ ಪತ್ರದ ಆಯ್ದ ಭಾಗಗಳು ಮತ್ತು ಸಂದೇಶವನ್ನು ಒಳಗೊಂಡಿದೆ.

**ನಿಮ್ಮ ಸಲಹೆಗಳನ್ನು ನಮಗೆ ಕಳುಹಿಸುತ್ತಿರಿ.**



**(ಧೀರೇಂದ್ರ ಓಝಾ)**

ಹಿಂದಿ, ಇಂಗ್ಲಿಷ್ ಮತ್ತು ಇತರ 11 ಭಾಷೆಗಳಲ್ಲಿ ಲಭ್ಯವಿರುವ ಪತ್ರಿಕೆಯನ್ನು ಇಲ್ಲಿ ಓದಿ/ಡೌನ್ಲೋಡ್ ಮಾಡಿ.
*https://newindiasamachar.pib.gov.in/*

# ಅಂಚೆ ಪೆಟ್ಟಿಗೆ




**ಹದಿನೈದು ದಿನಗಳ ತಾಜಾ ಮಾಹಿತಿಯ ಭಂಡಾರ**

ನಾನು ನ್ಯೂ ಇಂಡಿಯಾ ಸಮಾಚಾರ ಪತ್ರಿಕೆಯ ನಿಯಮಿತ ಓದುಗ. ಅದರ ಸಂಪಾದಕೀಯದ ಮೂಲಕ, ನಾನು ಇಡೀ ನಿಯತಕಾಲಿಕದ ಅವಲೋಕನವನ್ನು ಪಡೆಯುತ್ತೇನೆ. ಈ ಮಾಹಿತಿಯ ಆಧಾರದ ಮೇಲೆ, ನಿಯತಕಾಲಿಕವು ತನ್ನ ಓದುಗರಿಗೆ ಹೆಚ್ಚು ಪ್ರಯೋಜನಕಾರಿಯಾಗಿದೆ ಎಂದು ಸಾಬೀತುಪಡಿಸುತ್ತದೆ. ಈ ನಿಯತಕಾಲಿಕವು ಹದಿನೈದು ದಿನಗಳ ತಾಜಾ ಮಾಹಿತಿಯ ಭಂಡಾರವಾಗಿದೆ; ಆದ್ದರಿಂದ, ಪ್ರಧಾನಮಂತ್ರಿ ನರೇಂದ್ರ ಮೋದಿಯವರ 'ಅಭಿವೃದ್ಧಿ ಹೊಂದಿದ ಭಾರತ'ದ ಗುರಿಯನ್ನು ಸಾಧಿಸುವಲ್ಲಿ ಇದು ಪ್ರಮುಖ ಪಾತ್ರ ವಹಿಸುತ್ತಿದೆ ಎಂಬ ಅಂಶದ ಬಗ್ಗೆ ನಾನು ಹೆಮ್ಮೆಪಡುತ್ತೇನೆ.

**balkrishnakasar5@gmail.com**

**ವ್ಯಾಪಕ ಮಾಹಿತಿಯಿಂದ ತುಂಬಿದೆ**

ನ್ಯೂ ಇಂಡಿಯಾ ಸಮಾಚಾರ ನಿಯತಕಾಲಿಕದ ಇತ್ತೀಚಿನ ಸಂಚಿಕೆಯು ಸಂಕ್ಷಿಪ್ತ ಸ್ವರೂಪದಲ್ಲಿ ವ್ಯಾಪಕವಾದ ಮಾಹಿತಿಗಳಿಂದ ಕೂಡಿದೆ. ನಾನು ಈ ಪತ್ರಿಕೆಯನ್ನು ಬಹಳ ಸಮಯದಿಂದ ಓದುತ್ತಿದ್ದೇನೆ, ಮತ್ತು ಅದರೊಳಗೆ ಒದಗಿಸಲಾದ ಮಾಹಿತಿಯು ನಿರಂತರವಾಗಿ ಅತ್ಯುತ್ತಮವಾಗಿದೆ ಮತ್ತು ಭವ್ಯವಾಗಿದೆ. ರಾಷ್ಟ್ರದ ಕರಾವಳಿಯ ಸಂಪತ್ತು ಮತ್ತು ಅದರ ಸಾರಿಗೆ ಸಾಮರ್ಥ್ಯಗಳ ಬಗ್ಗೆ ವಿಶೇಷ ಮಾಹಿತಿಯನ್ನು ಒಳಗೊಂಡು ಓದುಗರ ತೃಪ್ತಿಯನ್ನು ಖಾತ್ರಿಪಡಿಸಿದ್ದಕ್ಕಾಗಿ ಇಡೀ ತಂಡವನ್ನು ಪ್ರಶಂಸಿಸುತ್ತೇನೆ. ಇದು ಮಾಹಿತಿ ಸಂಗ್ರಹಣೆ ಮತ್ತು ನಿರೂಪಣೆ ಎರಡರಲ್ಲೂ ಉನ್ನತ ಮಾನದಂಡವನ್ನು ನಿಗದಿಪಡಿಸುತ್ತದೆ. ಇದರ ಇತ್ತೀಚಿನ ಪ್ರಕಟಣೆಯಲ್ಲಿ ಹಡಗು ಉದ್ಯಮದಲ್ಲಿ ಭಾರತದ ಕಡಲ ಮಹತ್ವ ಮತ್ತು ಪ್ರಾಬಲ್ಯದ ಬಗೆಗಿನ ಉಲ್ಲೇಖ ಮಾರ್ಗದರ್ಶಿಯಾಗಿ ಕಾರ್ಯನಿರ್ವಹಿಸುತ್ತದೆ. ಮಹಾನ್ ನಾಯಕ ದಿವಂಗತ ಬಾಬು ಜಗಜೀವನ್ ರಾಮ್ ಅವರ ಬಗ್ಗೆ ಅತ್ಯಂತ ಹೆಮ್ಮೆ ಮತ್ತು ಗೌರವದಿಂದ ಬರೆದ ಲೇಖನ ಈ ಪತ್ರಿಕೆಯ ಪ್ರಮುಖ ಆಕರ್ಷಣೆಯಾಗಿತ್ತು.

**ಮನಮೋಹನ್ ಬಹೇದ್ ದಧೀಚ್ ಮಾನ್**

**bahed82@gmail.com**

**ಆಳವಾದ ಪ್ರಭಾವಬೀರುವ ಅತ್ಯುತ್ತಮ ವಿಷಯ**

ನ್ಯೂ ಇಂಡಿಯಾ ಸಮಾಚಾರ ಏಪ್ರಿಲ್ 5ರ ಸಂಚಿಕೆ 'ರಾಷ್ಟ್ರೀಯ ಕಡಲ ವಿಶೇಷ' ಒಳಗೊಂಡಿತ್ತು. ಅದರ ವಸ್ತು ವಿಷಯ ಮತ್ತು ಅದರ ಪ್ರಭಾವ ಎರಡರ ದೃಷ್ಟಿಯಿಂದಲೂ ಅತ್ಯುತ್ತಮವಾಗಿತ್ತು. ಅರ್ಥಶಾಸ್ತ್ರದ ಶಿಕ್ಷಕನಾಗಿ, ಈ ವಿಶೇಷ ಸಂಪುಟದಿಂದ ನಾನು ಅಪಾರ ಪ್ರಯೋಜನವನ್ನು ಪಡೆದಿದ್ದೇನೆ. ನಾನು ಖಂಡಿತವಾಗಿಯೂ ಈ ಪ್ರಕಟಣೆಯನ್ನು ನನ್ನ ವಿದ್ಯಾರ್ಥಿಗಳಿಗೆ ಮತ್ತು ಭಾರತದ ಬಗ್ಗೆ ಸಮಗ್ರ ತಿಳಿವಳಿಕೆಯನ್ನು ಪಡೆಯಲು ಆಸಕ್ತಿ ಹೊಂದಿರುವ ಯಾರಿಗಾದರೂ ಶಿಫಾರಸು ಮಾಡುತ್ತೇನೆ.

**ಡಾ. ಜೀಜಿ ಕುಮಾರಿ ಟಿ.**

**jijikumari@gmail.com**

**ಭಾರತಕ್ಕೆ ಸಂಬಂಧಿಸಿದ ಅನೇಕ ಆಸಕ್ತಿದಾಯಕ ವಿಷಯಗಳನ್ನು ಒಳಗೊಂಡ ನಿಯತಕಾಲಿಕ**

ನಾನು ನ್ಯೂ ಇಂಡಿಯಾ ಸಮಾಚಾರ ಇ-ನಿಯತಕಾಲಿಕದ ನಿಯಮಿತ ಓದುಗನಾಗಿದ್ದೇನೆ. ಇದು ಭಾರತಕ್ಕೆ ಸಂಬಂಧಿಸಿದ ಆಸಕ್ತಿದಾಯಕ ವಿಷಯಗಳ ವ್ಯಾಪಕ ಶ್ರೇಣಿಯನ್ನು ಒಳಗೊಂಡಿರುವ ಹೆಚ್ಚು ಆಕರ್ಷಕ ಪ್ರಕಟಣೆಯಾಗಿದೆ.

**sangitadatta937@gmail.com**

**ಪ್ರಗತಿ ಮತ್ತು ಕಲ್ಯಾಣ ಯೋಜನೆಗಳ ಬಗ್ಗೆ ತಿಳಿದುಕೊಳ್ಳಲು ಅತ್ಯುತ್ತಮ ಮೂಲ**

ಭಾರತ ಸರ್ಕಾರ ಪ್ರಕಟಿಸುವ 'ನ್ಯೂ ಇಂಡಿಯಾ ಸಮಾಚಾರ' ನಿಯತಕಾಲಿಕವು ದೇಶದ ಪ್ರಗತಿ ಮತ್ತು ವಿವಿಧ ಕಲ್ಯಾಣ ಯೋಜನೆಗಳ ಬಗ್ಗೆ ಮಾಹಿತಿ ಪಡೆಯಲು ಅತ್ಯುತ್ತಮ ಮಾಧ್ಯಮವಾಗಿ ಕಾರ್ಯನಿರ್ವಹಿಸುತ್ತದೆ. ನಾನು ಈ ನಿಯತಕಾಲಿಕದ ನಿಯಮಿತ ಓದುಗ.

**ರಾಜ್ ಕಿಶೋರ್ ನಾಯಕ್**

**rajkishorenayak405@gmail.com**

Communication Address : Room No–1077, Soochna Bhawan, CGO Complex, New Delhi -110003

**E-Mail: response-nis@pib.gov.in**

ಸುದ್ದಿ ತುಣುಕುಗಳು



## ಮಹಿಳಾ ಉದ್ಯೋಗ ದರದಲ್ಲಿ ಸುಮಾರು ಎರಡು ಪಟ್ಟು ಹೆಚ್ಚಳ

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ನಾಯಕತ್ವದಲ್ಲಿ, ದೇಶಾದ್ಯಂತ ಮಹಿಳೆಯರಿಗೆ ಹೊಸ ಮತ್ತು ಸೂಕ್ತ ಅವಕಾಶಗಳು ತೆರೆದುಕೊಳ್ಳುತ್ತಿವೆ, ಇದು ಮಹಿಳಾ ಉದ್ಯೋಗದ ಸೂಚಕಗಳಲ್ಲಿ ಅಭೂತಪೂರ್ವ ಸುಧಾರಣೆಗಳಿಗೆ ಕಾರಣವಾಗುತ್ತದೆ. ಮಹಿಳಾ ಕಾರ್ಮಿಕ ಬಲದ ಭಾಗವಹಿಸುವಿಕೆಯ ಪ್ರಮಾಣವು ಕಳೆದ ಏಳು ವರ್ಷಗಳಲ್ಲಿ ಗಮನಾರ್ಹವಾಗಿ ಹೆಚ್ಚಾಗಿದೆ, ಇದು 2017-18 ರಲ್ಲಿದ್ದ ಶೇ.23.3 ರಿಂದ 2025 ರಲ್ಲಿ ಶೇ.40 ಕ್ಕೆ ಏರಿದೆ. ಇದೇ ಅವಧಿಯಲ್ಲಿ, ಮಹಿಳಾ ಕಾರ್ಮಿಕರು-ಜನಸಂಖ್ಯಾ ಅನುಪಾತವು ಶೇ.22 ರಿಂದ ಸರಿಸುಮಾರು ಶೇ.39 ಕ್ಕೆ ಏರಿದೆ. ಇದಲ್ಲದೆ, ಮಹಿಳೆಯರ ನಿರುದ್ಯೋಗ ಪ್ರಮಾಣವು ಶೇಕಡಾ 5.6 ರಿಂದ 3.1 ಕ್ಕೆ ಇಳಿದಿದೆ. ಉದ್ಯೋಗ ಬಯಸುವ ಮಹಿಳೆಯರು ಈಗ ಹೆಚ್ಚಿನ ಯಶಸ್ಸಿನೊಂದಿಗೆ ಉದ್ಯೋಗಗಳನ್ನು ಪಡೆಯುತ್ತಿದ್ದಾರೆ ಎಂಬುದನ್ನು ಇದು ಸೂಚಿಸುತ್ತದೆ. ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಸಚಿವ ಡಾ.ಮನ್ಸುಖ್ ಮಾಂಡವಿಯಾ, ಭಾರತದ ಸಾಮಾಜಿಕ ಭದ್ರತಾ ವ್ಯಾಪ್ತಿಯು ಕಳೆದ ದಶಕದಲ್ಲಿ ಸುಮಾರು ಮೂರು ಪಟ್ಟು ವಿಸ್ತರಿಸಿದೆ, 2015 ರಲ್ಲಿ ಶೇ.19 ರಿಂದ 2025 ರಲ್ಲಿ ಶೇ.64.3 ಕ್ಕೆ ಏರಿದೆ ಎಂದು ಹೇಳಿದ್ದಾರೆ. ಇದು ಕಾರ್ಮಿಕ ಕಾನೂನು ಸುಧಾರಣೆಗಳು, ಡಿಜಿಟಲ್ ಸೇರ್ಪಡೆ ಮತ್ತು ಉದ್ದೇಶಿತ ಕಲ್ಯಾಣ ಕಾರ್ಯಕ್ರಮಗಳ ಸೌಲಭ್ಯ ವಿತರಣೆಯಂತಹ ಕ್ಷೇತ್ರಗಳಲ್ಲಿನ ನಿರಂತರ ನೀತಿ ಮಧ್ಯಸ್ಥಿಕೆಗಳ ಫಲಶ್ರುತಿ ಎಂದು ಅವರು ಹೇಳಿದ್ದಾರೆ.



## ಸಮುದ್ರಾಹಾರ ರಫ್ತು ಸಾರ್ವಕಾಲಿಕ ಗರಿಷ್ಠ ಮಟ್ಟ ಮೀರಿ 72,000 ಕೋಟಿ ರೂ. ತಲುಪಿದೆ..

'2047ರ ವೇಳೆಗೆ ವಿಕಸಿತ ಭಾರತ'ದ ದೃಷ್ಟಿಕೋನವನ್ನು ಸಾಕಾರಗೊಳಿಸುವಲ್ಲಿ ಮೀನುಗಾರಿಕೆ ಕ್ಷೇತ್ರವು ಪ್ರಮುಖ ಪಾತ್ರ ವಹಿಸುತ್ತದೆ. ಇದಕ್ಕಾಗಿಯೇ ಕೇಂದ್ರ ಸರ್ಕಾರವು ಮೀನುಗಾರಿಕೆ ಮತ್ತು ಜಲಚರ ಸಾಕಣೆಯನ್ನು ಬಲಪಡಿಸಲು, ಮೌಲ್ಯ ಸರಪಳಿಗಳನ್ನು ಆಧುನೀಕರಿಸಲು ಮತ್ತು ಸಮುದ್ರಾಹಾರ ರಫ್ತು ವಿಸ್ತರಿಸಲು ನಿರಂತರವಾಗಿ ಶ್ರಮಿಸುತ್ತಿದೆ. ಈ ಪ್ರಯತ್ನಗಳ ಫಲವಾಗಿ, ಭಾರತದ ಸಮುದ್ರಾಹಾರ ರಫ್ತು ಸಾರ್ವಕಾಲಿಕ ಗರಿಷ್ಠ ಮೀರಿ 72,000 ಕೋಟಿ ರೂ.ಗಳನ್ನು ತಲುಪಿದೆ. ಪರಿಮಾಣದ ದೃಷ್ಟಿಯಿಂದ, ರಫ್ತು 19.32 ಲಕ್ಷ ಮೆಟ್ರಿಕ್ ಟನ್ ತಲುಪಿದೆ. ಹೆಪ್ಪುಗಟ್ಟಿದ ಸೀಗಡಿ ಮಾತ್ರ ಭಾರತದ ದಾಖಲೆಯ ಸಮುದ್ರಾಹಾರ ರಫ್ತು ಅಂಕಿ-ಅಂಶಗಳಿಗೆ 47,973 ಕೋಟಿ ರೂ. ಕೊಡುಗೆ ನೀಡಿದೆ.



## ಪ್ರಧಾನ ಮಂತ್ರಿ ರಾಷ್ಟ್ರೀಯ ಬಾಲ ಪುರಸ್ಕಾರ 2026ಕ್ಕೆ ನಾಮನಿರ್ದೇಶನ

ಪ್ರಧಾನ ಮಂತ್ರಿ ರಾಷ್ಟ್ರೀಯ ಬಾಲ ಪುರಸ್ಕಾರ 2026 ಕ್ಕೆ ಅರ್ಹ ಅಭ್ಯರ್ಥಿಗಳು ನಾಮನಿರ್ದೇಶನವನ್ನು ಸಲ್ಲಿಸಲು ಪ್ರೋತ್ಸಾಹಿಸಲಾಗುತ್ತಿದೆ. ನಾಮಪತ್ರ ಸಲ್ಲಿಕೆಗೆ ಜುಲೈ 31, 2026 ಕೊನೆಯ ದಿನವಾಗಿದೆ. ಇದು ದೇಶಾದ್ಯಂತದ ಮಕ್ಕಳ ಅಸಾಧಾರಣ ಸಾಧನೆಗಳನ್ನು ಗುರುತಿಸಲು ವಾರ್ಷಿಕವಾಗಿ ನೀಡಲಾಗುವ ಪ್ರತಿಷ್ಠಿತ ರಾಷ್ಟ್ರಮಟ್ಟದ ಪ್ರಶಸ್ತಿಯಾಗಿದೆ. ಶೌರ್ಯ, ಕ್ರೀಡೆ, ಸಮಾಜ ಸೇವೆ, ವಿಜ್ಞಾನ ಮತ್ತು ತಂತ್ರಜ್ಞಾನ, ಪರಿಸರ, ಕಲೆ ಮತ್ತು ಸಂಸ್ಕೃತಿ ಕ್ಷೇತ್ರಗಳಲ್ಲಿ ರಾಷ್ಟ್ರಮಟ್ಟದ ಮನ್ನಣೆ ಪಡೆದ ಮಕ್ಕಳಿಗೆ ಈ ಪ್ರಶಸ್ತಿಯನ್ನು ನೀಡಲಾಗುತ್ತದೆ. 2026 ಜುಲೈ 31ಕ್ಕೆ ಅನ್ವಯವಾಗುವಂತೆ ಭಾರತದಲ್ಲಿ ವಾಸಿಸುವ 5 ರಿಂದ 18 ವರ್ಷ ವಯಸ್ಸಿನ ಯಾವುದೇ ಭಾರತೀಯ ಪ್ರಜೆ ಈ ಪ್ರಶಸ್ತಿಗಳಿಗೆ ಅರ್ಹರಾಗಿರುತ್ತಾರೆ. ನಾಮನಿರ್ದೇಶನಗಳನ್ನು ರಾಷ್ಟ್ರೀಯ ಪ್ರಶಸ್ತಿಗಳ ಪೋರ್ಟಲ್: https://awards.gov.in ಮೂಲಕ ಪ್ರತ್ಯೇಕವಾಗಿ ಸ್ವೀಕರಿಸಲಾಗುತ್ತದೆ. ಪ್ರಶಸ್ತಿಗಳಿಗೆ ಸಲ್ಲಿಸಲಾದ ಸ್ವಯಂ-ನಾಮನಿರ್ದೇಶನಗಳು ಮತ್ತು ಶಿಫಾರಸುಗಳನ್ನೂ ಪರಿಗಣಿಸಲಾಗುತ್ತದೆ.



# ಭಾರತದಲ್ಲಿ ಬಳಕೆದಾರರ ಡೇಟಾವನ್ನು ಸಂಗ್ರಹಿಸಲು ಆನ್ಲೈನ್ ಗೇಮಿಂಗ್ ವೇದಿಕೆ

ಆನ್ಲೈನ್ ಹಣದ ಆಟಗಳ ಹೆಚ್ಚುತ್ತಿರುವ ಭೀತಿಯಿಂದ ನಾಗರಿಕರನ್ನು ರಕ್ಷಿಸುವ ಮತ್ತು ಇ-ಸ್ಪೋರ್ಟ್ಸ್ ಮತ್ತು ಆನ್ಲೈನ್ ಸಾಮಾಜಿಕ ಆಟಗಳಿಗೆ ಅನುಕೂಲಕರ ಚೌಕಟ್ಟನ್ನು ಸ್ಥಾಪಿಸುವ ಉದ್ದೇಶದಿಂದ ಸಂಸತ್ತು ಆಗಸ್ಟ್ 2025 ರಂದು ಆನ್ಲೈನ್ ಗೇಮಿಂಗ್ ಪ್ರಚಾರ ಮತ್ತು ನಿಯಂತ್ರಣ ಕಾಯ್ದೆ, 2025 ಅನ್ನು ಅಂಗೀಕರಿಸಿದೆ. ಈ ಉಪಕ್ರಮದ ಮುಂದುವರಿಕೆಯಾಗಿ, ಕೇಂದ್ರ ಸರ್ಕಾರವು ಈಗ ಮೇ 1, 2026 ರಿಂದ ಜಾರಿಗೆ ಬಂದ ಗೇಮಿಂಗ್ ಪ್ರಚಾರ ಮತ್ತು ನಿಯಂತ್ರಣ ನಿಯಮಗಳು, 2026 ಅನ್ನು ಅಧಿಸೂಚಿಸಿದೆ.

- ನಿರ್ದಿಷ್ಟ ಆನ್ ಲೈನ್ ಆಟ 'ಆನ್ ಲೈನ್ ಮನಿ ಗೇಮ್' (ಇದನ್ನು ನಿಷೇಧಿಸಲಾಗಿದೆ), 'ಆನ್ ಲೈನ್ ಸಾಮಾಜಿಕ ಆಟ' ಅಥವಾ 'ಇ-ಸ್ಪೋರ್ಟ್' ಎಂದು ಖಚಿತವಾಗಿ ನಿರ್ಧರಿಸಲು ಸ್ಪಷ್ಟ, ಪಾರದರ್ಶಕ ಮತ್ತು ಸಮಯಕ್ಕೆ ಬದ್ಧವಾದ ಕಾರ್ಯವಿಧಾನವನ್ನು ಸ್ಥಾಪಿಸಲಾಗುವುದು.
- ಆನ್ ಲೈನ್ ಸಾಮಾಜಿಕ ಆಟಗಳು ಮತ್ತು ಇ-ಕ್ರೀಡೆಗಳಿಗೆ ಡಿಜಿಟಲ್ ನಿಯಂತ್ರಕವಾಗಿ ಕಾರ್ಯನಿರ್ವಹಿಸಲು 'ಆನ್ ಲೈನ್ ಗೇಮಿಂಗ್ ಪ್ರಾಧಿಕಾರ'ವನ್ನು ರಚಿಸಲಾಗುವುದು.
- ಸಾಮಾನ್ಯವಾಗಿ, ಆನ್ ಲೈನ್ ಆಟಕ್ಕೆ ಪ್ರಾಧಿಕಾರದೊಂದಿಗೆ ನೋಂದಣಿ ಅಗತ್ಯವಿಲ್ಲ; ಆದಾಗ್ಯೂ, ಕೇಂದ್ರ ಸರ್ಕಾರವು ನಿರ್ದಿಷ್ಟ ಆಟ ಅಥವಾ ಆಟಗಳ ವರ್ಗದ ನೋಂದಣಿಯನ್ನು ಕಡ್ಡಾಯಗೊಳಿಸಿ ಅಧಿಸೂಚನೆಯನ್ನು ಹೊರಡಿಸಿದರೆ, ಅಂತಹ ನೋಂದಣಿ ಕಡ್ಡಾಯವಾಗಿರುತ್ತದೆ.
- ಇ-ಸ್ಪೋರ್ಟ್ಸ್ ನೋಂದಣಿಗೆ ಒಳಗಾಗಬೇಕಾಗುತ್ತದೆ. ರಾಷ್ಟ್ರೀಯ ಕ್ರೀಡಾ ಆಡಳಿತ ಕಾಯ್ದೆ, 2023 ರ ಅಡಿಯಲ್ಲಿ ಆಟವನ್ನು ಗುರುತಿಸಿದರೆ ಪ್ರಾಧಿಕಾರವು ಇ-ಕ್ರೀಡೆಯನ್ನು ನೋಂದಾಯಿಸುತ್ತದೆ.
- ನಿಯಮ 17 ಬಳಕೆದಾರರ ಡೇಟಾವನ್ನು ಭಾರತದೊಳಗೆ ಸಂಗ್ರಹಿಸಬೇಕು ಮತ್ತು ನಿಗದಿತ ಅವಧಿಗೆ ಸುರಕ್ಷಿತವಾಗಿ ಉಳಿಸಿಕೊಳ್ಳಬೇಕು ಎಂದು ಷರತ್ತು ವಿಧಿಸಲಾಗಿರುತ್ತದೆ
- ಪ್ರಾಧಿಕಾರವು ತನ್ನ ವೆಬ್ ಸೈಟ್ ಅಥವಾ ಮೊಬೈಲ್ ಅಪ್ಲಿಕೇಶನ್ ನಲ್ಲಿ, ಎಲ್ಲಾ ಆನ್ ಲೈನ್ ನಲ್ಲಿ ಹೆಸರುಗಳು ಮತ್ತು ವಿವರಗಳನ್ನು ಒಳಗೊಂಡಂತೆ ಪಟ್ಟಿಯನ್ನು ಸಾರ್ವಜನಿಕಗೊಳಿಸಬೇಕು.
- ಪ್ರತಿ ಗೇಮಿಂಗ್ ಕಂಪನಿಯು ಬಳಕೆದಾರರ ಕುಂದುಕೊರತೆಗಳನ್ನು ಪರಿಹರಿಸಲು ಕಾರ್ಯವಿಧಾನವನ್ನು ಸ್ಥಾಪಿಸಬೇಕು. ಕಂಪನಿಯ ಪ್ರತಿಕ್ರಿಯೆಯಿಂದ ಬಳಕೆದಾರರು ಅತೃಪ್ತರಾಗಿದ್ದರೆ, ಅವರು 30 ದಿನಗಳೊಳಗೆ ಪ್ರಾಧಿಕಾರಕ್ಕೆ ದೂರು ಸಲ್ಲಿಸಬಹುದು.



## ಆಹಾರ ಸಂಸ್ಕರಣೆಗಾಗಿ ಪಿಎಲ್ಐ ಯೋಜನೆಯ ಮೂಲಕ 3.39 ಲಕ್ಷ ಉದ್ಯೋಗ ಸೃಷ್ಟಿ

2021-22ರ ಆರ್ಥಿಕ ವರ್ಷದಿಂದ ಪ್ರಸಕ್ತ ಹಣಕಾಸು ವರ್ಷ 2026-27 ರವರೆಗೆ ಆಹಾರ ಸಂಸ್ಕರಣಾ ಉದ್ಯಮಕ್ಕೆ (ಪಿ.ಎಲ್.ಐ.ಎಸ್.ಎಫ್.ಪಿ.ಐ) ಉತ್ಪಾದನೆ ಆಧಾರಿತ ಪ್ರೋತ್ಸಾಹಕ ಯೋಜನೆಗೆ ಸರ್ಕಾರ 10,900 ಕೋಟಿ ರೂ.ಗಳನ್ನು ಹಂಚಿಕೆ ಮಾಡುತ್ತಿದೆ. ಹೆಚ್ಚಿದ ಮಾರಾಟ ಮತ್ತು ಬ್ರಾಂಡ್ ಪ್ರಚಾರವನ್ನು ಉತ್ತೇಜಿಸುವ ಮೂಲಕ ಜಾಗತಿಕ ಮಟ್ಟದಲ್ಲಿ ಪ್ರಮುಖ ಭಾರತೀಯ ಆಹಾರ ಉತ್ಪಾದನಾ ಕಂಪನಿಗಳ ಹೊರಹೊಮ್ಮುವಿಕೆಯನ್ನು ಉತ್ತೇಜಿಸುವುದು ಈ ಯೋಜನೆಯ ಉದ್ದೇಶವಾಗಿದೆ. ಈ ಯೋಜನೆಯಡಿಯಲ್ಲಿ, ಫೆಬ್ರವರಿ 2026 ರ ಹೊತ್ತಿಗೆ, 274 ಯೋಜನಾ ತಾಣಗಳಿಗೆ ಸಂಬಂಧಿಸಿದ 165 ಅರ್ಜಿಗಳನ್ನು ಅನುಮೋದಿಸಲಾಗಿದೆ, ಇದರ ಪರಿಣಾಮವಾಗಿ ಒಟ್ಟು 2,162.55 ಕೋಟಿ ರೂ. ಪ್ರೋತ್ಸಾಹಕಗಳನ್ನು ವಿತರಿಸಲಾಗಿದೆ. ಈ ಯೋಜನೆಗಳು 3.39 ಲಕ್ಷ ಉದ್ಯೋಗಗಳನ್ನು ಸೃಷ್ಟಿಸಿವೆ. ಇದಲ್ಲದೆ, ಆಹಾರ ಸಂಸ್ಕರಣೆ ಮತ್ತು ಸಂರಕ್ಷಣಾ ಸಾಮರ್ಥ್ಯವು ವಾರ್ಷಿಕ 3.4 ದಶಲಕ್ಷ ಮೆಟ್ರಿಕ್ ಟನ್ ಹೆಚ್ಚಳಕ್ಕೆ ಸಾಕ್ಷಿಯಾಗಿದೆ.



## ಭಾರತದ 99 ನೇ ರಾಮ್ಸರ್ ತಾಣವಾದ ಶೇಖಾ ಝೀಲ್ ಪಕ್ಷಿಧಾಮ

ಏಪ್ರಿಲ್ 22 ರಂದು ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವ ಭೂಪೇಂದರ್ ಯಾದವ್ ಅವರು ಉತ್ತರ ಪ್ರದೇಶದ ಅಲಿಗಢದಲ್ಲಿರುವ ಶೇಖಾ ಝೀಲ್ ಪಕ್ಷಿಧಾಮವನ್ನು ಭಾರತದ 99ನೇ ರಾಮ್ಸರ್ ತಾಣವೆಂದು ಘೋಷಿಸಿದರು. ಈ ಘೋಷಣೆಯೊಂದಿಗೆ, ಉತ್ತರ ಪ್ರದೇಶದಲ್ಲಿ ಅಂತಹ ತಾಣಗಳ ಸಂಖ್ಯೆ 12 ಕ್ಕೆ ಏರಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ, ತನ್ನ ಪರಿಸರ ವ್ಯವಸ್ಥೆಯನ್ನು ಪುನರುಜ್ಜೀವನಗೊಳಿಸುವ ಭಾರತದ ಅಭಿಯಾನ - ನಿರ್ದಿಷ್ಟವಾಗಿ ಜೌಗುಭೂಮಿ ಮತ್ತು ಪ್ರಾಣಿಗಳ ನೈಸರ್ಗಿಕ ಆವಾಸಸ್ಥಾನಗಳು, ವಿಶೇಷವಾಗಿ ಪಕ್ಷಿಗಳ ನೈಸರ್ಗಿಕ ಆವಾಸಸ್ಥಾನಗಳನ್ನು ಸಂರಕ್ಷಿಸುವ ಅದರ ಬದ್ಧತೆಯು ಮತ್ತೊಮ್ಮೆ ಜಾಗತಿಕ ಸಮುದಾಯದಿಂದ ಪ್ರಶಂಸೆ ಪಡೆದಿದೆ ಎಂದು ಕೇಂದ್ರ ಸಚಿವರು ಹೇಳಿದರು. ಶೇಖಾ ಝೀಲ್ ಮಧ್ಯ ಏಷ್ಯಾದ ಹಾರಾಟ ಮಾರ್ಗದ ಉದ್ದಕ್ಕೂ ನಿರ್ಣಾಯಕ ನಿಲುಗಡೆ ಸ್ಥಳವಾಗಿ ಕಾರ್ಯನಿರ್ವಹಿಸುತ್ತದೆ, ಚಳಿಗಾಲದಲ್ಲಿ ವಲಸೆ ಹಕ್ಕಿಗಳಾದ ಹೆಬ್ಬಾತುಗಳು, ಬಣ್ಣದ ಕೊಕ್ಕರೆಗಳು ಮತ್ತು ವಿವಿಧ ಜಾತಿಯ ಬಾತುಕೋಳಿಗಳಿಗೆ ಪ್ರಮುಖ ಆವಾಸಸ್ಥಾನವನ್ನು ಒದಗಿಸುತ್ತದೆ.





# ಆಹಾರ ಭದ್ರತೆಯ ಖಾತ್ರಿ

*ರಾಷ್ಟ್ರ ಮತ್ತು ಪ್ರಪಂಚದ ಹೆಚ್ಚುತ್ತಿರುವ ಆಹಾರ ಧಾನ್ಯದ ಅಗತ್ಯಗಳನ್ನು ಪೂರೈಸಲು ಪ್ರಾರಂಭಿಸಲಾದ ವಿಶ್ವದ ಅತಿದೊಡ್ಡ ಸಹಕಾರಿ ಧಾನ್ಯ ದಾಸ್ತಾನು ಯೋಜನೆಯು ರೈತರಿಗೆ ಪ್ರಯೋಜನವನ್ನು ನೀಡಿರುವುದು ಮಾತ್ರವಲ್ಲದೆ ದೇಶದ ಆರ್ಥಿಕತೆಯನ್ನೂ ಬಲಪಡಿಸಲಿದೆ. ಮೇ 31, 2023 ರಂದು ಸಚಿವ ಸಂಪುಟದ ಅನುಮೋದನೆ ಪಡೆದು ಫೆಬ್ರವರಿ 24, 2024 ರಂದು ಪ್ರಧಾನ ಮಂತ್ರಿಯವರು ಉದ್ಘಾಟಿಸಿದ ನಂತರ, ರೈತರ ಆದಾಯದಲ್ಲಿ ಗಮನಾರ್ಹ ಹೆಚ್ಚಳ ಸಾಧ್ಯವಾಗಿದೆ.*

ಸಹಕಾರಿ ಕ್ಷೇತ್ರದಲ್ಲಿ ವಿಶ್ವದ ಅತಿದೊಡ್ಡ ಧಾನ್ಯ ದಾಸ್ತಾನು ಯೋಜನೆಯ ಮೂಲಕ, ಪಿಎಸಿಎಸ್ (ಪ್ರಾಥಮಿಕ ಕೃಷಿ ಪತ್ತಿನ ಸಂಘಗಳು) ಮಟ್ಟದಲ್ಲಿ ಕೃಷಿ ಅಗತ್ಯಗಳನ್ನು ಪೂರೈಸಲು ಪ್ರಯತ್ನಿಸಲಾಗುತ್ತಿದೆ. ಇದು ದೇಶದ ಆಹಾರ ಭದ್ರತೆಯನ್ನು ಖಾತ್ರಿಪಡಿಸುವುದಲ್ಲದೆ, ಆಹಾರ ಧಾನ್ಯ ವ್ಯರ್ಥವಾಗುವುದನ್ನು ಕಡಿಮೆ ಮಾಡಲು ಕಾರಣವಾಗುತ್ತಿದೆ. ಇದಲ್ಲದೆ, ರೈತರು ತಮ್ಮ ಉತ್ಪನ್ನಗಳಿಗೆ ಉತ್ತಮ ಬೆಲೆಯನ್ನು ಪಡೆಯುತ್ತಿದ್ದಾರೆ. ಪ್ರಾಯೋಗಿಕ ಯೋಜನೆಯಾಗಿ ಪ್ರಾರಂಭಿಸಲಾದ ಈ ಯೋಜನೆಯನ್ನು ಅಂತರ ಸಚಿವಾಲಯ ಸಮಿತಿ, ರಾಷ್ಟ್ರಮಟ್ಟದ ಸಮನ್ವಯ ಸಮಿತಿ, ರಾಜ್ಯ ಮಟ್ಟದ ಸಹಕಾರಿ ಅಭಿವೃದ್ಧಿ ಸಮಿತಿ ಮತ್ತು ಜಿಲ್ಲಾ ಮಟ್ಟದ ಸಹಕಾರಿ ಅಭಿವೃದ್ಧಿ ಸಮಿತಿ ಸಂಯೋಜಿಸುತ್ತಿದೆ. ದೇಶದೊಳಗಿನ ಆಹಾರ ಧಾನ್ಯ ದಾಸ್ತಾನು ಸಾಮರ್ಥ್ಯದ ಕೊರತೆಯನ್ನು ಪರಿಹರಿಸಲು ಮತ್ತು ಕೃಷಿ ಮೂಲಸೌಕರ್ಯಗಳನ್ನು ನಿರ್ಮಿಸಲು, ಕೇಂದ್ರ ಸರ್ಕಾರವು 'ಸಹಕಾರಿ ಕ್ಷೇತ್ರದಲ್ಲಿ ವಿಶ್ವದ ಅತಿದೊಡ್ಡ ಧಾನ್ಯ ದಾಸ್ತಾನು ಯೋಜನೆ'ಗೆ ಅನುಮೋದನೆ ನೀಡಿತ್ತು. ಈ ಯೋಜನೆಯಡಿಯಲ್ಲಿ, ಗೋದಾಮುಗಳು, ಕೃಷಿ ಯಂತ್ರೋಪಕರಣ ಬಾಡಿಗೆ ನೀಡುವ ಕೇಂದ್ರಗಳು, ಸಂಸ್ಕರಣಾ ಘಟಕಗಳು ಮತ್ತು ನ್ಯಾಯಬೆಲೆ ಅಂಗಡಿಗಳು ಸೇರಿದಂತೆ ವಿವಿಧ ಕೃಷಿ ಮೂಲಸೌಕರ್ಯ ಸೌಲಭ್ಯಗಳನ್ನು ಕೃಷಿ ಮೂಲಸೌಕರ್ಯ ನಿಧಿ (ಎಐಎಫ್), ಕೃಷಿ ಮಾರುಕಟ್ಟೆ ಮೂಲಸೌಕರ್ಯ ಯೋಜನೆ (ಎಎಂಐ), ಕೃಷಿ ಯಾಂತ್ರೀಕರಣದ ಉಪ-ಅಭಿಯಾನ (ಎಸ್ಎಂಎಎಂ) ಮತ್ತು ಪ್ರಧಾನ ಮಂತ್ರಿ ಸೂಕ್ಷ್ಮ ಆಹಾರ ಸಂಸ್ಕರಣಾ ಉದ್ಯಮಗಳ ಔಪಚಾರಿಕೀಕರಣ (ಪಿಎಂಎಫ್ಎಂಇ) ಯೋಜನೆಯ ಹಣವನ್ನು ಬಳಸಿಕೊಂಡು ಪಿಎಸಿಎಸ್ ಮತ್ತು ಇತರ ಸಹಕಾರಿ ಸಂಘಗಳ ಮಟ್ಟದಲ್ಲಿ ನಿರ್ಮಿಸಲಾಗುತ್ತಿದೆ. ಎಐಎಫ್ ಯೋಜನೆಯಡಿಯಲ್ಲಿ, ಗೋದಾಮುಗಳ ನಿರ್ಮಾಣಕ್ಕಾಗಿ ತೆಗೆದುಕೊಂಡ ಸಾಲದ ಮೇಲೆ ಪಿಎಸಿಎಸ್ ಗೆ ಬಡ್ಡಿ ಸಹಾಯಧನದ ಪ್ರಯೋಜನವನ್ನು ನೀಡಲಾಗುತ್ತದೆ ಮತ್ತು ಎಎಂಐ ಯೋಜನೆಯಡಿ, ಆಹಾರ

*ಈ ಯೋಜನೆಯು ಇದರಲ್ಲಿ ಭಾಗಿಯಾಗುವ ಸಹಕಾರಿ ಸಂಸ್ಥೆಗಳಿಗೆ ಆಗುವ ಆರ್ಥಿಕ ಹೊರೆಯನ್ನು ತಗ್ಗಿಸಲು ನಬಾರ್ಡ್ ನ ವಿಶೇಷ ಮರು ಹಣಕಾಸು ಯೋಜನೆಯನ್ನೂ ಬಳಸಿಕೊಳ್ಳುತ್ತದೆ. ಎ.ಐ.ಎಫ್. ಅಡಿಯಲ್ಲಿ ಲಭ್ಯವಿರುವ ಶೇ.3ರ ಬಡ್ಡಿ ಸಬ್ಸಿಡಿಯೊಂದಿಗೆ ಸಂಯೋಜಿಸಿದಾಗ, ವಿಶ್ವದ ಅತಿದೊಡ್ಡ ಧಾನ್ಯ ದಾಸ್ತಾನು ಯೋಜನೆಯಡಿಯಲ್ಲಿ ಪಿ.ಎ.ಸಿ.ಎಸ್. ಗಾಗಿ ಪರಿಣಾಮಕಾರಿ ಸಾಲ ಬಡ್ಡಿ ದರವನ್ನು ಶೇ.1 ಕ್ಕೆ ಇಳಿಸಲಾಗುತ್ತದೆ.*

## ಧಾನ್ಯ ದಾಸ್ತಾನಿಗಾಗಿ ಎಎಂಐ ಯೋಜನೆಗೆ ತಿದ್ದುಪಡಿ

ಮಾರ್ಜಿನ್ ಹಣದ ಅಗತ್ಯ ಶೇ.20 ರಿಂದ ಶೇ.10 ಕ್ಕೆ ಇಳಿಕೆ.

**ಬಯಲು ಪ್ರದೇಶಗಳು**

**7,000**

ರೂ.ಪ್ರತಿ ಮೆಟ್ರಿಕ್ ಟನ್ ಗೆ: ನಿರ್ಮಾಣ ವೆಚ್ಚವನ್ನು ಪ್ರತಿ ಮೆಟ್ರಿಕ್ ಟನ್ ಗೆ 3,000-3,500 ರೂಪಾಯಿಗಳಿಂದ ಪರಿಷ್ಕರಿಸಲಾಗಿದೆ.

**ಈಶಾನ್ಯ ಪ್ರದೇಶ**

**8,000**

ರೂ. ಪ್ರತಿ ಮೆಟ್ರಿಕ್ ಟನ್ ಗೆ.: ನಿರ್ಮಾಣ ವೆಚ್ಚವನ್ನು ಪ್ರತಿ ಮೆಟ್ರಿಕ್ ಟನ್ ಗೆ 4,000 ರೂ.ಗಳಿಂದ ಹೆಚ್ಚಿಸಲಾಗಿದೆ.

- ಪಿಎಸಿಎಸ್ ಸಬ್ಸಿಡಿಯನ್ನು ಶೇ.25 ರಿಂದ ಶೇ.33.33 ಕ್ಕೆ (ನಿರ್ದಿಷ್ಟವಾಗಿ, ಬಯಲು ಪ್ರದೇಶಗಳಿಗೆ ಪ್ರತಿ ಮೆಟ್ರಿಕ್ ಟನ್ ಗೆ 875 ರೂ.ಗಳಿಂದ 2,333 ರೂ.ಗೆ ಮತ್ತು ಈಶಾನ್ಯ ರಾಜ್ಯಗಳಿಗೆ ಪ್ರತಿ ಮೆಟ್ರಿಕ್ ಟನ್ ಗೆ 1,333.33 ರೂ.ಗಳಿಂದ 2,666 ರೂ.ಗೆ) ಹೆಚ್ಚಿಸಲಾಗಿದೆ.
- ಆಂತರಿಕ ರಸ್ತೆಗಳು, ತೂಕಸೇತುವೆಗಳು, ಆವರಣ ಗೋಡೆಗಳು ಮುಂತಾದ ಮೂಲಸೌಕರ್ಯ ಘಟಕಗಳಿಗಾಗಿ ಪಿಎಸಿಎಸ್ ಗೆ ಒಟ್ಟು ಸ್ವೀಕಾರಾರ್ಹ ಸಬ್ಸಿಡಿಯ ಮೂರನೇ ಒಂದು ಭಾಗಕ್ಕೆ ಸಮಾನವಾದ ಹೆಚ್ಚುವರಿ ಸಬ್ಸಿಡಿಯನ್ನು ಒದಗಿಸಲು ಅವಕಾಶ ಕಲ್ಪಿಸಲಾಗಿದೆ.





### ಯೋಜನೆಯಡಿ ಸ್ಥಾಪಿಸಲಾಗುತ್ತಿರುವ ಸೌಲಭ್ಯಗಳು...

- ಪಿಎಸಿಎಸ್/ಸಹಕಾರಿ ಸಂಘಗಳಲ್ಲಿ ಗ್ರಾಮ ಮಟ್ಟದಲ್ಲಿ ಗೋದಾಮುಗಳು
- ಯಂತ್ರೋಪಕರಣಗಳನ್ನು ಬಾಡಿಗೆ ನೀಡುವ ಕೇಂದ್ರಗಳು
- ಸಂಸ್ಕರಣಾ ಘಟಕಗಳು
- ನ್ಯಾಯಬೆಲೆ ಅಂಗಡಿಗಳು (ಪಡಿತರ ಅಂಗಡಿಗಳು)

## ಧಾನ್ಯ ದಾಸ್ತಾನು ಯೋಜನೆಯ ಪ್ರಗತಿ

**560** ಸಹಕಾರಿ ಸಂಘಗಳನ್ನು ಧಾನ್ಯ ದಾಸ್ತಾನು ಯೋಜನೆಯಡಿ ಗುರುತಿಸಲಾಗಿದೆ.

**120** ಗೋದಾಮುಗಳನ್ನು ಸಹಕಾರಿ ಸಂಘಗಳಲ್ಲಿ ನಿರ್ಮಿಸಲಾಗಿದೆ.

**426** ಡಿಪಿಆರ್ ಗಳನ್ನು ಗೋದಾಮುಗಳ ನಿರ್ಮಾಣಕ್ಕಾಗಿ ಸಲ್ಲಿಸಲಾಗಿದೆ.

**72,702** ಮೆಟ್ರಿಕ್ ಟನ್ ಸಂಗ್ರಹ ಸಾಮರ್ಥ್ಯವನ್ನು ಇದರ ಪರಿಣಾಮದಿಂದ ಸೃಷ್ಟಿಸಲಾಗಿದೆ.

*(ಗಮನಿಸಿ: ಅಂಕಿಅಂಶಗಳು ಜನವರಿ 20, 2026 ರಂತೆ.)*

### ಧಾನ್ಯ ದಾಸ್ತಾನು ಕೇಂದ್ರಗಳನ್ನು ಸ್ಥಾಪಿಸುವ ಪ್ರಕ್ರಿಯೆ

- ರಾಜ್ಯ ಸಹಕಾರ ಇಲಾಖೆಯು ಪಿಎಸಿಎಸ್/ಸಹಕಾರ ಸಂಘಗಳನ್ನು ಗುರುತಿಸುತ್ತದೆ.
- ನಿರ್ದಿಷ್ಟ ಸ್ಥಳದ ಆಧಾರದ ಮೇಲೆ ಡಿಪಿಆರ್ (ವಿಸ್ತೃತ ಯೋಜನಾ ವರದಿ) ತಯಾರಿಸಲಾಗುತ್ತದೆ.
- ನಿಗದಿತ ವಿನ್ಯಾಸ ಮತ್ತು ಗುಣಮಟ್ಟದ ಮಾನದಂಡಗಳಿಗೆ ಅನುಗುಣವಾಗಿ ನಿರ್ಮಾಣ ಕಾರ್ಯ ಪ್ರಾರಂಭವಾಗುತ್ತದೆ.
- ಗೋದಾಮುಗಳು ಸುಮಾರು 6 ತಿಂಗಳಲ್ಲಿ ಪೂರ್ಣಗೊಳ್ಳುತ್ತದೆ.

**9** ವರ್ಷಗಳು

**ಈ ಅವಧಿಗೆ ಬಾಡಿಗೆ ಖಾತರಿಯನ್ನು ಭಾರತೀಯ ಆಹಾರ ನಿಗಮ (ಎಫ್.ಸಿ.ಐ) ಒದಗಿಸುತ್ತದೆ.**

ಕಡಿಮೆ ಬಡ್ಡಿ

**(ಸುಮಾರು ಶೇ.1)**

ಸಾಲಗಳು ಕಡಿಮೆ ಬಡ್ಡಿದರದಲ್ಲಿ ಲಭ್ಯವಿದ್ದು, ಶೇ.33ರವರೆಗೆ ಸಬ್ಸಿಡಿ ನೀಡುತ್ತವೆ.






ಧಾನ್ಯ ಸಂಗ್ರಹಣೆ ನಿರ್ಮಾಣಕ್ಕೆ ಶೇ.33ರಷ್ಟು ಸಬ್ಸಿಡಿ ನೀಡಲಾಗುತ್ತದೆ.

ಕೃಷಿ ಮತ್ತು ರೈತರ ಕಲ್ಯಾಣ ಇಲಾಖೆಯು ಎಐಎಫ್ ಯೋಜನೆಯಡಿ ಪಿಎಸಿಎಸ್ ಗಳಿಗೆ ಸಾಲ ಖಾತರಿ ಅವಧಿಯನ್ನು 2+5 ವರ್ಷಗಳಿಂದ 2+8 ವರ್ಷಗಳಿಗೆ ವಿಸ್ತರಿಸಿದೆ. ಆಹಾರ ಧಾನ್ಯ ದಾಸ್ತಾನು ಮೂಲಸೌಕರ್ಯದ ಮಹತ್ವವನ್ನು ಒತ್ತಿ ಹೇಳಿದ ಕೇಂದ್ರ ಸಹಕಾರ ಸಚಿವರಾದ ಅಮಿತ್ ಶಾ, ಮುಂಬರುವ ದಿನಗಳಲ್ಲಿ ದೇಶದ ಆಹಾರ ಧಾನ್ಯ ಶೇಖರಣಾ ಸಾಮರ್ಥ್ಯವನ್ನು ಸುಮಾರು ಮೂರು ಪಟ್ಟು ಹೆಚ್ಚಿಸಬೇಕಾಗಿದೆ, ಅದರಲ್ಲಿ ಎರಡು ಪಟ್ಟು ವಿಸ್ತರಣೆಯನ್ನು ಸಹಕಾರಿ ವಲಯವು ಕೈಗೊಳ್ಳಬೇಕು ಎಂದು ಹೇಳಿದರು. ಇದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ ಮತ್ತು ಇದನ್ನು ಕೇವಲ ಪಿಎಸಿಎಸ್ ಗೆ ಬಿಡಬಾರದು ಎಂದು ಅವರು ಹೇಳಿದರು. ತಾಲ್ಲೂಕು ಮಟ್ಟದ ಸಹಕಾರಿ ಡೈರಿಗಳು, ರಾಜ್ಯ ಮಟ್ಟದ ಮಾರುಕಟ್ಟೆ ಒಕ್ಕೂಟಗಳು, ಜಿಲ್ಲಾ ಸಹಕಾರಿ ಬ್ಯಾಂಕುಗಳು ಹಣಕಾಸು ಮೂಲಕ ಮತ್ತು ಜಿಲ್ಲಾ ಮಾರಾಟ-ಖರೀದಿ ಒಕ್ಕೂಟಗಳು ದೊಡ್ಡ ಗೋದಾಮುಗಳನ್ನು ನಿರ್ಮಿಸಬೇಕು. ಶೇಕಡಾ 70 ರಷ್ಟು ಆಹಾರ ಧಾನ್ಯಗಳನ್ನು ಉತ್ತರ ಭಾರತ, ಪಂಜಾಬ್ ಮತ್ತು ಹರಿಯಾಣದಿಂದ ಸಂಗ್ರಹಿಸಲಾಗುತ್ತದೆ. ಸಂಗ್ರಹಣೆ ಮತ್ತು ವಿತರಣೆಯನ್ನು ಪ್ರಾದೇಶಿಕವಾಗಿ ಹೊಂದಿಸಿದರೆ, ಸಾರಿಗೆ ವೆಚ್ಚವನ್ನು ಕನಿಷ್ಠ 30-40 ಪ್ರತಿಶತದಷ್ಟು ಕಡಿಮೆ ಮಾಡಬಹುದು ಎಂದು ಅಮಿತ್ ಶಾ ಅವರು ಹೇಳಿದರು. ●

ಜನಗಣತಿ
2027
ಮುಖಪುಟ ಲೇಖನ

ಭಾರತದ ಜನಗಣತಿ

# ಪ್ರಗತಿ ಮತ್ತು ಅಭಿವೃದ್ಧಿಗೆ ಭದ್ರ ಬುನಾದಿ



*ಭಾರತದಲ್ಲಿ, ಜನಗಣತಿಯು ಕೇವಲ ಜನಸಂಖ್ಯೆಯ ಎಣಿಕೆಯಲ್ಲ; ಬದಲಾಗಿ, ಇದು ದೇಶದ ಒಟ್ಟಾರೆ ನೀತಿ-ರೂಪಿಸುವ ಚೌಕಟ್ಟಿನ ಬೆನ್ನೆಲುಬಾಗಿ ಕಾರ್ಯನಿರ್ವಹಿಸುತ್ತದೆ. ಸಾಮಾನ್ಯವಾಗಿ ಪ್ರತಿ ದಶಕದ ಆರಂಭದಲ್ಲಿ ನಡೆಸಲಾಗುವ ಈ ದಶವಾರ್ಷಿಕ ಜನಗಣತಿಯು, ಈ ಬಾರಿ ಕೋವಿಡ್-19 ಕಾರಣದಿಂದಾಗಿ ವಿಳಂಬವಾಗಿ ಏಪ್ರಿಲ್ 2026 ರಲ್ಲಿ ಪ್ರಾರಂಭವಾಗಿದ್ದು, ಈಗ 'ವಿಕಸಿತ ಭಾರತ'ಕ್ಕೆ ಭದ್ರ ಬುನಾದಿ ಹಾಕಲು ಸಜ್ಜಾಗಿದೆ. ಆಧುನಿಕ ತಂತ್ರಜ್ಞಾನ ಮತ್ತು ಡಿಜಿಟಲ್ ಕ್ರಾಂತಿಯನ್ನು ಬಳಸಿಕೊಳ್ಳುತ್ತಿರುವ ಈ ಪ್ರಕ್ರಿಯೆಯು—ಸ್ವಯಂ-ಗಣತಿ ಮತ್ತು ಜಾತಿ ಗಣತಿಯನ್ನು ಒಳಗೊಂಡಿದ್ದು—ದೇಶದ ಭವಿಷ್ಯದ ಹಾದಿಯನ್ನು ನಿರ್ಧರಿಸಲಿದೆ. 150 ವರ್ಷಗಳ ಪರಂಪರೆಯನ್ನು ಉಳಿಸಿಕೊಂಡು ಬರುತ್ತಿರುವ 'ಜನಗಣತಿ 2027', ಈ 'ಅಮೃತ ಕಾಲ'ದಲ್ಲಿ ದೇಶದ ಭವಿಷ್ಯದ ರೂಪುರೇಷೆಗಳನ್ನು ವ್ಯಾಖ್ಯಾನಿಸಲಿದೆ—ಇದು ಪ್ರತಿಯೊಬ್ಬ ನಾಗರಿಕನ ವಿವರಗಳು, ಸಹಭಾಗಿತ್ವ ಮತ್ತು ಪ್ರಗತಿಯನ್ನು ದಾಖಲಿಸಲಿದೆ. ಇದು ಕೇವಲ ಒಂದು ಎಣಿಕೆಯಲ್ಲ; ಇದು 'ಆತ್ಮನಿರ್ಭರ ಭಾರತ'ಕ್ಕಾಗಿ ಅಭಿವೃದ್ಧಿಯ ಹೊಸ ಮತ್ತು ಪರಿವರ್ತನೆಯ ಕಥೆಯನ್ನು ಬರೆಯಲು ಸಿದ್ಧವಾಗಿದೆ.*

ಭಾರತದ ಜನಗಣತಿ 2027 ಕೇವಲ ಅಂಕಿಅಂಶಗಳ ಪ್ರಕ್ರಿಯೆಗಿಂತ ಮಿಗಿಲಾದದ್ದು; ಇದು ದೇಶದ ಭವಿಷ್ಯದ ಪಥವನ್ನು ನಿರ್ಧರಿಸುವ ಒಂದು ಸಮಗ್ರ ರಾಷ್ಟ್ರೀಯ ಕಾರ್ಯವಾಗಿದೆ. ಇದು ರಾಷ್ಟ್ರಕ್ಕೆ ತನ್ನನ್ನು ತಾನು ನೋಡಿಕೊಳ್ಳುವ ಒಂದು ಕನ್ನಡಿಯಂತೆ ಸೇವೆ ಸಲ್ಲಿಸುತ್ತದೆ. ಇದು ರಾಷ್ಟ್ರದ ಆತ್ಮವನ್ನು ಅರ್ಥಮಾಡಿಕೊಳ್ಳಲು ಮತ್ತು ಅದರ ಭವಿಷ್ಯವನ್ನು ರೂಪಿಸಲು ಉದ್ದೇಶಿಸಿರುವ ಒಂದು ಸ್ಮರಣೀಯ ಪ್ರಯತ್ನವಾಗಿದೆ. ಭಾರತವು ತನ್ನನ್ನು ಹೊಸ ದೃಷ್ಟಿಕೋನದಿಂದ ನೋಡಲು—ಅಂದರೆ ತನ್ನ ಮಾನವ ಬಂಡವಾಳ, ವೈವಿಧ್ಯತೆ, ಸವಾಲುಗಳು ಮತ್ತು ಅಪಾರ ಸಾಮರ್ಥ್ಯವನ್ನು ನಿರ್ಣಯಿಸಲು ಇದು ಒಂದು ಅನನ್ಯ ಅವಕಾಶವನ್ನು ಒದಗಿಸುತ್ತದೆ. ಆದ್ದರಿಂದ, ಜನಗಣತಿಯು ಕೇವಲ ದತ್ತಾಂಶಗಳ ಸಂಗ್ರಹವೂ ಅಲ್ಲ ಅಥವಾ ಹತ್ತು ವರ್ಷಕ್ಕೊಮ್ಮೆ ನಡೆಸುವ ಕೇವಲ ಒಂದು ಔಪಚಾರಿಕ ಸಂಪ್ರದಾಯವೂ ಅಲ್ಲ; ಬದಲಾಗಿ ಇದು ರಾಷ್ಟ್ರದ ಶಕ್ತಿ ಮತ್ತು ಸಾಮರ್ಥ್ಯಗಳ ನಿಜವಾದ ಪ್ರತಿಬಿಂಬವಾಗಿದೆ. ಇದು ಭವಿಷ್ಯದ ಅಡಿಪಾಯವನ್ನು ಹಾಕುವ ಪ್ರಬಲ ಸಾಧನವಾಗಿದೆ. ಈ ಸಂದರ್ಭದಲ್ಲಿ—ಭಾರತವು ಅಭಿವೃದ್ಧಿಯ ಪಥದಲ್ಲಿ ವೇಗವಾಗಿ ಮುನ್ನಡೆಯುತ್ತಿರುವಾಗ ಮತ್ತು '2047 ರ ವೇಳೆಗೆ ವಿಕಸಿತ ಭಾರತ'ದ ಬೃಹತ್ ಗುರಿ ನಮ್ಮ ಮುಂದಿರುವಾಗ—ಜನಗಣತಿ 2027 ರ ಮಹತ್ವವು ಇನ್ನಷ್ಟು ಆಳವಾಗುತ್ತದೆ. ಒಟ್ಟಾರೆಯಾಗಿ, ಜನಗಣತಿಯು ಅತ್ಯುನ್ನತ ರಾಷ್ಟ್ರೀಯ ಪ್ರಾಮುಖ್ಯತೆಯ ಕಾರ್ಯವಾಗಿದೆ; ಇದು ಸೃಷ್ಟಿಸುವ ದತ್ತಾಂಶವು ಮುಂಬರುವ ವರ್ಷಗಳಲ್ಲಿ ರಾಷ್ಟ್ರೀಯ ನೀತಿಗಳು ಮತ್ತು ಕಾರ್ಯಕ್ರಮಗಳನ್ನು ರೂಪಿಸಲು ನಿರ್ಣಾಯಕ ಅಡಿಪಾಯವಾಗಿ ಕಾರ್ಯನಿರ್ವಹಿಸುತ್ತದೆ, ಆ ಮೂಲಕ ಮುಂದಿನ ದಶಕಗಳ ಯೋಜನೆಗಳಿಗೆ ಹೊಸ ಆಯಾಮಗಳನ್ನು ಮತ್ತು ಆಕಾರವನ್ನು ನೀಡುತ್ತದೆ.

## ನೀತಿ ರಚನೆಗೆ ಒಂದು ದೃಢವಾದ ಅಡಿಪಾಯ

1951 ರಲ್ಲಿ ಸ್ವಾತಂತ್ರ್ಯಾನಂತರದ ದೇಶದ ಮೊದಲ ಜನಗಣತಿಯಲ್ಲಿ ಭಾರತದ ಮೊದಲ ಗೃಹ ಸಚಿವ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರು ರಾಷ್ಟ್ರಕ್ಕೆ ಜನಗಣತಿಯ



# ಜನಗಣತಿ: ಒಂದು ಸುದೀರ್ಘ ಮತ್ತು ಭವ್ಯ ಪರಂಪರೆ

*ಭಾರತವು ತನ್ನ ಮೊದಲ ಏಕಕಾಲಿಕ ಜನಗಣತಿಯನ್ನು 1881ರಲ್ಲಿ ನಡೆಸಿತು. ಆದಾಗ್ಯೂ, ದೇಶದಲ್ಲಿ ಜನಗಣತಿಯ ಆರಂಭಿಕ ಉಲ್ಲೇಖಗಳು ಕೌಟಿಲ್ಯನ 'ಅರ್ಥಶಾಸ್ತ್ರ' ಮತ್ತು ಅಬುಲ್ ಫಜಲ್ ನ 'ಐನ್-ಇ-ಅಕ್ಬರಿ' ಮುಂತಾದ ಪ್ರಾಚೀನ ಗ್ರಂಥಗಳಲ್ಲಿ ಕಂಡುಬರುತ್ತವೆ...*

- ಭಾರತವು ಜನಗಣತಿಯನ್ನು ನಡೆಸುವ ಸುದೀರ್ಘ ಮತ್ತು ಭವ್ಯ ಪರಂಪರೆಯನ್ನು ಹೊಂದಿದೆ.
- ಜನಗಣತಿಯ ಬಗ್ಗೆ ಅತ್ಯಂತ ಹಳೆಯ ಉಲ್ಲೇಖವು ಕೌಟಿಲ್ಯನ 'ಅರ್ಥಶಾಸ್ತ್ರ'ದಲ್ಲಿ (ಕ್ರಿ. ಪೂ. 321-296) ಕಂಡುಬರುತ್ತದೆ.
- ದೇಶದಲ್ಲಿ ಮೊದಲ ಬಾರಿಗೆ ವ್ಯವಸ್ಥಿತ ಮತ್ತು ಆಧುನಿಕ ಜನಗಣತಿಯನ್ನು ಪ್ರಸ್ತುತ ವೈಜ್ಞಾನಿಕ ರೂಪದಲ್ಲಿ, 1865 ಮತ್ತು 1872ರ ನಡುವೆ ಏಕಕಾಲಿಕವಲ್ಲದ ರೀತಿಯಲ್ಲಿ ನಡೆಸಲಾಯಿತು.

## ಸ್ವಾತಂತ್ರ್ಯೋತ್ತರ ಜನಗಣತಿಗಳು (1951-2011)

**1951** ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ದೊರೆತ ನಂತರದ ಮೊದಲ ಜನಗಣತಿಯನ್ನು ನಡೆಸಲಾಯಿತು.





ಅಂದಿನಿಂದ, ಜನಗಣತಿಯನ್ನು ನಿರಂತರವಾಗಿ ಪ್ರತಿ 10 ವರ್ಷಗಳಿಗೊಮ್ಮೆ ನಡೆಸಿಕೊಂಡು ಬರಲಾಗುತ್ತಿತ್ತು. ಈ ಸರಣಿಯು **2011** ರವರೆಗೆ ಮುಂದುವರಿಯಿತು.

ಕೋವಿಡ್-19 ಸಾಂಕ್ರಾಮಿಕ ರೋಗದ ಕಾರಣದಿಂದಾಗಿ, 2021 ಕ್ಕೆ ನಿಗದಿಯಾಗಿದ್ದ ಜನಗಣತಿಯನ್ನು ನಡೆಸಲು ಸಾಧ್ಯವಾಗಲಿಲ್ಲ; ಅದನ್ನು ಈಗ ಕೈಗೆತ್ತಿಕೊಳ್ಳಲಾಗಿದೆ.

ಮಹತ್ವವನ್ನು ಸ್ಪಷ್ಟಪಡಿಸಿದರು. "ಜನಗಣತಿಯು ಸಾಂಸ್ಥಿಕವಾಗಿ ಸುದೀರ್ಘ ಇತಿಹಾಸವನ್ನು ಹೊಂದಿದೆ; ಇದರ ಕೆಲಸ ಕೇವಲ ಜನರನ್ನು ಎಣಿಸುವುದು ಮಾತ್ರವಲ್ಲ, ಬದಲಾಗಿ ನಮ್ಮ ಅನೇಕ ಆಡಳಿತಾತ್ಮಕ ನೀತಿಗಳನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸುವ ಮಾಹಿತಿಯನ್ನು ಹೊರತೆಗೆಯುವುದು ಕೂಡ ಆಗಿದೆ. ಈ ಪ್ರಕ್ರಿಯೆಯ ಮೂಲಕ ಸಂಗ್ರಹಿಸಲಾದ ಮಾಹಿತಿಯು ಅಪಾರ ಸಾಮಾಜಿಕ ಮಹತ್ವದ ಅಮೂಲ್ಯವಾದ ವೈಜ್ಞಾನಿಕ ದತ್ತಾಂಶವನ್ನು ನೀಡುತ್ತದೆ. ಇದು ಕೇವಲ ಆರ್ಥಿಕ ನೀತಿಗಳ ಕ್ಷೇತ್ರದಲ್ಲಲ್ಲದೆ ಇತರ ವಿಷಯಗಳಲ್ಲಿಯೂ ಸಹ ಉಪಯುಕ್ತ ಮಾರ್ಗದರ್ಶನ ನೀಡುತ್ತದೆ. ಜನಸಂಖ್ಯಾ ಸಿದ್ಧಾಂತವು ಸ್ವತಃ ಅರ್ಥಶಾಸ್ತ್ರದ ಒಂದು ಆಕರ್ಷಕ ಆಯಾಮವಾಗಿದೆ. ಈ ಸಿದ್ಧಾಂತಗಳನ್ನು ಪರೀಕ್ಷಿಸಲು ಮತ್ತು ಅವುಗಳೊಂದಿಗೆ ವಾಸ್ತವಿಕ ಸಂಬಂಧವನ್ನು ಸ್ಥಾಪಿಸಲು ಜನಗಣತಿಯು ನಮಗೆ ಸಹಾಯ ಮಾಡುತ್ತದೆ." ಎಂದು ಅವರು ಹೇಳಿದ್ದರು.

ವಾಸ್ತವವಾಗಿ, ಜನಗಣತಿಯಿಂದ ಪಡೆದ ದತ್ತಾಂಶವು ಸರ್ಕಾರದ ನೀತಿಗಳ ಅಡಿಪಾಯವಾಗಿ ಕಾರ್ಯನಿರ್ವಹಿಸುತ್ತದೆ. ಶಿಕ್ಷಣ, ಕೌಶಲ್ಯ ಅಭಿವೃದ್ಧಿ, ಆರೋಗ್ಯ ರಕ್ಷಣೆ, ಉದ್ಯೋಗ ಮತ್ತು ಗ್ರಾಮೀಣ-ನಗರ ಅಭಿವೃದ್ಧಿಗೆ ಸಂಬಂಧಿಸಿದ ನೀತಿಗಳನ್ನು ರೂಪಿಸುವಲ್ಲಿ ಮತ್ತು ಜಾರಿಗೆ ತರುವಲ್ಲಿ ಜನಗಣತಿ ದತ್ತಾಂಶವು ಕೇವಲ ನಿಖರವೆಂದು ಮಾತ್ರವಲ್ಲದೆ ಅತ್ಯಂತ ಪರಿಣಾಮಕಾರಿ ಎಂದು ಸಾಬೀತಾಗಿದೆ. ಜನಗಣತಿಯು ಸಾಮಾಜಿಕ ಸಾಮರಸ್ಯವನ್ನು ಬಲಪಡಿಸಲು ಮತ್ತು ನ್ಯಾಯವನ್ನು ಉತ್ತೇಜಿಸಲು ಒಂದು ಪ್ರಮುಖ ಸಾಧನವಾಗಿ ಕಾರ್ಯನಿರ್ವಹಿಸುತ್ತದೆ. ಅಭಿವೃದ್ಧಿಯ ಓಟದಲ್ಲಿ ಹಿಂದೆ ಬಿದ್ದಿರುವ ಸಮಾಜದ ವರ್ಗಗಳನ್ನು ಇದು ಗುರುತಿಸುತ್ತದೆ. ಬಡತನ ನಿರ್ಮೂಲನೆ, ಮಹಿಳಾ ಸಬಲೀಕರಣ ಮತ್ತು ಗ್ರಾಮೀಣ ಅಭಿವೃದ್ಧಿಯಂತಹ ವಿವಿಧ ಸರ್ಕಾರಿ ಯೋಜನೆಗಳು ಈ ದತ್ತಾಂಶದಿಂದ ರೂಪಿತವಾಗುವುದರಿಂದ ಅವು ಹೆಚ್ಚು ಗುರಿತಲುಪುವ ಮತ್ತು ಪರಿಣಾಮಕಾರಿಯಾಗುತ್ತವೆ. ಈ ಪ್ರಕ್ರಿಯೆಯು ಅಭಿವೃದ್ಧಿಯ ಬೆಳಕು ಸಮಾಜದ ಕಟ್ಟಕಡೆಯ ವ್ಯಕ್ತಿಯನ್ನೂ ತಲುಪುವುದನ್ನು ಖಚಿತಪಡಿಸುತ್ತದೆ.

ಆಧುನಿಕ ಯುಗದಲ್ಲಿ ಅಂಕಿಅಂಶಗಳ ಪ್ರಾಮುಖ್ಯತೆಯನ್ನು ಎಲ್ಲರೂ ಒಪ್ಪಿಕೊಂಡಿದ್ದಾರೆ. ಯಾವುದೇ ರಾಷ್ಟ್ರದ ಪ್ರಸ್ತುತ ವಾಸ್ತವ ಮತ್ತು ಭವಿಷ್ಯವನ್ನು ನಿರ್ಧರಿಸುವಲ್ಲಿ ದತ್ತಾಂಶವು ನಿರ್ಣಾಯಕ ಪಾತ್ರ ವಹಿಸುತ್ತದೆ. ನಮ್ಮ ದೈನಂದಿನ ಜೀವನದಲ್ಲಿ ದತ್ತಾಂಶವು ಬಹಳ ಮುಖ್ಯವಾಗಿದೆ.

ಸರ್ಕಾರದ ನೀತಿ ನಿರೂಪಣೆಯಿಂದ ಹಿಡಿದು ರಾಷ್ಟ್ರೀಯ ಅಭಿವೃದ್ಧಿ ಉಪಕ್ರಮಗಳು ಮತ್ತು ಸಾರ್ವಜನಿಕ ಕಲ್ಯಾಣ

## ಉದ್ದೇಶ, ಮಹತ್ವ ಮತ್ತು ಉಪಯುಕ್ತತೆ

**ಉದ್ದೇಶ**

ಗ್ರಾಮ, ಪಟ್ಟಣ ಮತ್ತು ವಾರ್ಡ್ ಮಟ್ಟದಲ್ಲಿ ಜನಗಣತಿಯು ಪ್ರಾಥಮಿಕ ದತ್ತಾಂಶದ ಅತಿದೊಡ್ಡ ಮೂಲವಾಗಿ ಕಾರ್ಯನಿರ್ವಹಿಸುತ್ತದೆ. ಇದು ಆಡಳಿತದ ಪ್ರಮುಖ ಸಾಧನವಾಗಿದ್ದು, ಮುಂಬರುವ ದಶಕದ ಭಾರತದ ಅಭಿವೃದ್ಧಿ ಯೋಜನೆಗೆ ಅಡಿಪಾಯವನ್ನು ಒದಗಿಸುತ್ತದೆ.

**ಮಹತ್ವ**

ಜನಸಂಖ್ಯಾಶಾಸ್ತ್ರ, ಅರ್ಥಶಾಸ್ತ್ರ, ಮಾನವಶಾಸ್ತ್ರ, ಸಮಾಜಶಾಸ್ತ್ರ, ಅಂಕಿಅಂಶ ಮತ್ತು ಇತರ ಅನೇಕ ವಿಷಯಗಳ ವಿದ್ವಾಂಸರು ಹಾಗೂ ಸಂಶೋಧಕರಿಗೆ ಜನಗಣತಿಯು ದೀರ್ಘಕಾಲದವರೆಗೆ ಅತ್ಯಗತ್ಯ ದತ್ತಾಂಶದ ಮೂಲವಾಗಿದೆ. ಭಾರತವನ್ನು ಅರ್ಥಮಾಡಿಕೊಳ್ಳಲು ಮತ್ತು ಅಧ್ಯಯನ ಮಾಡಲು ಇದು ನಿರ್ಣಾಯಕ ಸಾಧನವಾಗಿದೆ, ಏಕೆಂದರೆ ಅದರ ಜನರ ಶ್ರೀಮಂತ ವೈವಿಧ್ಯತೆಯು ದಶವಾರ್ಷಿಕ ಜನಗಣತಿಯ ಮೂಲಕವೇ ನಿಖರವಾಗಿ ಅನಾವರಣಗೊಳ್ಳುತ್ತದೆ.

**ಉಪಯುಕ್ತತೆ**

ಇದು ವಸತಿ ಸ್ಥಿತಿಗಳು, ಸೌಲಭ್ಯಗಳು ಮತ್ತು ಆಸ್ತಿಗಳು, ಜನಸಂಖ್ಯೆ, ಧರ್ಮ, ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳು, ಭಾಷೆ, ಸಾಕ್ಷರತೆ ಮತ್ತು ಶಿಕ್ಷಣ, ಆರ್ಥಿಕ ಚಟುವಟಿಕೆ, ವಲಸೆ ಹಾಗೂ ಫಲವತ್ತತೆ ಸೇರಿದಂತೆ ವಿವಿಧ ನಿಯತಾಂಕಗಳಲ್ಲಿ ವಿವರವಾದ ಅಂಕಿಅಂಶಗಳನ್ನು ಒದಗಿಸುತ್ತದೆ. ಅಭಿವೃದ್ಧಿ ಯೋಜನೆ ಸೇರಿದಂತೆ ವ್ಯಾಪಕ ಶ್ರೇಣಿಯ ಉದ್ದೇಶಗಳಿಗಾಗಿ ಈ ಅಂಕಿಅಂಶಗಳನ್ನು ಬಳಸಲಾಗುತ್ತದೆ.

## ಜನಗಣತಿಯನ್ನು ಎರಡು ಹಂತಗಳಲ್ಲಿ ನಡೆಸಲಾಗುವುದು

### ಹಂತ 1

ಮನೆಗಳ ಪಟ್ಟಿ ಮತ್ತು ವಸತಿ ಗಣತಿ (ಎಚ್ ಎಲ್ ಒ): ಇದನ್ನು ಏಪ್ರಿಲ್ ಮತ್ತು ಸೆಪ್ಟೆಂಬರ್ 2026 ರ ನಡುವೆ, ಆಯಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಅನುಕೂಲಕರವಾದ ಸಮಯದಲ್ಲಿ 30 ದಿನಗಳ ಅವಧಿಯಲ್ಲಿ ನಡೆಸಲಾಗುತ್ತದೆ. ಮನೆಗಳ ಪಟ್ಟಿ ಮಾಡುವ ಪ್ರಕ್ರಿಯೆಗಿಂತ ಮೊದಲು, 'ಸ್ವಯಂ-ಗಣತಿ'ಗಾಗಿ 15 ದಿನಗಳ ಕಾಲಾವಕಾಶವನ್ನೂ ನೀಡಲಾಗುತ್ತದೆ.

- ಈ ಹಂತದಲ್ಲಿ, ಮನೆಗಳ ಸ್ಥಿತಿಗತಿ, ಕುಟುಂಬಗಳಿಗೆ ಲಭ್ಯವಿರುವ ಸೌಲಭ್ಯಗಳು ಮತ್ತು ಅವರು ಹೊಂದಿರುವ ಆಸ್ತಿಗಳ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಲಾಗುತ್ತದೆ. ಹಂತ-1 ಈಗಾಗಲೇ ಅಧಿಕೃತವಾಗಿ ಅಧಿಸೂಚಿಸಲಾದ 33 ಪ್ರಶ್ನೆಗಳನ್ನು ಒಳಗೊಂಡಿದೆ.

### ಹಂತ 2

ಜನಸಂಖ್ಯೆಯ ಎಣಿಕೆ: ಇದು ಫೆಬ್ರವರಿ 2027 ರಲ್ಲಿ ನಡೆಯಲಿದೆ. ಆದರೆ, ಲಡಾಖ್ ಮತ್ತು ಜಮ್ಮು ಮತ್ತು ಕಾಶ್ಮೀರದ ಕೇಂದ್ರಾಡಳಿತ ಪ್ರದೇಶಗಳ ಹಿಮಾವೃತ, ದುರ್ಗಮ ಪ್ರದೇಶಗಳಲ್ಲಿ ಹಾಗೂ ಉತ್ತರಾಖಂಡ ಮತ್ತು ಹಿಮಾಚಲ ಪ್ರದೇಶ ರಾಜ್ಯಗಳಲ್ಲಿ ಈ ಪ್ರಕ್ರಿಯೆಯನ್ನು ಸೆಪ್ಟೆಂಬರ್ 2026 ರಲ್ಲಿ ನಡೆಸಲಾಗುವುದು.

- ಜಾತಿಗಳ ಗಣತಿಯನ್ನೂ ಸಹ ಕೈಗೊಳ್ಳಲಾಗುವುದು.
- ಪ್ರತಿಯೊಬ್ಬ ವ್ಯಕ್ತಿಯಿಂದ ಜನಸಂಖ್ಯೆ, ಸಾಮಾಜಿಕ-ಆರ್ಥಿಕ ಸ್ಥಿತಿ, ಶಿಕ್ಷಣ, ವಲಸೆ, ಫಲವತ್ತತೆ ಮುಂತಾದವುಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಸಂಗ್ರಹಿಸಲಾಗುತ್ತದೆ.



**ಪ್ರಸ್ತುತ ಜನಗಣತಿಯು ದೇಶದ 16ನೇ ಜನಗಣತಿ ಮತ್ತು ಸ್ವಾತಂತ್ರ್ಯದ ನಂತರದ 8ನೇ ಜನಗಣತಿಯಾಗಿದೆ.**

ಯೋಜನೆಗಳವರೆಗೆ, ಈ ದತ್ತಾಂಶವೇ ಅಡಿಪಾಯವಾಗಿ ಕಾರ್ಯನಿರ್ವಹಿಸುತ್ತದೆ—ಇದೇ ದತ್ತಾಂಶವನ್ನು ಸಂಶೋಧನೆಗೆ ಅನುಕೂಲ ಮಾಡಿಕೊಡಲು ಮತ್ತು ಆರ್ಥಿಕತೆಯ ಸಮಗ್ರ ಚಿತ್ರಣವನ್ನು ನಿರ್ಮಿಸಲು ಬಳಸಲಾಗುತ್ತದೆ. ದತ್ತಾಂಶದ ಆಳವಾದ ಪ್ರಾಮುಖ್ಯತೆ ಮತ್ತು ಉಪಯುಕ್ತತೆಯನ್ನು ಪ್ರಸಿದ್ಧ ಅಮೇರಿಕನ್ ಅಂಕಿಅಂಶಶಾಸ್ತ್ರಜ್ಞ ವಿಲಿಯಂ ಎಡ್ವರ್ಡ್ಸ್ ಡೆಮಿಂಗ್ ಅವರ ಮಾತುಗಳ ಮೂಲಕ ಉತ್ತಮವಾಗಿ ಅರ್ಥ ಮಾಡಿಕೊಳ್ಳಬಹುದು: "ದತ್ತಾಂಶವಿಲ್ಲದೆ, ನೀವು ಕೇವಲ ಅಭಿಪ್ರಾಯವನ್ನು ಹೊಂದಿರುವ ಇನ್ನೊಬ್ಬ ವ್ಯಕ್ತಿಯಷ್ಟೆ". ಅಂದರೆ, ದತ್ತಾಂಶವು ಯಾವುದೇ ಆಲೋಚನೆ, ನೀತಿ ಅಥವಾ ಯೋಜನೆಯನ್ನು ಬಲಪಡಿಸಲು ಅಡಿಪಾಯವಾಗಿ ಕಾರ್ಯನಿರ್ವಹಿಸುತ್ತದೆ.

### ಗಣತಿಯ ಮಹಾ ಯಜ್ಞ

ಧರ್ಮಗ್ರಂಥಗಳ ಪ್ರಕಾರ, ಅಪೇಕ್ಷಿತ ಫಲಿತಾಂಶಗಳನ್ನು ಪಡೆಯುವ ಉದ್ದೇಶದಿಂದ ಯಜ್ಞವನ್ನು ಆಯೋಜಿಸಲಾಗುತ್ತದೆ. ಇದನ್ನು ಪ್ರಗತಿಯನ್ನು ಉತ್ತೇಜಿಸುವ ಮತ್ತು ನಿರ್ದಿಷ್ಟ ಆಸೆಗಳನ್ನು ಹಾಗೂ ಅಗತ್ಯಗಳನ್ನು ಪೂರೈಸುವ ಸಾಧನ ಎಂದೂ ಪರಿಗಣಿಸಲಾಗುತ್ತದೆ. 2027ರ ಜನಗಣತಿಯು ಒಂದು ಮಹಾ ಯಜ್ಞಕ್ಕಿಂತ ಕಡಿಮೆಯೇನಲ್ಲ. ಎರಡು ಹಂತಗಳಲ್ಲಿ ನಡೆಸಲಾಗುವ 2027ರ ಜನಗಣತಿಯು ವಿಶ್ವದ ಅತಿದೊಡ್ಡ ಜನಗಣತಿ ಪ್ರಕ್ರಿಯೆಯಾಗಿದ್ದು, ಇದರ ಪ್ರಾರಂಭವು ಏಪ್ರಿಲ್ 2026 ರಿಂದ ಆರಂಭವಾಗಿದೆ. ಈ ಜನಗಣತಿಯು ಮೂಲತಃ 2021 ಕ್ಕೆ ನಿಗದಿಯಾಗಿದ್ದರೂ, ಜಾಗತಿಕ ಕೋವಿಡ್-19 ಸಾಂಕ್ರಾಮಿಕ ರೋಗದಿಂದಾಗಿ ಇದನ್ನು ಮುಂದೂಡಬೇಕಾಯಿತು. ಇದು ಸಂಪೂರ್ಣವಾಗಿ ಡಿಜಿಟಲ್ ಆಗಿರುವ ಮೊದಲ ಜನಗಣತಿಯಾಗಿದೆ; ಇದೇ ಮೊದಲ ಬಾರಿಗೆ ಮೊಬೈಲ್ ಆಪ್ ಮತ್ತು ಆನ್‌ಲೈನ್ ಸ್ವಯಂ-ಗಣತಿಯ ಬಳಕೆಗೆ ಅವಕಾಶ ಕಲ್ಪಿಸಲಾಗಿದೆ. ಎಲ್ಲಾ ಸಮುದಾಯಗಳನ್ನು ಒಳಗೊಂಡ ಜಾತಿ ಗಣತಿಯನ್ನೂ ಸಹ ಈ ಜನಗಣತಿಯ ಜೊತೆಗೆ ನಡೆಸಲಾಗುವುದು. ಇದನ್ನು ಸುಗಮಗೊಳಿಸಲು ಭಾರತದಾದ್ಯಂತ 3.1 ಮಿಲಿಯನ್ ಗಿಂತಲೂ ಹೆಚ್ಚು ಕ್ಷೇತ್ರ ಕಾರ್ಯಕರ್ತರಿಗೆ ತರಬೇತಿ ನೀಡಲಾಗಿದೆ. ಜೂನ್ 16, 2025 ರಂದು, ಗೃಹ ಸಚಿವಾಲಯವು 2027 ರ ಜನಗಣತಿಗಾಗಿ ಅಧಿಕೃತವಾಗಿ ಅಧಿಸೂಚನೆಯನ್ನು ಹೊರಡಿಸಿದೆ. ಭಾರತೀಯ ಜನಗಣತಿಯು ಭಾರತದ ಜನರ ವಿವಿಧ ಗುಣಲಕ್ಷಣಗಳಿಗೆ ಸಂಬಂಧಿಸಿದ ವೈವಿಧ್ಯಮಯ ಅಂಕಿಅಂಶಗಳ ಮಾಹಿತಿಯ ಏಕೈಕ ಅತಿದೊಡ್ಡ ಮೂಲವಾಗಿದೆ.

# ವಿಶ್ವದ ಅತಿದೊಡ್ಡ ಜನಗಣತಿಗೆ

## ಸಂಬಂಧಿಸಿದಂತೆ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ ಕರೆ



ನನ್ನ ಪ್ರಿಯ ದೇಶವಾಸಿಗಳೇ,

ಪ್ರಸ್ತುತ ನಮ್ಮ ದೇಶದಲ್ಲಿ ಅತ್ಯಂತ ಪ್ರಮುಖವಾದ ಅಭಿಯಾನವೊಂದು ನಡೆಯುತ್ತಿದೆ, ಇದರ ಬಗ್ಗೆ ಪ್ರತಿಯೊಬ್ಬ ಭಾರತೀಯನೂ ತಿಳಿದಿರಲೇಬೇಕು. ಇದು ಜನಗಣತಿ ಅಭಿಯಾನ, ವಿಶ್ವದ ಅತಿದೊಡ್ಡ ಜನಗಣತಿ. ಈಗಾಗಲೇ ಇಂತಹ ಪ್ರಕ್ರಿಯೆಗೆ ಒಳಗಾದವರಿಗೆ ಈ ಬಾರಿ ವಿಭಿನ್ನ ಅನುಭವವಾಗಲಿದೆ.

- ಜನಗಣತಿ 2027 ಅನ್ನು ಡಿಜಿಟಲ್ ಮಾಡಲಾಗಿದೆ. ಎಲ್ಲಾ ಮಾಹಿತಿಯನ್ನು ನೇರವಾಗಿ ಡಿಜಿಟಲ್ ರೂಪದಲ್ಲಿ ದಾಖಲಿಸಲಾಗುತ್ತಿದೆ. ಮನೆ ಮನೆಗೆ ಹೋಗುವ ಎಣಿಕೆದಾರರು ಮೊಬೈಲ್ ಆ್ಯಪ್ ಅನ್ನು ಹೊಂದಿರುತ್ತಾರೆ. ಅವರು ನಿಮ್ಮೊಂದಿಗೆ ಮಾತನಾಡಿದ ನಂತರ ಅದರಲ್ಲಿ ಮಾಹಿತಿಯನ್ನು ನಮೂದಿಸುತ್ತಾರೆ.
- ಈ ಬಾರಿ, ಜನಗಣತಿಯಲ್ಲಿ ನಿಮ್ಮ ಭಾಗವಹಿಸುವಿಕೆಯನ್ನು ಸಹ ಸುಲಭಗೊಳಿಸಲಾಗಿದೆ; ನಿಮ್ಮ ಮಾಹಿತಿಯನ್ನು ನೀವೇ ನಮೂದಿಸಬಹುದು. ಎಣಿಕೆದಾರರು ಬರುವ 15 ದಿನಗಳ ಮೊದಲು ಈ ಸೌಲಭ್ಯವು ನಿಮಗಾಗಿ ಮುಕ್ತವಾಗಿರುತ್ತದೆ. ನಿಮ್ಮ ಅನುಕೂಲಕ್ಕೆ ಅನುಗುಣವಾಗಿ ನೀವು ಮಾಹಿತಿಯನ್ನು ನಮೂದಿಸಬಹುದು. ನೀವು ಪ್ರಕ್ರಿಯೆಯನ್ನು ಪೂರ್ಣಗೊಳಿಸಿದಾಗ, ನಿಮಗೆ ಒಂದು ವಿಶೇಷ ಐಡಿ ದೊರೆಯುತ್ತದೆ. ಈ ಐಡಿ ನಿಮ್ಮ ಮೊಬೈಲ್ ಅಥವಾ ಇಮೇಲ್ ಗೆ ಬರುತ್ತದೆ. ನಂತರ, ಎಣಿಕೆದಾರರು ನಿಮ್ಮ ಮನೆಗೆ ಭೇಟಿ ನೀಡಿದಾಗ, ಈ ಐಡಿಯನ್ನು ತೋರಿಸುವ ಮೂಲಕ ನೀವು ಮಾಹಿತಿಯನ್ನು ಪರಿಶೀಲಿಸಬಹುದು. ಇದರಿಂದ ಮತ್ತೊಮ್ಮೆ ಮಾಹಿತಿ ನೀಡುವ ಅಗತ್ಯವಿರುವುದಿಲ್ಲ. ಇದು ಸಮಯವನ್ನು ಉಳಿಸುತ್ತದೆ ಮತ್ತು ಪ್ರಕ್ರಿಯೆಯನ್ನು ಸರಳಗೊಳಿಸುತ್ತದೆ.
- ಸ್ವಯಂ-ಗಣತಿ ಪೂರ್ಣಗೊಂಡಿರುವ ರಾಜ್ಯಗಳಲ್ಲಿ, ಜನಗಣತಿ ಸಿಬ್ಬಂದಿ ಮನೆಗಳ ಎಣಿಕೆಯನ್ನು ಸಹ ಪ್ರಾರಂಭಿಸಿದ್ದಾರೆ. ಇದುವರೆಗೆ ಸರಿಸುಮಾರು ಒಂದು ಕೋಟಿ ಇಪ್ಪತ್ತು ಲಕ್ಷ ಕುಟುಂಬಗಳ ಮನೆಗಳ ಪಟ್ಟಿ ಮಾಡುವ ಕಾರ್ಯ ಪೂರ್ಣಗೊಂಡಿದೆ.
- ರಾಷ್ಟ್ರೀಯ ಜನಗಣತಿಯು ಕೇವಲ ಸರ್ಕಾರದ ಕೆಲಸವಲ್ಲ. ಇದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ನಿಮ್ಮ ಭಾಗವಹಿಸುವಿಕೆ ಅತ್ಯಂತ ನಿರ್ಣಾಯಕವಾಗಿದೆ. ನೀವು ಒದಗಿಸುವ ಮಾಹಿತಿಯು ಸಂಪೂರ್ಣವಾಗಿ ಸುರಕ್ಷಿತವಾಗಿರುತ್ತದೆ, ಗೌಪ್ಯವಾಗಿಡಲಾಗುತ್ತದೆ ಮತ್ತು ಡಿಜಿಟಲ್ ಭದ್ರತೆಯೊಂದಿಗೆ ರಕ್ಷಿಸಲ್ಪಡುತ್ತದೆ. ಬನ್ನಿ, ನಾವೆಲ್ಲರೂ ಈ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳೋಣ. ಜನಗಣತಿ 2027 ಅನ್ನು ಯಶಸ್ವಿಗೊಳಿಸೋಣ.

# ಒಂದೇ ಕರೆ, ಸಂಪೂರ್ಣ ಮಾಹಿತಿ

ಟೋಲ್-ಫ್ರೀ ಸಂಖ್ಯೆಗೆ ಕರೆ ಮಾಡಿ **1855**

ಜನಗಣತಿ 2027ರ ಅಧಿಕೃತ ಅಪ್‌ಡೇಟ್‌ಗಳಿಗಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

## ಜನಗಣತಿ - ಆಡಳಿತಾತ್ಮಕ ರಚನೆ

- ಕೇಂದ್ರ ಗೃಹ ಸಚಿವರು
- ಕೇಂದ್ರ ಗೃಹ ಕಾರ್ಯದರ್ಶಿ
- ಭಾರತದ ರಿಜಿಸ್ಟ್ರಾರ್ ಜನರಲ್ ಮತ್ತು ಜನಗಣತಿ ಕಮಿಷನರ್ (ರಾಷ್ಟ್ರ ಮಟ್ಟದಲ್ಲಿ)
  - ಜನಗಣತಿ ಕಾರ್ಯಾಚರಣೆಗಳ ನಿರ್ದೇಶನಾಲಯದ ನಿರ್ದೇಶಕರು (ರಾಜ್ಯ/ಕೇಂದ್ರಾಡಳಿತ ಪ್ರದೇಶ ಮಟ್ಟದಲ್ಲಿ)
  - ಮುಖ್ಯ ಕಾರ್ಯದರ್ಶಿ (ರಾಜ್ಯ/ಕೇಂದ್ರಾಡಳಿತ ಪ್ರದೇಶ)
- ನೋಡಲ್ ಅಧಿಕಾರಿ (ರಾಜ್ಯ/ಕೇಂದ್ರಾಡಳಿತ ಪ್ರದೇಶ)
- ಪ್ರಧಾನ ಜನಗಣತಿ ಅಧಿಕಾರಿ: ಜಿಲ್ಲಾಧಿಕಾರಿ / ಡೆಪ್ಯುಟಿ ಕಮಿಷನರ್ / ಮುನ್ಸಿಪಲ್ ಕಮಿಷನರ್
- ಚಾರ್ಜ್ ಆಫೀಸರ್: ಎಸ್ ಡಿ ಎಂ / ತಹಶೀಲ್ದಾರ್ / ಬಿಡಿಒ / ಕಾರ್ಯನಿರ್ವಾಹಕ ಅಧಿಕಾರಿ
- ಗಣತಿದಾರರು ಮತ್ತು ಮೇಲ್ವಿಚಾರಕರು: ಶಿಕ್ಷಕರು, ರಾಜ್ಯ ಸರ್ಕಾರಿ ಅಧಿಕಾರಿಗಳು ಮತ್ತು ಇತರ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳು

## ಕಳೆದ ನಾಲ್ಕು ಜನಗಣತಿಗಳ ಜನಸಂಖ್ಯಾ ಚಿತ್ರಣ







| ನಗರ ಜನಸಂಖ್ಯೆ (%) | ವರ್ಷ | ಲಿಂಗಾನುಪಾತ (ಪ್ರತಿ 1,000 ಪುರುಷರಿಗೆ ಮಹಿಳೆಯರ ಸಂಖ್ಯೆ) |
|---|---|---|
| 23.1 | 1981 | 934 |
| 25.5 | 1991 | 926 |
| 27.8 | 2001 | 933 |
| 31.1 | 2011 | 943 |

150 ವರ್ಷಗಳ ಇತಿಹಾಸವಿರುವ ಈ ವಿಶ್ವಾಸಾರ್ಹ ಮತ್ತು ಸಮಯ-ಪರೀಕ್ಷಿತ ಪ್ರಕ್ರಿಯೆಯು ಪ್ರತಿ ಹತ್ತು ವರ್ಷಕ್ಕೊಮ್ಮೆ ಜನಸಂಖ್ಯೆಯ ಬಗ್ಗೆ ಅಧಿಕೃತ ದತ್ತಾಂಶವನ್ನು ನಿರಂತರವಾಗಿ ಒದಗಿಸುತ್ತಾ ಬಂದಿದೆ. 2027 ರ ಜನಗಣತಿಯು ದೇಶದಲ್ಲಿ ನಡೆಸಲಾಗುವ 16 ನೇ ಜನಗಣತಿ ಮತ್ತು ಭಾರತ ಸ್ವಾತಂತ್ರ್ಯದ ನಂತರದ 8ನೇ ಜನಗಣತಿಯಾಗಲಿದೆ. ಜನಗಣತಿಯ ಉದ್ದೇಶಗಳು, ಮಹತ್ವ ಮತ್ತು ಉಪಯುಕ್ತತೆಯನ್ನು ನಿಜವಾಗಿಯೂ ಅರ್ಥಮಾಡಿಕೊಳ್ಳಬೇಕಾದರೆ, ದೇಶದ ಐದನೇ ಗೃಹ ಸಚಿವರಾದ ಗೋವಿಂದ ವಲ್ಲಭ ಪಂತ್ ಅವರ ಮಾತುಗಳನ್ನು ಗಮನಿಸಬೇಕು. ಅವರು ಹೀಗೆ ಹೇಳಿದ್ದರು, "ವಾಸ್ತವವಾಗಿ, ಪ್ರಸ್ತುತ ಯುಗದಲ್ಲಿ, ಪ್ರತಿಯೊಂದು ವಿಚಾರಣೆ ಮತ್ತು ಅಧ್ಯಯನದ ಅನಿವಾರ್ಯ ಅಂಶವಾದ ಜನಗಣತಿ



**ಮನೆಗಳ ಪಟ್ಟಿ ಮತ್ತು ವಸತಿ ಸೌಕರ್ಯಗಳಿಗೆ ಸಂಬಂಧಿಸಿದ 2027ರ ಜನಗಣತಿಯ ಮೊದಲ ಹಂತವು ಇಂದು ಪ್ರಾರಂಭವಾಗುತ್ತಿದೆ. ಈ ಜನಗಣತಿಯಲ್ಲಿ ಮೊದಲ ಬಾರಿಗೆ ಡಿಜಿಟಲ್ ಮಾಧ್ಯಮದ ಮೂಲಕ ದತ್ತಾಂಶವನ್ನು ಸಂಗ್ರಹಿಸಲಾಗುತ್ತಿದೆ. ಇದು ಭಾರತದ ಜನರಿಗೆ ತಮ್ಮ ಕುಟುಂಬದ ವಿವರಗಳನ್ನು ತಾವೇ ನಮೂದಿಸಲು (ಸ್ವಯಂ-ಗಣತಿ) ಅಧಿಕಾರ ನೀಡುತ್ತದೆ. ಭಾರತದ ಜನರು ತಮ್ಮ ಕುಟುಂಬದ ವಿವರಗಳನ್ನು ತಾವೇ ಸ್ವಯಂ-ಗಣತಿ ಮಾಡುವ ಮೂಲಕ ಜನಗಣತಿ ಪ್ರಕ್ರಿಯೆಯಲ್ಲಿ ಭಾಗವಹಿಸಬೇಕೆಂದು ನಾನು ಮನವಿ ಮಾಡುತ್ತೇನೆ.**

*ನರೇಂದ್ರ ಮೋದಿ, ಪ್ರಧಾನ ಮಂತ್ರಿ*

ವರದಿಯನ್ನು ಉಲ್ಲೇಖಿಸದೆ ಯಾವುದೇ ಮಹತ್ವದ ಆಡಳಿತಾತ್ಮಕ, ಆರ್ಥಿಕ ಅಥವಾ ಸಾಮಾಜಿಕ ಉಪಕ್ರಮವನ್ನು ಕೈಗೊಳ್ಳಲು ಸಾಧ್ಯವಿಲ್ಲ. ವಾಸ್ತವವಾಗಿ, ಸಣ್ಣಪುಟ್ಟ ಸಮಸ್ಯೆಗಳನ್ನು ಪರಿಹರಿಸಲು ಸಹ ಜನಗಣತಿ ವರದಿಯನ್ನು ಅವಲಂಬಿಸಬೇಕಾಗುತ್ತದೆ."

ಜನಗಣತಿಯು ಒಂದು ನಿರ್ದಿಷ್ಟ ಸಮಯದಲ್ಲಿ ದೇಶದ ಪ್ರತಿಯೊಬ್ಬ ವ್ಯಕ್ತಿ, ಮನೆ ಮತ್ತು ಕಟ್ಟಡದ ದತ್ತಾಂಶವನ್ನು ಸಂಗ್ರಹಿಸುವ ವ್ಯವಸ್ಥಿತ ಮತ್ತು ಅಧಿಕೃತ ಪ್ರಕ್ರಿಯೆಯಾಗಿದೆ. ಇದು ಜನಸಂಖ್ಯೆಯ ಗಾತ್ರ, ಬೆಳವಣಿಗೆ ಮತ್ತು ಹಂಚಿಕೆಯನ್ನು ಅಳೆಯುತ್ತದೆ. ಇದಲ್ಲದೆ, ಇದು ಸಾಕ್ಷರತೆ, ವಸತಿ, ವಲಸೆ, ಫಲವತ್ತತೆ ಪ್ರಮಾಣ, ಉದ್ಯೋಗ ಮತ್ತು ಆದಾಯದ ಮಟ್ಟಗಳಿಗೆ ಸಂಬಂಧಿಸಿದ ದತ್ತಾಂಶಗಳನ್ನು ದಾಖಲಿಸುತ್ತದೆ. ಜನಸಂಖ್ಯೆಯ

## ಇನ್ನು ಪೆನ್ನು ಮತ್ತು ಪೇಪರ್ ಇಲ್ಲ...
# ಡಿಜಿಟಲ್ ಜನಗಣತಿ 2027

*ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ, ಭಾರತವು ಕಳೆದ ದಶಕದಲ್ಲಿ ಡಿಜಿಟಲ್ ಕ್ರಾಂತಿಯ ಪ್ರವರ್ತಕನಾಗಿ ಹೊರಹೊಮ್ಮಿದೆ. ಪ್ರಧಾನ ಮಂತ್ರಿಯವರ 2047ರ ವೇಳೆಗೆ 'ವಿಕಸಿತ ಭಾರತ'ದ ದೂರದೃಷ್ಟಿಯನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಡಿಜಿಟಲ್ ಜನಗಣತಿಯನ್ನು ಮತ್ತೊಂದು ಪ್ರಮುಖ ಮತ್ತು ಐತಿಹಾಸಿಕ ಹೆಜ್ಜೆ ಎಂದು ಪರಿಗಣಿಸಲಾಗಿದೆ. ಸಾಂಪ್ರದಾಯಿಕ ಕಾಗದ ಆಧಾರಿತ ವಿಧಾನಗಳಿಂದ ದೂರ ಸರಿದು, ಎಣಿಕೆದಾರರು 'ಬ್ರಿಂಗ್ ಯುವರ್ ಓನ್ ಡಿವೈಸ್ (ಬಿವೈಒಡಿ)' ಮಾದರಿಯನ್ನು ಬಳಸಿಕೊಂಡು ವಿಶೇಷ ಮೊಬೈಲ್ ಅಪ್ಲಿಕೇಶನ್‌ಗಳ ಮೂಲಕ ದತ್ತಾಂಶವನ್ನು ಸಂಗ್ರಹಿಸುತ್ತಾರೆ.*

- ಸಾರ್ವಜನಿಕರಿಗೆ "se.census.gov.in" ಎಂಬ ಮೀಸಲಾದ ಪೋರ್ಟಲ್ ಮೂಲಕ ಸ್ವಯಂ-ಗಣತಿಗಾಗಿ ಅವಕಾಶ ಕಲ್ಪಿಸಲಾಗಿದೆ. ತದನಂತರ, ಎಣಿಕೆದಾರರು ಈ ಮಾಹಿತಿಯನ್ನು ಪರಿಶೀಲಿಸಲು ಮನೆಗಳಿಗೆ ಭೇಟಿ ನೀಡುತ್ತಾರೆ.






- **ಮನೆಪಟ್ಟಿ ಬ್ಲಾಕ್ ಕ್ರಿಯೇಟರ್ (ಎಚ್ ಎಲ್ ಬಿ ಸಿ) ವೆಬ್ ಅಪ್ಲಿಕೇಶನ್:** ಇದು ಉಪಗ್ರಹ ಚಿತ್ರಣವನ್ನು ಬಳಸಿಕೊಂಡು ಡಿಜಿಟಲ್ ಆಗಿ ಮನೆಪಟ್ಟಿ ಬ್ಲಾಕ್‌ಗಳನ್ನು ರಚಿಸಲು ಚಾರ್ಜ್ ಅಧಿಕಾರಿಗಳಿಗೆ ಅನುವು ಮಾಡಿಕೊಡುವ ವೆಬ್-ಮ್ಯಾಪ್ ಅಪ್ಲಿಕೇಶನ್ ಆಗಿದ್ದು, ದೇಶಾದ್ಯಂತ ಏಕರೂಪದ ಭೌಗೋಳಿಕ ವ್ಯಾಪ್ತಿಯನ್ನು ಖಚಿತಪಡಿಸುತ್ತದೆ.

- **ಎಚ್ ಎಲ್ ಒ ಮೊಬೈಲ್ ಅಪ್ಲಿಕೇಶನ್:** ಎಣಿಕೆದಾರರು ಮನೆಪಟ್ಟಿ ದತ್ತಾಂಶವನ್ನು ಸಂಗ್ರಹಿಸಲು ಮತ್ತು ಅಪ್‌ಲೋಡ್ ಮಾಡಲು ಬಳಸುವ ಸುರಕ್ಷಿತ ಆಫ್‌ಲೈನ್ ಮೊಬೈಲ್ ಅಪ್ಲಿಕೇಶನ್ ಇದಾಗಿದೆ. ಸಿಎಂಎಂಎಸ್ ಪೋರ್ಟಲ್‌ನಲ್ಲಿ ನೋಂದಾಯಿತರಾದ ಎಣಿಕೆದಾರರು ಮಾತ್ರ ಈ ಅಪ್ಲಿಕೇಶನ್ ಅನ್ನು ಪ್ರವೇಶಿಸಬಹುದು. ಈ ಅಪ್ಲಿಕೇಶನ್ ಕ್ಷೇತ್ರದಿಂದ ಸರ್ವರ್‌ಗೆ ನೇರವಾಗಿ ದತ್ತಾಂಶ ರವಾನಿಸಲು ಅನುವು ಮಾಡಿಕೊಡುತ್ತದೆ, ಆ ಮೂಲಕ ಸಾಂಪ್ರದಾಯಿಕ ಕಾಗದದ ಕೆಲಸವನ್ನು ಇಲ್ಲವಾಗಿಸುತ್ತದೆ.






- ಎಲ್ಲಾ ಮನೆಪಟ್ಟಿ ದತ್ತಾಂಶವನ್ನು ಈ ಅಪ್ಲಿಕೇಶನ್ ಮೂಲಕವೇ ಸಂಗ್ರಹಿಸಲಾಗುತ್ತದೆ, ಇದನ್ನು ನೋಂದಾಯಿತ ಮೊಬೈಲ್ ಸಂಖ್ಯೆಗಳನ್ನು ಬಳಸಿಕೊಂಡು ಮಾತ್ರ ಕಾರ್ಯನಿರ್ವಹಿಸಬಹುದು. ಈ ಅಪ್ಲಿಕೇಶನ್ ಆಂಡ್ರಾಯ್ಡ್ ಮತ್ತು ಐಓಎಸ್ ಪ್ಲಾಟ್‌ಫಾರ್ಮ್‌ಗಳಿಗೆ ಹೊಂದಿಕೆಯಾಗುತ್ತದೆಯಲ್ಲದೆ 16 ಪ್ರಾದೇಶಿಕ ಭಾಷೆಗಳಲ್ಲಿ ಕಾರ್ಯನಿರ್ವಹಿಸಬಲ್ಲದು.

- **ಜನಗಣತಿ ನಿರ್ವಹಣೆ ಮತ್ತು ಮೇಲ್ವಿಚಾರಣಾ ವ್ಯವಸ್ಥೆ (ಸಿಎಂಎಂಎಸ್) ಪೋರ್ಟಲ್:** ಆಡಳಿತಾತ್ಮಕ ಹಂತಗಳಲ್ಲಿ ಜನಗಣತಿಗೆ ಸಂಬಂಧಿಸಿದ ಎಲ್ಲಾ ಚಟುವಟಿಕೆಗಳನ್ನು ಯೋಜಿಸಲು, ನಿರ್ವಹಿಸಲು, ಕಾರ್ಯಗತಗೊಳಿಸಲು ಮತ್ತು ಮೇಲ್ವಿಚಾರಣೆ ಮಾಡಲು ವಿನ್ಯಾಸಗೊಳಿಸಲಾದ ಕೇಂದ್ರೀಕೃತ, ವೆಬ್ ಆಧಾರಿತ ಡಿಜಿಟಲ್ ವೇದಿಕೆ.



# ಜನಗಣತಿ 2027: **ಸದೃಢ ದತ್ತಾಂಶ ಭದ್ರತೆ**



*2027ರ ಜನಗಣತಿಯ ಅವಧಿಯಲ್ಲಿ ಸಾರ್ವಜನಿಕರಿಂದ ಸಂಗ್ರಹಿಸಲಾಗುವ ಯಾವುದೇ ದತ್ತಾಂಶವನ್ನು ಕಾನೂನುಬದ್ಧವಾಗಿ ಸಂಪೂರ್ಣವಾಗಿ ಗೌಪ್ಯ ಮತ್ತು ಸುರಕ್ಷಿತವೆಂದು ಪರಿಗಣಿಸಲಾಗುತ್ತದೆ. ಯಾವುದೇ ಸಂದರ್ಭದಲ್ಲೂ ವೈಯಕ್ತಿಕ ಮಾಹಿತಿಯನ್ನು ಬಹಿರಂಗಪಡಿಸುವುದಿಲ್ಲ. ಇದಲ್ಲದೆ, ದತ್ತಾಂಶವನ್ನು ರಕ್ಷಿಸಲು ಮತ್ತು ಹ್ಯಾಕಿಂಗ್ ಹಾಗೂ ಅನಧಿಕೃತ ಪ್ರವೇಶದ ವಿರುದ್ಧ ರಕ್ಷಣೆ ಖಚಿತಪಡಿಸಲು ಬಹು-ಪದರದ "ಸೈಬರ್ ಶೀಲ್ಡ್" ಅನ್ನು ಸ್ಥಾಪಿಸಲಾಗಿದೆ.*

- ತಾಂತ್ರಿಕ ಆವಿಷ್ಕಾರಗಳಿಗೆ ಆದ್ಯತೆ ನೀಡುವ ಮೂಲಕ ಮತ್ತು ಅಂತರ್ಗತ ವಿಧಾನವನ್ನು ಅಳವಡಿಸಿಕೊಳ್ಳುವ ಮೂಲಕ, 2027ರ ಜನಗಣತಿಯು ನಿಖರ, ಸುರಕ್ಷಿತ ಮತ್ತು ಸಮಗ್ರವಾಗಿದೆ ಎಂದು ಖಚಿತಪಡಿಸಿಕೊಳ್ಳಲಾಗುವುದು.
- 2027ರ ಜನಗಣತಿಗಾಗಿ, ಸುರಕ್ಷಿತ ಮೊಬೈಲ್ ಅಪ್ಲಿಕೇಶನ್ ಬಳಸಿ ಮನೆ-ಮನೆಗೆ ಭೇಟಿ ನೀಡುವ ಮೂಲಕ ದತ್ತಾಂಶವನ್ನು ಸಂಗ್ರಹಿಸಲಾಗುತ್ತಿದೆ. ಈ ಅಪ್ಲಿಕೇಶನ್ ಸದೃಢವಾದ ಭದ್ರತಾ ವೈಶಿಷ್ಟ್ಯಗಳನ್ನು ಒಳಗೊಂಡಿದೆ ಮತ್ತು ದತ್ತಾಂಶ ರಕ್ಷಣೆಯನ್ನು ಖಚಿತಪಡಿಸಿಕೊಳ್ಳಲು ಎಲ್ಲಾ ಅಗತ್ಯ ಕ್ರಮಗಳನ್ನು ಜಾರಿಗೆ ತರಲಾಗಿದೆ.



- ಮೊಬೈಲ್ ಸಾಧನಗಳಲ್ಲಿ ದತ್ತಾಂಶ ಸಂಗ್ರಹಣೆಯಿಂದ ಹಿಡಿದು ಅದರ ರವಾನೆ ಮತ್ತು ಸರ್ವರ್ ಮಟ್ಟದಲ್ಲಿ ಅದರ ಸಂಗ್ರಹಣೆಯವರೆಗೆ - ಸಂಪೂರ್ಣ ಪ್ರಕ್ರಿಯೆಯ ಉದ್ದಕ್ಕೂ ದತ್ತಾಂಶ ಭದ್ರತೆಯನ್ನು ಖಚಿತಪಡಿಸಿಕೊಳ್ಳಲು ಸಮಗ್ರ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.
- 2027ರ ಜನಗಣತಿಗಾಗಿ ಬಳಸಲಾಗುವ ಡಿಜಿಟಲ್ ಪರಿಕರಗಳು ಉನ್ನತ ಮಟ್ಟದ ದತ್ತಾಂಶ ಭದ್ರತೆಯನ್ನು ಖಾತರಿಪಡಿಸಲು ಬಲವಾದ ಎನ್‌ಕ್ರಿಪ್ಶನ್ ಮತ್ತು ಮಲ್ಟಿ-ಫ್ಯಾಕ್ಟರ್ ಅಥೆಂಟಿಕೇಶನ್ ಅನ್ನು ಹೊಂದಿವೆ.
- ಜನಗಣತಿಗಾಗಿ ದತ್ತಾಂಶ ಸಂಗ್ರಹಣೆಯನ್ನು ಜನಗಣತಿ ಕಾಯ್ದೆ, 1948 ಮತ್ತು ಜನಗಣತಿ ನಿಯಮಗಳು, 1990ರ ನಿಬಂಧನೆಗಳಿಗೆ ಕಟ್ಟುನಿಟ್ಟಾಗಿ ಅನುಗುಣವಾಗಿ ನಡೆಸಲಾಗುತ್ತದೆ. ಈ ಪ್ರಕ್ರಿಯೆಯಲ್ಲಿ ಸಂಗ್ರಹಿಸಲಾದ ಎಲ್ಲಾ ವೈಯಕ್ತಿಕ ದತ್ತಾಂಶವನ್ನು ಸಂಪೂರ್ಣ ಗೌಪ್ಯವಾಗಿ ನಿರ್ವಹಿಸಲಾಗುತ್ತದೆ.
- ದತ್ತಾಂಶ ಭದ್ರತೆಗೆ ಎಲ್ಲಕ್ಕಿಂತ ಹೆಚ್ಚಾಗಿ ಆದ್ಯತೆ ನೀಡಿ, ವಿವಿಧ ಆಡಳಿತಾತ್ಮಕ ಮಟ್ಟಗಳಲ್ಲಿ ಸಂಕಲಿಸಲಾದ ಒಟ್ಟುಗೂಡಿಸಿದ ದತ್ತಾಂಶವನ್ನು ಮಾತ್ರ ಪ್ರಕಟಿಸಲಾಗುತ್ತದೆ.
- 2027ರ ಜನಗಣತಿಗೆ ಸಂಬಂಧಿಸಿದ ವಿವಿಧ ಚಟುವಟಿಕೆಗಳ ನಿರ್ವಹಣೆ ಮತ್ತು ಮೇಲ್ವಿಚಾರಣೆಯನ್ನು ಸುಗಮಗೊಳಿಸಲು ಮೀಸಲಾದ ವೆಬ್ ಪೋರ್ಟಲ್ ಅನ್ನು ಅಭಿವೃದ್ಧಿಪಡಿಸಲಾಗಿದೆ.



***"ಸ್ವಯಂ-ಗಣತಿ" ಪ್ರಕ್ರಿಯೆಯನ್ನು ಪೂರ್ಣಗೊಳಿಸಿದ ನಿವಾಸಿಗಳು ತಮ್ಮ ಸ್ವಯಂ-ಗಣತಿ ಐಡಿ (SE ID) ಅನ್ನು ಸಿದ್ಧವಾಗಿಟ್ಟುಕೊಳ್ಳಬೇಕು ಮತ್ತು ಎಣಿಕೆದಾರರು ಭೇಟಿ ನೀಡಿದಾಗ ಅದನ್ನು ಅವರೊಂದಿಗೆ ಹಂಚಿಕೊಳ್ಳಬೇಕು. ಸ್ವಯಂ-ಗಣತಿಯನ್ನು ಆರಿಸಿಕೊಳ್ಳದ ಕುಟುಂಬಗಳನ್ನು ಮನೆಗಳ ಪಟ್ಟಿ ಮತ್ತು ವಸತಿ ಗಣತಿ ಹಂತದಲ್ಲಿ ಎಣಿಕೆದಾರರು ಮನೆ-ಮನೆಗೆ ಭೇಟಿ ನೀಡುವ ಮೂಲಕ ಭರ್ತಿ ಮಾಡುತ್ತಾರೆ.***

ಎಣಿಕೆಯನ್ನು ವಿಶ್ವಸಂಸ್ಥೆಯ ದಾಖಲೆಯಲ್ಲಿ ನಿರ್ದಿಷ್ಟವಾಗಿ ವ್ಯಾಖ್ಯಾನಿಸಲಾಗಿದೆ. ನಿರ್ದಿಷ್ಟವಾಗಿ, ರಾಷ್ಟ್ರೀಯ ಜನಗಣತಿಯ ತತ್ವಗಳು ಮತ್ತು ಶಿಫಾರಸುಗಳಲ್ಲಿ ಜನಸಂಖ್ಯೆಯ ಎಣಿಕೆಯನ್ನು ಒಂದು ದೇಶ ಅಥವಾ ಒಂದು ನಿರ್ದಿಷ್ಟ ಪ್ರದೇಶದೊಳಗಿನ ಎಲ್ಲಾ ವ್ಯಕ್ತಿಗಳಿಗೆ ಸಂಬಂಧಿಸಿದ ಸಾಮಾಜಿಕ, ಆರ್ಥಿಕ ಮತ್ತು ಜನಸಂಖ್ಯಾ ದತ್ತಾಂಶಗಳನ್ನು ನಿರ್ದಿಷ್ಟ ಸಮಯದಲ್ಲಿ ಸಂಗ್ರಹಿಸುವ, ಸಂಕಲಿಸುವ ಮತ್ತು ಪ್ರಕಟಿಸುವ ಪ್ರಕ್ರಿಯೆ ಎಂದು ವ್ಯಾಖ್ಯಾನಿಸಲಾಗಿದೆ.

## ಜನಗಣತಿಯ ಜಾಗತಿಕ ಸಂದರ್ಭ

ಮಾಹಿತ ತಂತ್ರಜ್ಞಾನ ಸಹಿತ ಶೈಕ್ಷಣಿಕ ಮೂಲಸೌಕರ್ಯ ಯೋಜನೆಯ ಪ್ರಾರಂಭದಿಂದ ಸಿಕ್ಕಿಂನ **160** ಶಾಲೆಗಳಿಗೆ ಅನುಕೂಲವಾಗಲಿದೆ.

- ಕಿಚುಡುಮ್ರಾ ಮೂಲಕ ಬರ್ಡ್ ಹ್ಯಾಂಗ್ ನಿಂದ ನಾಮ್ಚಿಗೆ ಸಂಪರ್ಕಿಸುವ ರಸ್ತೆ ಅಗಲೀಕರಣ ಮತ್ತು ಬಲಪಡಿಸುವ ಕಾರ್ಯ
- ಗ್ಯಾಂಗ್ಟಾಕ್ ನಲ್ಲಿ ಪ್ರಸರಣ ಮತ್ತು ವಿತರಣಾ (ಟಿ & ಡಿ) ಜಾಲವನ್ನು ಸುಧಾರಿಸುವ ಯೋಜನೆಯ ಮೇಲ್ದರ್ಜೀಕರಣ ಮತ್ತು ಹೊಸ ರೂಪ
- ಉಮ್ಸೆಯಲ್ಲಿ ಜನ ಸೇವಾ ಸಚಿವಾಲಯ (ಕಿರು ಕಾರ್ಯದರ್ಶಿ ಕಾರ್ಯಾಲಯ) ಮತ್ತು ಗ್ಯಾಂಗ್ಟಾಕ್ ನಲ್ಲಿ ನಾಗರಿಕ ಸೇವಾ ಅಧಿಕಾರಿಗಳ ಸಂಸ್ಥೆ
- ಲಿಂಗ್ಡಿಂಗ್ ನಲ್ಲಿ ಸಿಕ್ಕಿಂ ನಗರ ಬಡವರ ವಸತಿ ಯೋಜನೆ, ಪೊಲೀಸ್ ಸಿಬ್ಬಂದಿಗೆ ವಸತಿ ಮತ್ತು ಎಸ್ ಎ ಪಿ ಪಂಗ್ಥಾಂಗ್ ನಲ್ಲಿ 'ಸಿ' ದರ್ಜೆಯ ವಸತಿ ಸಮುಚ್ಚಯ ಉದ್ಘಾಟನೆ
- ಗ್ಯಾಂಗ್ಟಾಕ್ ನಲ್ಲಿ ವಲಯ III ರಲ್ಲಿ ರೋರೋ ಚು ನದಿಯ ಮೂಲಕ ರಾಣಿ ಚು ನದಿಯ ಮಾಲಿನ್ಯ ತಗ್ಗಿಸುವ ಯೋಜನೆಯ ಉದ್ಘಾಟನೆ
- ಗ್ಯಾಂಗ್ಟಾಕ್ ನಲ್ಲಿ ರಿಡ್ಜ್ ಪ್ರದೇಶ ಭಾಗದ ಪುನರಾಭಿವೃದ್ಧಿ ಕಾರ್ಯಗಳ ಉದ್ಘಾಟನೆ; ಸೊರೆಂಗ್ ನ ದೋಡಕ್ ನಲ್ಲಿ ಪರಿಸರ ಪ್ರವಾಸೋದ್ಯಮ ಮತ್ತು ತೀರ್ಥಯಾತ್ರೆಯ ಮೂಲಸೌಕರ್ಯ ಉದ್ಘಾಟನೆ; ಕೈಲಾಸ ಮಾನಸ ಸರೋವರ ಯಾತ್ರೆಗೆ ಸಂಬಂಧಿಸಿದ ಮೂಲಸೌಕರ್ಯ ಮತ್ತು ನಾಂಫಿಂಗ್ ನಲ್ಲಿರುವ ಕೃಷ್ಣ ಪ್ರಣಾಮಿ ಮಂಗಳಧಾಮದಲ್ಲಿ ಯಾತ್ರಿಕರ ಅತಿಥಿ ಗೃಹ ಲೋಕಾರ್ಪಣೆ
- ಕೃಷಿ ಸಂಸ್ಕರಣಾ ಚಟುವಟಿಕೆಗಳ ಉತ್ತೇಜನಕ್ಕೆ ಭಾರತೀಯ ಕೃಷಿಕರ ರಸಗೊಬ್ಬರ ಸಹಕಾರ ನಿಯಮಿತ (ಐ ಎಫ್ ಎಫ್ ಸಿ ಒ) ಸಂಸ್ಕರಣಾ ಘಟಕದ ಉದ್ಘಾಟನೆ
- ಪಾಕ್ಯೊಂಗ್ ಜಿಲ್ಲೆಯ ರಂಗ್ಪೋದ ಮಿನಿಂಗ್ ನಲ್ಲಿ ಒಳಾಂಗಣ ಕ್ರಿಕೆಟ್ ಸೌಲಭ್ಯಗಳ ಉದ್ಘಾಟನೆ



ಸಿಕ್ಕಿಂನ ಯುವ ಜನರೊಂದಿಗೆ ಪ್ರಧಾನಮಂತ್ರಿ ನರೇಂದ್ರ ಮೋದಿ ಫುಟ್ಬಾಲ್ ಆಟದಲ್ಲಿ ಭಾಗಿ

## ಸದೃಢ ಅಡಿಪಾಯದ ಕಾರ್ಯ

ನಾಮ್ಚಿಯಲ್ಲಿ **100** ಹಾಸಿಗೆಗಳ ಆಯುರ್ವೇದ ಆಸ್ಪತ್ರೆಗೆ ಶಂಕುಸ್ಥಾಪನೆ

- ನಾಮ್ಚಿ ಮತ್ತು ಗ್ಯಾಂಗ್ಟಾಕ್ ಜಿಲ್ಲೆಗಳನ್ನು ಸಂಪರ್ಕಿಸುವ ಸಿರ್ವಾನಿ ಮತ್ತು ಕೆಳ ಸ್ಯಾಮ್ಡಾಂಗ್ ನಲ್ಲಿ ತೀಸ್ತಾ ನದಿಗೆ ಅಡ್ಡಲಾಗಿ ನಿರ್ಮಿಸಲಾಗಿರುವ ಎರಡು ತಿರುಗಾಣಿಗಳ ದ್ವಿಪಥ ಉಕ್ಕಿನ ಕಮಾನು ಸೇತುವೆಗಳಿಗೆ ಅಡಿಪಾಯ ಹಾಕಲಾಗಿದೆ.
- ಸದ್ಭಾವ್ ಮಂಟಪಕ್ಕೆ ಶಂಕುಸ್ಥಾಪನೆ ನೆರವೇರಿಸಲಾಗಿದೆ.
- ನದಿ ಮಾಲಿನ್ಯ ತಗ್ಗಿಸುವ ಉಪಕ್ರಮಗಳಡಿಯಲ್ಲಿ ಸಿಂಗ್ಟಮ್ ಪಟ್ಟಣದಲ್ಲಿ ಒಳಚರಂಡಿ ವ್ಯವಸ್ಥೆಯ ಪುನರ್ ನಿರ್ಮಾಣಕ್ಕೆ ಗುದ್ದಲಿ ಪೂಜೆ ಹಾಕಲಾಗಿದೆ.
- ಗ್ಯಾಲ್ಶಿಂಗ್ ಜಿಲ್ಲೆಯ ಸಿಲ್ನಾನ್ ನಲ್ಲಿ ಪರಿಸರ-ತೀರ್ಥಯಾತ್ರೆ ಸಂಕೀರ್ಣಕ್ಕೆ ಶಿಲಾನ್ಯಾಸ ನೆರವೇರಿಸಲಾಗಿದೆ.

700 ಜಾತಿಯ ಚಿಟ್ಟೆಗಳು, ಹಚ್ಚ ಹಸುರಿನ ಅರಣ್ಯ ಪ್ರದೇಶ ಮತ್ತು ಭವ್ಯವಾದ ಕಾಂಚನಜುಂಗಾ ಇದೆ. ಹೀಗಾಗಿ ಎಲ್ಲರೂ ಸಿಕ್ಕಿಂಗೆ ಪದೇ ಪದೇ ಭೇಟಿ ನೀಡಲು ಬಯಸುತ್ತಾರೆ.

ಸಿಕ್ಕಿಂನ ಅತಿದೊಡ್ಡ ಶಕ್ತಿ ಅದರ ಪ್ರವಾಸೋದ್ಯಮ ಆರ್ಥಿಕತೆಯಲ್ಲಿದೆ. ಒಂದು ರಾಜ್ಯವು ಅತ್ಯುತ್ತಮ ಮೂಲಸೌಕರ್ಯವನ್ನು ಹೊಂದಿದಾಗ ಮಾತ್ರ ಪ್ರವಾಸೋದ್ಯಮವು ಪ್ರವರ್ಧಮಾನಕ್ಕೆ ಬರಲು ಸಾಧ್ಯ; ಹೀಗಾಗಿ, ಸಿಕ್ಕಿಂನ ಸಂಪರ್ಕ ಮತ್ತು ಮೂಲಸೌಕರ್ಯವನ್ನು ಹೆಚ್ಚಿಸುವತ್ತ ಪ್ರಸ್ತುತ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ. ಕಳೆದ ಕೆಲವು ವರ್ಷಗಳಿಂದ, ಈ ಪ್ರದೇಶದಲ್ಲಿ ನೂರಾರು ಕಿಲೋಮೀಟರ್ ಹೆದ್ದಾರಿಗಳನ್ನು ನಿರ್ಮಿಸಲಾಗಿದೆ. ಪ್ರತಿಯೊಂದು ಹಳ್ಳಿಗೂ ರಸ್ತೆ ಜಾಲಗಳನ್ನು ವಿಸ್ತರಿಸುವ ಕೆಲಸ ಕ್ಷಿಪ್ರ ಪ್ರಗತಿಯಲ್ಲಿದೆ. ಬಾಗ್ಡೋಗ್ರಾವನ್ನು ಗ್ಯಾಂಗ್ಟಕ್ ಗೆ ಸಂಪರ್ಕಿಸುವ ಎಕ್ಸ್ ಪ್ರೆಸ್ ವೇ ನಿರ್ಮಾಣ ಅಥವಾ ಸೆವೊಕೆ - ರಂಗ್ಪೋ ರೈಲು ಮಾರ್ಗ ನಿರ್ಮಾಣ ಯೋಜನೆಗಳು ಸಿಕ್ಕಿಂ ಅನ್ನು ದೇಶದ ಇತರ ಭಾಗಗಳೊಂದಿಗೆ ಸಂಪರ್ಕಿಸುವ ಪ್ರಮುಖ ಮಾಧ್ಯಮವಾಗಿ ಕಾರ್ಯನಿರ್ವಹಿಸುತ್ತಿವೆ. ರಾಜ್ಯದೊಳಗೆ ಹೊಸ ರಾಷ್ಟ್ರೀಯ ಹೆದ್ದಾರಿಗಳನ್ನು ಸಹ ನಿರ್ಮಿಸಲಾಗುತ್ತಿದೆ. ಸರ್ಕಾರದ ಈ ಉಪಕ್ರಮಗಳು ಸಿಕ್ಕಿಂಗೆ ಭೇಟಿ ನೀಡುವ ಪ್ರವಾಸಿಗರ ಸಂಖ್ಯೆಯನ್ನು ಮತ್ತಷ್ಟು ಹೆಚ್ಚಿಸುವ ನಿರೀಕ್ಷೆಯಿದ್ದು, ಇದರಿಂದಾಗಿ, ಸ್ಥಳೀಯ ಜನರ ಆದಾಯ ಹೆಚ್ಚಾಗಬಹುದಾಗಿದೆ. ●

ಭಾರತ-ನ್ಯೂಜಿಲೆಂಡ್ ಮುಕ್ತ ವ್ಯಾಪಾರ ಒಪ್ಪಂದ



# ಭಾರತ-ನ್ಯೂಜಿಲೆಂಡ್ ವ್ಯಾಪಾರ ಒಪ್ಪಂದದೊಂದಿಗೆ ಮುಕ್ತ ಸುಂಕ ರಹಿತ ರಫ್ತುಗಳು

*ಭಾರತ ಮತ್ತು ನ್ಯೂಜಿಲೆಂಡ್ ದೀರ್ಘಕಾಲದ ಸ್ನೇಹಪರ ಬಾಂಧವ್ಯವನ್ನು ಹಂಚಿಕೊಂಡಿವೆ. ಎರಡೂ ರಾಷ್ಟ್ರಗಳು ಕಾಮನ್ ವೆಲ್ತ್ ಪರಂಪರೆ, ಪ್ರಜಾಪ್ರಭುತ್ವ ಸಂಪ್ರದಾಯಗಳು, ಕಾನೂನು ವ್ಯವಸ್ಥೆಗಳು ಮತ್ತು ಕ್ರೀಡೆಗಳ ಬಗ್ಗೆ ಪರಸ್ಪರ ಒಲವು ಹೊಂದಿವೆ. ರಾಜಕೀಯ, ವ್ಯಾಪಾರ, ರಕ್ಷಣೆ, ಶಿಕ್ಷಣ, ಪ್ರವಾಸೋದ್ಯಮ, ಸಂಸ್ಕೃತಿ ಮತ್ತು ಕ್ರೀಡಾ ಕ್ಷೇತ್ರಗಳಲ್ಲಿ ಸಹಕಾರವು ನಿರಂತರವಾಗಿ ವಿಸ್ತರಿಸುತ್ತಿದೆ. ಈ ಬಾಂಧವ್ಯವನ್ನು ಮುಂದಕ್ಕೆ ಕೊಂಡೊಯ್ಯುತ್ತಾ, ನವದೆಹಲಿಯಲ್ಲಿ 2026 ರ ಏಪ್ರಿಲ್ 27 ರಂದು, ಎರಡೂ ದೇಶಗಳು ಭಾರತ-ನ್ಯೂಜಿಲೆಂಡ್ ಮುಕ್ತ ವ್ಯಾಪಾರ ಒಪ್ಪಂದಕ್ಕೆ (ಎಫ್ ಟಿ ಎ) ಸಹಿ ಹಾಕಿದವು, ಇದು ಇತಿಹಾಸದಲ್ಲಿ, ಅತ್ಯಂತ ವೇಗವಾಗಿ ಮುಕ್ತಾಯಗೊಂಡ ಮುಕ್ತ ವ್ಯಾಪಾರ ಒಪ್ಪಂದಗಳಲ್ಲಿ ಒಂದಾಗಿದೆ. ಈ ಎಫ್ ಟಿ ಎ ಭಾರತೀಯ ರಫ್ತಿನ ಮೇಲಿನ ಸುಂಕಗಳನ್ನು ತೆಗೆದುಹಾಕುತ್ತಾ, ಅಂದಾಜು 20 ಶತಕೋಟಿ ಡಾಲರ್ ಹೂಡಿಕೆಯನ್ನು ಆಕರ್ಷಿಸಲಿದ್ದು ವಿದ್ಯಾರ್ಥಿಗಳು ಮತ್ತು ನುರಿತ ವೃತ್ತಿಪರರಿಗೆ ಅವಕಾಶಗಳನ್ನು ಗಮನಾರ್ಹವಾಗಿ ವಿಸ್ತರಿಸಲಿದೆ.*

ಭಾರತದ ಆರ್ಥಿಕತೆಯು ನಿರಂತರವಾಗಿ ಹೊಸ ಎತ್ತರಕ್ಕೇರುತ್ತಿದ್ದು ಅದರ ರಫ್ತುಗಳು ನಿಯಮಿತವಾಗಿ ಹೊಸ ದಾಖಲೆಗಳನ್ನು ಸೃಷ್ಟಿಸುತ್ತಿವೆ. 2025-26ರ ಹಣಕಾಸು ವರ್ಷದಲ್ಲಿ, ಭಾರತದ ಸರಕು ಮತ್ತು ಸೇವೆಗಳ ರಫ್ತು ದಾಖಲೆಯ ಗರಿಷ್ಠ 860.09 ಶತಕೋಟಿ ಅಮೆರಿಕನ್ ಡಾಲರ್ ಗಳನ್ನು ತಲುಪಿದ್ದು ಹಿಂದಿನ ವರ್ಷಕ್ಕೆ ಹೋಲಿಸಿದರೆ ಶೇಕಡ 4.22 ರಷ್ಟು ಏರಿಕೆಯಾಗಿದೆ. ಜಾಗತಿಕ ಅಡೆತಡೆಗಳ ಹೊರತಾಗಿಯೂ, ಎಂಜಿನಿಯರಿಂಗ್ ಸರಕುಗಳು, ಎಲೆಕ್ಟ್ರಾನಿಕ್ಸ್, ಔಷಧಗಳು, ರಾಸಾಯನಿಕಗಳು, ರತ್ನಗಳು ಮತ್ತು ಆಭರಣಗಳು ಹಾಗೂ ಕೃಷಿ ಆಧಾರಿತ ಉತ್ಪನ್ನಗಳಂತಹ ವಲಯಗಳು ತಮ್ಮ ರಫ್ತು ಆವೇಗವನ್ನು ಯಶಸ್ವಿಯಾಗಿ ಕಾಯ್ದುಕೊಂಡಿವೆ. ಕಳೆದ ಕೆಲವು ವರ್ಷಗಳಿಂದ ಭಾರತೀಯ ಮಾರುಕಟ್ಟೆಯ ಜಾಗತಿಕ ವಿಸ್ತರಣೆಯು ಈ ಯಶಸ್ಸಿಗೆ ಪ್ರಾಥಮಿಕ ವೇಗವರ್ಧಕವಾಗಿದ್ದು, ವಿವಿಧ ಮುಕ್ತ ವ್ಯಾಪಾರ ಒಪ್ಪಂದಗಳಿಗೆ ಸಹಿ ಹಾಕುವ ಮೂಲಕ ಇದು ಸುಗಮವಾಗಿದೆ. ನವದೆಹಲಿಯ ಭಾರತ ಮಂಟಪದಲ್ಲಿ ಏಪ್ರಿಲ್ 27 ರಂದು, ಭಾರತವು ನ್ಯೂಜಿಲೆಂಡ್ ನೊಂದಿಗೆ ಮುಕ್ತ ವ್ಯಾಪಾರ ಒಪ್ಪಂದಕ್ಕೆ ಸಹಿ ಹಾಕಿದೆ; ಇತ್ತೀಚಿನ ವರ್ಷಗಳಲ್ಲಿ ಅಭಿವೃದ್ಧಿ ಹೊಂದಿದ ರಾಷ್ಟ್ರಗಳೊಂದಿಗೆ ಭಾರತವು ಮಾಡಿಕೊಂಡ ಒಂಬತ್ತನೇ ಒಪ್ಪಂದ

> **ಈ ಆಧುನಿಕ ಮತ್ತು ಸಮತೋಲಿತ ಒಪ್ಪಂದವು ಎರಡೂ ರಾಷ್ಟ್ರಗಳ ಶಕ್ತಿ ಸಾಮರ್ಥ್ಯವನ್ನು ಬಳಸಿಕೊಳ್ಳುವ ಮೂಲಕ ಸಾಮೂಹಿಕ ಬೆಳವಣಿಗೆಯನ್ನು ಉತ್ತೇಜಿಸಲಿದೆ. ಇದು ರೈತರು, ಕುಶಲಕರ್ಮಿಗಳು, ಯುವಕರು, ಉದ್ಯಮಿಗಳು, ಮಹಿಳೆಯರು ಹಾಗೂ ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಉದ್ದಿಮೆ (ಎಂ ಎಸ್ ಎಂ ಇ) ಗಳಿಗೆ ಹೊಸ ಅವಕಾಶಗಳನ್ನು ತೆರೆಯಲಿದೆ. ಕೃಷಿ, ಉತ್ಪಾದನೆ, ತಂತ್ರಜ್ಞಾನ, ಶಿಕ್ಷಣ ಮತ್ತು ಸೇವೆಗಳಂತಹ ಕ್ಷೇತ್ರಗಳಲ್ಲಿ ಜಾಗತಿಕ ಮಾರುಕಟ್ಟೆಗಳಿಗೆ ಪ್ರವೇಶ ವಿಸ್ತರಣೆಯಾಗಲಿದೆ.**
>
> *ನರೇಂದ್ರ ಮೋದಿ, ಪ್ರಧಾನಮಂತ್ರಿ*

ಇದಾಗಿದೆ. ಈ ಒಪ್ಪಂದವು ಸದೃಢ ಆರ್ಥಿಕ ಪಾಲುದಾರಿಕೆಯನ್ನು ಪೋಷಿಸುವ ಮತ್ತು ಹೂಡಿಕೆಯನ್ನು ಉತ್ತೇಜಿಸುವ ವಿಶ್ವಾಸವಿದೆ.

ಭಾರತ-ನ್ಯೂಜಿಲೆಂಡ್ ಮುಕ್ತ ವ್ಯಾಪಾರ ಒಪ್ಪಂದಕ್ಕೆ (ಎಫ್ ಟಿ ಎ) ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವರಾದ ಪಿಯೂಷ್ ಗೋಯಲ್ ಹಾಗೂ ನ್ಯೂಜಿಲೆಂಡ್ ನ ವ್ಯಾಪಾರ ಮತ್ತು ಹೂಡಿಕೆ ಸಚಿವರಾದ ಟಾಡ್ ಮ್ಯಾಕ್ ಕ್ಲೇ ಸಹಿ ಹಾಕಿದ್ದಾರೆ. ಈ ಒಪ್ಪಂದದಿಂದಾಗಿ ಭಾರತೀಯ ರಫ್ತಿನ ಮೇಲಿನ ಸುಂಕಗಳಿರುವುದಿಲ್ಲ, ಇದರಿಂದಾಗಿ ಕಾರ್ಮಿಕರ ಅಗತ್ಯ ಹೆಚ್ಚಿರುವ ವಲಯಗಳಿಗೆ ಉತ್ತೇಜನ ಸಿಗಲಿದೆ. ಇದು ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮ (ಎಂ ಎಸ್ ಎಂ ಇ) ಗಳನ್ನು ಬಲಪಡಿಸಲಿದೆ. ಜೊತೆಜೊತೆಗೆ ಕೃಷಿ ಮತ್ತು ಹೈನುಗಾರಿಕೆಯಂತಹ ಕ್ಷೇತ್ರಗಳಿಗೆ ಸಂಪೂರ್ಣ ರಕ್ಷಣೆಯ ಖಾತರಿ ಸಿಗಲಿದೆ. ಈ ಒಪ್ಪಂದದಿಂದಾಗಿ ವಿದ್ಯಾರ್ಥಿಗಳು ಮತ್ತು ನುರಿತ ವೃತ್ತಿಪರರಿಗೆ ಅವಕಾಶಗಳು ವಿಸ್ತರಣೆಯಾಗಲಿವೆ.

ಈ ಒಪ್ಪಂದವು ವಿದ್ಯಾರ್ಥಿಗಳು ಮತ್ತು ನುರಿತ ವೃತ್ತಿಪರರಿಗೆ ಅವಕಾಶಗಳನ್ನು ವಿಸ್ತರಿಸಲಿದೆ. ಇದು ಕೃಷಿ ಉತ್ಪಾದಕತೆ ಮತ್ತು ಹೂಡಿಕೆ ಬದ್ಧತೆಗಳಿಗೆ ಬೆಂಬಲ ನೀಡಲಿದೆ. ಸುಂಕೇತರ ಅಡೆತಡೆಗಳನ್ನು ತೆಗೆದುಹಾಕುವ ಮೂಲಕ, ಈ ಮುಕ್ತ ವ್ಯಾಪಾರ ಒಪ್ಪಂದವು ಇಂಡೋ - ಪೆಸಿಫಿಕ್ ವಲಯದಲ್ಲಿ ಭಾರತದ ಕಾರ್ಯತಂತ್ರದ ಆರ್ಥಿಕ ಉಪಸ್ಥಿತಿಯನ್ನು ಬಲಪಡಿಸಲಿದೆ. ಇದಲ್ಲದೆ, ಈ ಒಪ್ಪಂದವು 2047 ರ ವೇಳೆಗೆ 'ಅಭಿವೃದ್ಧಿ ಹೊಂದಿದ ಭಾರತ'ದ ಗುರಿಯತ್ತ ಭವಿಷ್ಯದ ಮುನ್ನೋಟದ ವಿಧಾನದತ್ತ ಸಾಕ್ಷಿಯಾಗಿದೆ. ಸ್ಥಳೀಯ ಕಾರ್ಯವಿಧಾನಗಳು ಪೂರ್ಣಗೊಂಡು ಎರಡೂ ರಾಷ್ಟ್ರಗಳ ಅಂಗೀಕಾರದ ನಂತರ ಒಪ್ಪಂದವು ಜಾರಿಗೆ ಬರಲಿದೆ.

## ತೆರೆಯಲಿವೆ ಹೊಸ ಅವಕಾಶಗಳು

ಭಾರತ ಮತ್ತು ನ್ಯೂಜಿಲೆಂಡ್ ನಡುವಿನ ಒಪ್ಪಂದಕ್ಕೆ ಸಹಿ ಹಾಕಿದ ನಂತರ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ತಮ್ಮ ಸಂದೇಶದಲ್ಲಿ, ಇದು ಭಾರತದ ಜಾಗತಿಕ ತೊಡಗಿಕೊಳ್ಳುವಿಕೆಯೊಂದಿಗೆ ಸಮೃದ್ಧಿಯ ಐತಿಹಾಸಿಕ ದಿನವಾಗಿದೆ ಎಂದು ಬಣ್ಣಿಸಿದ್ದಾರೆ. ಭಾರತ-ನ್ಯೂಜಿಲೆಂಡ್ ಮುಕ್ತ ವ್ಯಾಪಾರ ಒಪ್ಪಂದಕ್ಕೆ ಸಹಿ ಹಾಕಿರುವುದು ನಮ್ಮ ಆರ್ಥಿಕ ಬಾಂಧವ್ಯದ ಬಲವರ್ಧನೆ, ಪರಸ್ಪರ ನಂಬಿಕೆಯ ಮತ್ತು ಹಂಚಿತ ಉದ್ದೇಶಗಳ ಸಂಕೇತವಾಗಿದೆ. ಎರಡೂ ರಾಷ್ಟ್ರಗಳ ಜನರಿಗೆ, ವಿಶೇಷವಾಗಿ ನಮ್ಮ ಆರ್ಥಿಕತೆಯ ಶಕ್ತಿಯಾಗಿರುವ ಯುವಜನರನ್ನು ಪ್ರಧಾನಮಂತ್ರಿಗಳು ಹೃತ್ಪೂರ್ವಕವಾಗಿ ಅಭಿನಂದಿಸಿದ್ದಾರೆ. ಈ ಆಧುನಿಕ ಮತ್ತು ಸಮತೋಲಿತ ಒಪ್ಪಂದವು ಎರಡೂ ದೇಶಗಳ ಅದರದರ ಸಾಮರ್ಥ್ಯಗಳನ್ನು ಬಳಸಿಕೊಳ್ಳುವ ಮೂಲಕ ಸಾಮೂಹಿಕ ಬೆಳವಣಿಗೆಯನ್ನು ಪೋಷಿಸಲಿದೆ. ಇದು ರೈತರು, ಕುಶಲಕರ್ಮಿಗಳು, ಯುವಕರು, ಉದ್ಯಮಿಗಳು, ಮಹಿಳೆಯರು ಮತ್ತು ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ದಿಮೆ (ಎಂ ಎಸ್ ಎಂ ಇ) ಗಳಿಗೆ ಹೊಸ ಅವಕಾಶಗಳನ್ನು ತೆರೆಯಲಿದೆ.

ಕೃಷಿ, ಉತ್ಪಾದನೆ, ತಂತ್ರಜ್ಞಾನ, ಶಿಕ್ಷಣ ಮತ್ತು ಸೇವೆಗಳಂತಹ ಕ್ಷೇತ್ರಗಳಲ್ಲಿ ಜಾಗತಿಕ ಮಾರುಕಟ್ಟೆಗಳಿಗೆ ಪ್ರವೇಶ ವಿಸ್ತರಣೆಯಾಗಲಿದೆ. ಕೃಷಿ ಉತ್ಪಾದಕತೆ ಮತ್ತು ಶ್ರೇಷ್ಠತಾ ಕೇಂದ್ರಗಳೊಂದಿಗೆ ಪಾಲುದಾರಿಕೆಯ ಮೂಲಕ ನ್ಯೂಜಿಲೆಂಡ್ ನ ಆಧುನಿಕ ಕೃಷಿ ಪರಿಣತಿಯನ್ನು ಭಾರತದ ಆದ್ಯತೆಗಳೊಂದಿಗೆ ಸಂಯೋಜಿಸಲಾಗುತ್ತದೆ. ಇದರಿಂದ ಉತ್ಪಾದಕತೆ, ಮೂಲಸೌಕರ್ಯ ಮತ್ತು ರೈತರ ಆದಾಯದಲ್ಲಿ ಸುಧಾರಣೆಯಾಗಲಿದೆ. ಜಾಗತಿಕ

### ವರ್ಧಿತ ವ್ಯಾಪಾರ ಒಪ್ಪಂದ

ಭಾರತ ಮತ್ತು ನ್ಯೂಜಿಲೆಂಡ್ ನಡುವಿನ ಸರಕು ಮತ್ತು ಸೇವೆಗಳ ವ್ಯಾಪಾರ - ವ್ಯವಹಾರವು 2024 ರಲ್ಲಿ **2.4** ಶತಕೋಟಿ ಅಮೆರಿಕನ್ ಡಾಲರ್ ತಲುಪಿದೆ.

ಹಣಕಾಸು ವರ್ಷ 2024-25 ರಲ್ಲಿ ಎರಡೂ ರಾಷ್ಟ್ರಗಳ ನಡುವಿನ ದ್ವಿಪಕ್ಷೀಯ ಸರಕು ವ್ಯಾಪಾರವು 1.3 ಶತಕೋಟಿ ಅಮೆರಿಕನ್ ಡಾಲರ್ ಗಳಷ್ಟಿತ್ತು. ಹಿಂದಿನ ವರ್ಷಕ್ಕೆ ಹೋಲಿಸಿದರೆ ಶೇ. 49 ರಷ್ಟು ಹೆಚ್ಚಳವಾಗಿದೆ. ಈ ಎಫ್ ಟಿ ಎ ನಂತರ ವ್ಯಾಪಾರವು ಮತ್ತಷ್ಟು ಬೆಳವಣಿಗೆ ಸಾಧಿಸುವ ನಿರೀಕ್ಷೆಯಿದೆ.



### ಸಾವಯವ ಉತ್ಪನ್ನಗಳ ವ್ಯಾಪಾರದಲ್ಲಿ ಹೆಚ್ಚಳ

ಪರಸ್ಪರ ಗುರುತಿಸುವಿಕೆ ಒಪ್ಪಂದದ ಮೂಲಕ ಸಾವಯವ ಉತ್ಪನ್ನಗಳ ವ್ಯಾಪಾರಕ್ಕೆ ಉತ್ತೇಜನ ಸಿಗಲಿದೆ. ಆರಂಭಿಕ ಹಂತದಲ್ಲಿ, ಪರಸ್ಪರ ಗುರುತಿಸುವಿಕೆ ವ್ಯವಸ್ಥೆ (ಎಂ ಆರ್ ಎ) ಅನುಷ್ಠಾನ ಮಾಡಲಾಗುವುದು. ಎಂ ಆರ್ ಎ ಅನುಷ್ಠಾನದೊಂದಿಗೆ, ಬಾಸ್ಮತಿ ಅಕ್ಕಿ, ಅಗಸೆ ಬೀಜ, ಅರೇಬಿಕಾ ಚೆರ್ರಿ, ಇಸಾಬ್ ಗೋಲ್, ಸೋಯಾಬೀನ್ ತೈಲ ಉತ್ಪನ್ನ ಮತ್ತು ಸಾವಯವ ಕಪ್ಪು ಚಹಾದಂತಹ ಉತ್ಪನ್ನಗಳಿಗೆ ಬೇಡಿಕೆ ಹೆಚ್ಚಾಗುವ ನಿರೀಕ್ಷೆಯಿದೆ.

ಉತ್ಪಾದನಾ ಪೂರೈಕೆ ಸರಪಳಿಯಲ್ಲಿ ಪ್ರಮುಖ ಕೇಂದ್ರವಾಗಿ ಸ್ಥಾಪಿಸಿಕೊಳ್ಳಲು ಭಾರತವು ಕಳೆದ ದಶಕದಿಂದ ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿದೆ. ಈ ಒಪ್ಪಂದವು ಕೌಶಲ್ಯ, ಪ್ರತಿಭೆ ಮತ್ತು ಚಲನಶೀಲತೆಯ ಮಹತ್ವವನ್ನು ಗುರುತಿಸಿದೆ. ಇದರಿಂದಾಗಿ ಕೌಶಲ್ಯಯುತ ವೃತ್ತಿಪರರು, ಯುವಕರು ಮತ್ತು ವಿದ್ಯಾರ್ಥಿಗಳಿಗೆ ಹೆಚ್ಚಿನ ಅವಕಾಶಗಳು ಸೃಜನೆಯಾಗಲಿವೆ. ಅಂತಿಮವಾಗಿ, ಈ ಒಪ್ಪಂದವು ಸಾವಯವ ಉತ್ಪನ್ನಗಳು, ಆಯುಷ್ ಮತ್ತು ಯೋಗದಂತಹ ಎರಡೂ ರಾಷ್ಟ್ರಗಳ ಸಾಂಪ್ರದಾಯಿಕ ಜ್ಞಾನ ವ್ಯವಸ್ಥೆಗಳಿಗೆ ಜಾಗತಿಕ ಮನ್ನಣೆಯನ್ನು ನೀಡಲಿದೆ – ಈ ಮೂಲಕ ನಮ್ಮ ಶ್ರೀಮಂತ ಸಂಪ್ರದಾಯಗಳನ್ನು ಭವಿಷ್ಯದ ಅವಕಾಶಗಳೊಂದಿಗೆ ಸಂಪರ್ಕಿಸಲಿದೆ. ಎರಡೂ ದೇಶಗಳು ತಮ್ಮ ತಮ್ಮ ಸಾಮರ್ಥ್ಯಗಳನ್ನು ಒಟ್ಟುಗೂಡಿಸಿ ಸದೃಢ ಪೂರೈಕೆ ಸರಪಳಿಗಳನ್ನು ನಿರ್ಮಿಸಲಿವೆ ಹಾಗೂ ಕೈಗೆಟುಕುವ ಮತ್ತು ಸ್ಪರ್ಧಾತ್ಮಕ ಸರಕು ಮತ್ತು ಸೇವೆಗಳನ್ನು ಒದಗಿಸಲಿವೆ. ಇದು ಬೆಳವಣಿಗೆಗೆ ಹೊಸ ಮಾರ್ಗಗಳನ್ನು ತೆರೆಯಲಿದೆ.

## 6 ವರ್ಷಗಳಲ್ಲಿ ಭಾರತದ 9 ಮುಕ್ತ ವ್ಯಾಪಾರ ಒಪ್ಪಂದ (ಎಫ್ ಟಿ ಎ) ಗಳು ಪೂರ್ಣ





**ಭಾರತ-ನ್ಯೂಜಿಲೆಂಡ್ ಎಫ್ ಟಿ ಎ – ಏಪ್ರಿಲ್ 2026**
ಅತ್ಯಂತ ವೇಗವಾಗಿ ಕೇವಲ 9 ತಿಂಗಳಲ್ಲಿ ಮಾತುಕತೆ ಪೂರ್ಣಗೊಂಡ ಮುಕ್ತ ವ್ಯಾಪಾರ ಒಪ್ಪಂದ ಇದಾಗಿದೆ.



**ಭಾರತ-ಅಮೆರಿಕ ಮಧ್ಯಂತರ ವ್ಯಾಪಾರ ಚೌಕಟ್ಟು - ಫೆಬ್ರವರಿ 2026**
ಭಾರತ ಮತ್ತು ಅಮೆರಿಕ ನಡುವಿನ ಸಮಗ್ರ ವ್ಯಾಪಾರ ಒಪ್ಪಂದದತ್ತ ಒಂದು ಹೆಜ್ಜೆ.



**ಭಾರತ-ಇಯು ಮುಕ್ತ ವ್ಯಾಪಾರ ಒಪ್ಪಂದ - ಜನವರಿ 2026**
27 ಯುರೋಪಿಯನ್ ಒಕ್ಕೂಟದ ಸದಸ್ಯ ರಾಷ್ಟ್ರಗಳನ್ನು ಒಳಗೊಂಡ ಅತಿದೊಡ್ಡ ವ್ಯಾಪಾರ ಒಪ್ಪಂದ.



**ಭಾರತ-ಒಮನ್ ಸಮಗ್ರ ಆರ್ಥಿಕ ಪಾಲುದಾರಿಕೆ ಒಪ್ಪಂದ (ಸಿಇಪಿಎ) - ಡಿಸೆಂಬರ್ 2025**
ಈ ಒಪ್ಪಂದವು ಕೊಲ್ಲಿ ಸಹಕಾರ ಮಂಡಳಿ (ಜಿಸಿಸಿ) ರಾಷ್ಟ್ರಗಳಲ್ಲಿ ವ್ಯಾಪಕವಾದ ಸುಂಕ ವ್ಯಾಪ್ತಿಯನ್ನು ಹೊಂದಿದೆ.



**ಭಾರತ - ಯುಕೆ ಸಮಗ್ರ ಆರ್ಥಿಕ ಮತ್ತು ವ್ಯಾಪಾರ ಒಪ್ಪಂದ (ಸಿಇಟಿಎ) – ಜುಲೈ 2025**
ಭಾರತದ ಶೇಕಡ 99% ರಫ್ತಿಗೆ ಸುಂಕ ರಹಿತ ಪ್ರವೇಶ




**ಭಾರತ – ಯೂರೋಪಿಯನ್ ಮುಕ್ತ ವ್ಯಾಪಾರ ಸಂಘ – ವ್ಯಾಪಾರ ಮತ್ತು ಆರ್ಥಿಕ ಪಾಲುದಾರಿಕೆ ಒಪ್ಪಂದ (ಇ ಎಫ್ ಟಿ ಎ – ಟಿ ಇ ಪಿ ಎ) - ಮಾರ್ಚ್ 2024 ರಿಂದ ಅಕ್ಟೋಬರ್ 2025 ರವರೆಗೆ**
100 ಶತಕೋಟಿ ಡಾಲರ್ ವಿದೇಶಿ ನೇರ ಬಂಡವಾಳ ಹೂಡಿಕೆ (ಎಫ್ ಡಿ ಐ) ಬದ್ಧತೆಯನ್ನು ಒಳಗೊಂಡ ಐತಿಹಾಸಿಕ ಒಪ್ಪಂದ



**ಭಾರತ-ಆಸ್ಟ್ರೇಲಿಯಾ ಇಸಿಟಿಎ – ಡಿಸೆಂಬರ್ 2022**
ಶೇಕಡ 100 ರಷ್ಟು ಸುಂಕವಿಲ್ಲದ ಭಾರತದ ಮೊದಲ ಒಪ್ಪಂದ



**ಭಾರತ-ಯುಎಇ ಸಿಇಪಿಎ - ಮೇ 2022**
ಹಣಕಾಸು ವರ್ಷ 2024-25 ರಲ್ಲಿ ದ್ವಿಪಕ್ಷೀಯ ವ್ಯಾಪಾರವು 100 ಶತಕೋಟಿ ಡಾಲರ್ ಗಡಿ ದಾಟಿದೆ



**ಭಾರತ-ಮಾರಿಷಸ್ ಸಿಇಪಿಎ - 2021**
ಆಫ್ರಿಕಾದ ರಾಷ್ಟ್ರದೊಂದಿಗೆ ಭಾರತದ ಮೊದಲ ವ್ಯಾಪಾರ ಒಪ್ಪಂದ

### ಜನರ ನಡುವಿನ ಬಾಂಧವ್ಯ ಬಲವರ್ಧನೆಗೆ ಬದ್ಧತೆ

ನ್ಯೂಜಿಲೆಂಡ್ ಪ್ರಧಾನಿ ಕ್ರಿಸ್ಟೋಫರ್ ಲಕ್ಸನ್ ಅವರು ಒಪ್ಪಂದದ ಬಳಿಕ ನೀಡಿರುವ ಸಂದೇಶದಲ್ಲಿ, ಇದು ನ್ಯೂಜಿಲೆಂಡ್ ರಫ್ತುದಾರರಿಗೆ 1.4 ಶತಕೋಟಿ ಜನರ ಭಾರತದ ಮಾರುಕಟ್ಟೆಗೆ ವ್ಯಾಪಕ ಪ್ರವೇಶವನ್ನು ನೀಡುವ 'ಒಂದು ಪೀಳಿಗೆಗೆ ಒಂದು ಬಾರಿಯ ಒಪ್ಪಂದ' ಎಂದು ಬಣ್ಣಿಸಿದ್ದಾರೆ. ಇದು ಮಾರುಕಟ್ಟೆ ಪ್ರವೇಶ ವಿಸ್ತರಿಸಲಿದೆ, ರಫ್ತು ಬೆಳವಣಿಗೆ ಉತ್ತೇಜಿಸಲಿದೆ ಮತ್ತು ಕೃಷಿಯಂತಹ ಕ್ಷೇತ್ರಗಳಲ್ಲಿ ಸಹಕಾರವನ್ನು ಸಕ್ರಿಯಗೊಳಿಸಲಿದೆ.

ಈ ಮಧ್ಯೆ, ನ್ಯೂಜಿಲೆಂಡ್ ನ ಜನಸಂಖ್ಯೆಯ ಸರಿಸುಮಾರು ಶೇಕಡ 6 ರಷ್ಟು ಜನರು ಭಾರತೀಯ ಮೂಲದವರಾಗಿದ್ದಾರೆ ಎಂದು ನ್ಯೂಜಿಲೆಂಡ್ ನ ವ್ಯಾಪಾರ ಮತ್ತು ಹೂಡಿಕೆ ಸಚಿವರಾದ ಟಾಡ್ ಮೆಕ್ ಕ್ಲೇ ಅವರು ತಿಳಿಸಿದ್ದಾರೆ. ಅನಿವಾಸಿ ಭಾರತೀಯರು ವಿವಿಧ ಕ್ಷೇತ್ರಗಳಲ್ಲಿ ಗಮನಾರ್ಹ ಕೊಡುಗೆ ನೀಡುತ್ತಿದ್ದಾರೆ. ಜಾಗತಿಕ ಮತ್ತು ಪ್ರಾದೇಶಿಕ ಚಲನಶೀಲತೆಯು ಬದಲಾಗುತ್ತಿರುವ ಈ ಕಾಲಘಟ್ಟದಲ್ಲಿ ವಿಶ್ವಾಸಾರ್ಹ ಪಾಲುದಾರಿಕೆಗಳು ಇನ್ನಷ್ಟು ನಿರ್ಣಾಯಕವಾಗಿವೆ. ಪ್ರಾದೇಶಿಕ ಸ್ಥಿರತೆ, ಆರ್ಥಿಕ ಸ್ಥಿರ ಚೇತರಿಕೆ ಮತ್ತು ಹಂಚಿತ ಸಮೃದ್ಧಿಯನ್ನು ಪೋಷಿಸುವಲ್ಲಿ ಭಾರತವನ್ನು ಪ್ರಮುಖ ಪಾಲುದಾರ ಎಂದು ನ್ಯೂಜಿಲೆಂಡ್ ಪರಿಗಣಿಸಿದೆ.

### ಭಾರತ-ನ್ಯೂಜಿಲ್ಯಾಂಡ್ ಮುಕ್ತ ವ್ಯಾಪಾರ ಒಪ್ಪಂದ ಒಂಭತ್ತು ತಿಂಗಳಲ್ಲಿ ಅಂತಿಮ

ಪ್ರಧಾನಮಂತ್ರಿ ನರೇಂದ್ರ ಮೋದಿ ಮತ್ತು ನ್ಯೂಜಿಲೆಂಡ್ ಪ್ರಧಾನಿ ಕ್ರಿಸ್ಟೋಫರ್ ಲಕ್ಸನ್ ನಡುವಿನ ದ್ವಿಪಕ್ಷೀಯ ಸಭೆಯ ಮುನ್ನಾ ದಿನವಾದ 2025ರ ಮಾರ್ಚ್ 16 ರಂದು ಮುಕ್ತ ವ್ಯಾಪಾರ ಒಪ್ಪಂದ ಕುರಿತು ಅಧಿಕೃತ ಮಾತುಕತೆಗಳು ಪ್ರಾರಂಭವಾದವು. ಇದು ಔಪಚಾರಿಕ ಸುತ್ತಿನ ಮಾತುಕತೆಗಳು ಮತ್ತು ಹಲವಾರು ಮಧ್ಯಂತರ

# ಒಪ್ಪಂದದ ಪ್ರಮುಖ ಮುಖ್ಯಾಂಶಗಳು



## 20 ಶತಕೋಟಿ ಅಮೆರಿಕನ್ ಡಾಲರ್

ಕೃಷಿ, ಉತ್ಪಾದನಾ ವಲಯ, ಮೂಲಸೌಕರ್ಯ ಅಭಿವೃದ್ಧಿ, ನವೋದ್ಯಮಗಳು, ನಾವೀನ್ಯತೆ ಮತ್ತು ಉದಯೋನ್ಮುಖ ತಂತ್ರಜ್ಞಾನಗಳ ಉತ್ತೇಜನಕ್ಕೆ ನ್ಯೂಜಿಲೆಂಡ್ ನಿಂದ ಭಾರತದಲ್ಲಿ ಹೂಡಿಕೆ ಭರವಸೆ

- ಇದುವರೆಗಿನ ಅತ್ಯಂತ ಸಮಗ್ರ ಮಾರುಕಟ್ಟೆ ಪ್ರವೇಶ ಮತ್ತು ಸೇವೆಗಳ ಪ್ಯಾಕೇಜ್ ಅನ್ನು ನ್ಯೂಜಿಲೆಂಡ್ ನೀಡಿದೆ. ಇದು ಕೌಶಲ್ಯಯುತ ವೃತ್ತಿಪರರು, ನವೋದ್ಯಮಗಳು ಮತ್ತು ಸೇವಾ ಆಧಾರಿತ ಉದ್ಯಮಗಳಿಗೆ ಹೆಚ್ಚಿನ ಮೌಲ್ಯದ ಅವಕಾಶಗಳನ್ನು ತೆರೆಯಲಿದೆ. ಇದು 118 ಸೇವಾ ವಲಯಗಳಲ್ಲಿ ಮಾರುಕಟ್ಟೆ ಪ್ರವೇಶ ನೀಡುತ್ತಾ 139 ಉಪ ವಲಯಗಳಲ್ಲಿ ಅತ್ಯಂತ ನೆಚ್ಚಿನ ರಾಷ್ಟ್ರ (ಎಂ ಎಫ್ ಎನ್) ಬದ್ಧತೆಗಳನ್ನು ವಿಸ್ತರಿಸಿದೆ.
- ಭಾರತದ ಶೇಕಡ 100 ರಷ್ಟು ನ್ಯೂಜಿಲೆಂಡ್ ಗೆ ಸುಂಕ ರಹಿತ ಪ್ರವೇಶ ಪಡೆಯಲಿದೆ. ಇದು ಎಲ್ಲಾ ಸುಂಕ ಮಾರ್ಗಗಳನ್ನು ಒಳಗೊಂಡಿದೆ. ಜವಳಿ, ಚರ್ಮ, ಪಾದರಕ್ಷೆಗಳು, ಎಂಜಿನಿಯರಿಂಗ್ ಸರಕುಗಳು, ಸಂಸ್ಕರಿಸಿದ ಆಹಾರಗಳಂತಹ ಹೆಚ್ಚಿನ ಕಾರ್ಮಿಕರಿರುವ ವಲಯಗಳನ್ನು ಗಮನಾರ್ಹವಾಗಿ ಸಬಲಗೊಳಿಸಲಿದೆ.
- ನ್ಯೂಜಿಲೆಂಡ್ ನ ಇತರ ವ್ಯಾಪಾರ ಪಾಲುದಾರರಿಗೆ ನೀಡಲಾಗುವ ಸೌಲಭ್ಯದಂತೆಯೇ, ಭಾರತೀಯ ಉತ್ಪನ್ನಗಳು ಪ್ರವೇಶಿಸಿದ ಕ್ಷಣದಿಂದಲೇ ಶೂನ್ಯ-ಸುಂಕದ ಮಾರುಕಟ್ಟೆ ಪ್ರವೇಶಿಸಲಿವೆ; ಇದು ನ್ಯೂಜಿಲೆಂಡ್ ಮಾರುಕಟ್ಟೆಯಲ್ಲಿ ಅವು ಸಂಪೂರ್ಣವಾಗಿ ಸ್ಪರ್ಧಾತ್ಮಕವಾಗಿ ಉಳಿಯುವುದನ್ನು ಖಚಿತಪಡಿಸಲಿದೆ ಮತ್ತು ಸಮಾನ ಅವಕಾಶ ನೀಡಲಿದೆ.
- ಈ ಒಪ್ಪಂದವು 2047 ರ ವೇಳೆಗೆ "ವಿಕಸಿತ ಭಾರತ"ದ ಗುರಿಯ ಸಾಕಾರಕ್ಕೆ ಪೂರಕವಾಗಿ ವಿನ್ಯಾಸಗೊಳಿಸಲಾದ "ಹೊಸ ಪೀಳಿಗೆಯ ವ್ಯಾಪಾರ ಒಪ್ಪಂದ"ವನ್ನು ಪ್ರತಿನಿಧಿಸಲಿದೆ. ಸುಂಕಗಳು, ಪ್ರತಿಭಾ ಚಲನಶೀಲತೆ, ಹೂಡಿಕೆ ಮತ್ತು ಕೃಷಿ ಉತ್ಪಾದಕತೆಗೆ ಸಂಬಂಧಿಸಿದ ನಿಬಂಧನೆಗಳ ಮೂಲಕ, ಇದು ಯುವಕರು, ರೈತರು, ಮಹಿಳೆಯರು, ಕುಶಲಕರ್ಮಿಗಳು ಹಾಗೂ ಸಣ್ಣ ಮತ್ತು ಮಧ್ಯಮ ಉದ್ಯಮಗಳನ್ನು ಸಬಲಗೊಳಿಸಲಿದೆ.
- ಭಾರತದ ಸೂಕ್ಷ್ಮ ವಲಯಗಳನ್ನು ರಕ್ಷಿಸಲು ಶೇ. 29.97 ರಷ್ಟು ಸುಂಕ ಮಾರ್ಗಗಳನ್ನೂ ಹೊರತುಪಡಿಸಿ, ದೇಶದ ಸುಂಕ ಮಾರ್ಗಗಳಲ್ಲಿ ಶೇ. 70.03 ರಷ್ಟು ಸುಂಕ ಉದಾರೀಕರಣವನ್ನು ನೀಡಿದ್ದು, ಇದು ದ್ವಿಪಕ್ಷೀಯ ವ್ಯಾಪಾರ ಮೌಲ್ಯದ ಶೇ. 95 ರಷ್ಟಾಗಿದೆ.

- **ರಕ್ಷಣೆಗಾಗಿ ಹೊರತುಪಡಿಸಿರುವ ಉತ್ಪನ್ನಗಳು:** ರೈತರು, ಗ್ರಾಮೀಣ ಆರ್ಥಿಕತೆ ಮತ್ತು ಸ್ಥಳೀಯ ಕೈಗಾರಿಕೆಗಳನ್ನು ರಕ್ಷಿಸಲು, ಕೆಲವು ಉತ್ಪನ್ನಗಳನ್ನು ಹೊರಗಿಡಲಾಗಿದೆ. ಈ ಪೈಕಿ ಡೈರಿ ಉತ್ಪನ್ನಗಳು, ಪಶು ಉತ್ಪನ್ನಗಳು (ಕುರಿ ಮಾಂಸವನ್ನು ಹೊರತುಪಡಿಸಿ), ಕೃಷಿ ಉತ್ಪನ್ನಗಳು (ಈರುಳ್ಳಿ, ಕಡಲೆಕಾಳು, ಬಟಾಣಿ, ಮೆಕ್ಕೆಜೋಳ, ಬಾದಾಮಿ ಇತ್ಯಾದಿ), ಸಕ್ಕರೆ, ಕೃತಕ ಜೇನುತುಪ್ಪ ಮತ್ತು ಪ್ರಾಣಿ/ಸಸ್ಯಜನ್ಯ ತೈಲ ಸೇರಿವೆ. ಶಸ್ತ್ರಾಸ್ತ್ರ ಮತ್ತು ಮದ್ದುಗುಂಡುಗಳು, ರತ್ನಗಳು ಮತ್ತು ಆಭರಣಗಳು, ತಾಮ್ರ ಮತ್ತು ತಾಮ್ರದ ವಸ್ತುಗಳು ಹಾಗೂ ಅಲ್ಯೂಮಿನಿಯಂ ಮತ್ತು ಅಲ್ಯೂಮಿನಿಯಂ ಆಧಾರಿತ ಸರಕುಗಳೂ ಪಟ್ಟಿಯಲ್ಲಿವೆ.

**30%** ನಿರ್ದಿಷ್ಟ ಸುಂಕದ ಮಾರ್ಗವನ್ನು ತಕ್ಷಣವೇ ತೆಗೆದುಹಾಕಲಾಗುತ್ತದೆ; ಮರ, ಉಣ್ಣೆ, ಕುರಿ ಮಾಂಸ, ಚರ್ಮ ಮತ್ತು ಕಚ್ಚಾ ತೊಗಟೆ ಈ ಪೈಕಿ ಸೇರಿವೆ.

- ಏತನ್ಮಧ್ಯೆ, ಶೇಕಡ 35.6 ರಷ್ಟು ಸರಕುಗಳ ಮೇಲಿನ ಸುಂಕವನ್ನು 3, 5, 7 ಮತ್ತು 10 ವರ್ಷಗಳ ಅವಧಿಯಲ್ಲಿ ಹಂತಹಂತವಾಗಿ ತೆಗೆದುಹಾಕಲಾಗುವುದು; ಪೆಟ್ರೋಲಿಯಂ ತೈಲಗಳು, ಮಾಲ್ಟ್ ಸಾರಗಳು, ಸಸ್ಯಜನ್ಯ ತೈಲ ಹಾಗೂ ಆಯ್ದ ವಿದ್ಯುತ್ ಮತ್ತು ಯಾಂತ್ರಿಕ ಯಂತ್ರೋಪಕರಣಗಳು, ಪೆಪ್ಟೋನ್ ಪುಡಿ ಇತ್ಯಾದಿಗಳು ಈ ಪೈಕಿ ಸೇರಿವೆ.
- ನ್ಯೂಜಿಲೆಂಡ್ ನಲ್ಲಿ ಅಧ್ಯಯನದ ನಂತರದ ಉದ್ಯೋಗ ವೀಸಾಗಳು: ವೃತ್ತಿಪರ ಮಾರ್ಗಗಳ ಮೂಲಕ ವಿದ್ಯಾರ್ಥಿಗಳ ಚಲನಶೀಲತೆಯನ್ನು ಉತ್ತೇಜಿಸಲಾಗುತ್ತದೆ. ಯಾವುದೇ ಸಂಖ್ಯೆಯ ಮಿತಿಯಿಲ್ಲ. ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್ ಮತ್ತು ಗಣಿತ (ಎಸ್ ಟಿ ಇ ಎಂ) ಕ್ಷೇತ್ರಗಳಲ್ಲಿ ಪದವಿ ಮತ್ತು ಸ್ನಾತಕೋತ್ತರ ಪದವಿಗಳನ್ನು ಹೊಂದಿರುವ ವಿದ್ಯಾರ್ಥಿಗಳಿಗೆ 3 ವರ್ಷಗಳವರೆಗೆ ಅಧ್ಯಯನದ ನಂತರದ ಉದ್ಯೋಗದ ಹಕ್ಕುಗಳನ್ನು ನೀಡಲಾಗುತ್ತದೆ, ಅದೇ ರೀತಿ ಸಂಶೋಧನಾ ಡಾಕ್ಟರೇಟ್ ಗೆ 4 ವರ್ಷಗಳ ಅವಧಿಗೆ ವೀಸಾ ನೀಡಲಾಗುತ್ತದೆ.

**ಭಾರತೀಯ ವೃತ್ತಿಪರರಿಗಾಗಿ 5,000 'ತಾತ್ಕಾಲಿಕ ಉದ್ಯೋಗ ಪ್ರವೇಶ ವೀಸಾ'ಗಳ ವಿಶೇಷ ಕೋಟಾ.**

- ಉತ್ಪಾದಕತೆಯನ್ನು ಹೆಚ್ಚಿಸಲು, ರೈತರ ಆದಾಯವನ್ನು ವರ್ಧಿಸಲು ಮತ್ತು ಸುಗಮ ಜ್ಞಾನ ಹಂಚಿಕೆಗಾಗಿ ಸೇಬು, ಕಿವಿಹಣ್ಣು ಮತ್ತು ಮನುಕಾ ಜೇನುತುಪ್ಪದ ಕೃಷಿ ಉತ್ಪಾದಕತಾ ಪಾಲುದಾರಿಕೆಗಳು ಮತ್ತು 'ಶ್ರೇಷ್ಠತಾ ಕೇಂದ್ರಗಳು'.
- ಕೃಷಿ ಉತ್ಪಾದಕತಾ ಸಹಕಾರದ ಮೂಲಕ ಹಾಗೂ ಮೀಸಲು ಕೋಟಾ ಮತ್ತು ಕನಿಷ್ಠ ಆಮದು ಬೆಲೆಗಳನ್ನು ಒಳಗೊಂಡ ನಿಯಂತ್ರಿತ ಮಾರುಕಟ್ಟೆ ಪ್ರವೇಶ ಕಾರ್ಯವಿಧಾನಗಳ ಮೂಲಕ ಸ್ಥಳೀಯ ಉತ್ಪಾದಕರಿಗೆ ರಕ್ಷಣೆ ಖಚಿತಪಡಿಸಿಕೊಳ್ಳಲಾಗುತ್ತದೆ.

**ತಪಾಸಣೆಗಳ ಗುರುತಿಸುವಿಕೆ**

ಕೈಗೆಟುಕುವ ಔಷಧಗಳ ವಿಶ್ವಾಸಾರ್ಹ ಪೂರೈಕೆದಾರನಾಗಿ ಭಾರತದ ಸ್ಥಾನವನ್ನು ಬಲಪಡಿಸಲು, ಶೂನ್ಯ ಸುಂಕಗಳು ಹಾಗೂ ಔಷಧಗಳು ಮತ್ತು ವೈದ್ಯಕೀಯ ಸಾಧನಗಳಿಗೆ ತ್ವರಿತ ಅನುಮೋದನೆಗಳು ನಿಬಂಧನೆಗಳಲ್ಲಿ ಸೇರಿವೆ. ಜೊತೆಗೆ ಅಮೆರಿಕ, ಯೂರೋಪಿಯನ್ ಒಕ್ಕೂಟ, ಯುನೈಟೆಡ್ ಕಿಂಗ್ಡಮ್ ಮತ್ತು ಕೆನಡಾದಲ್ಲಿ ನಿಯಂತ್ರಕ ಸಂಸ್ಥೆಗಳು ನಡೆಸುವ ತಪಾಸಣೆಗಳ ಗುರುತಿಸುವಿಕೆಯೂ ಸೇರಿದೆ.



ಸಭೆಗಳ ನಂತರ, ಎರಡೂ ದೇಶಗಳು 2025ರ ಡಿಸೆಂಬರ್ 22 ರಂದು ಒಪ್ಪಂದಕ್ಕೆ ಸಮ್ಮತಿಸಿವೆ. ಭಾರತ-ನ್ಯೂಜಿಲೆಂಡ್ ಎಫ್ ಟಿ ಎ ಅನ್ನು ಕೇವಲ ಒಂಭತ್ತು ತಿಂಗಳಲ್ಲಿ ಅಂತಿಮಗೊಳಿಸಲಾಗಿದೆ ಎಂದು ಕೇಂದ್ರ ಸಚಿವರಾದ ಪಿಯೂಷ್ ಗೋಯಲ್ ಹೇಳಿದ್ದಾರೆ. ಇದು ಅಭಿವೃದ್ಧಿ ಹೊಂದಿದ ರಾಷ್ಟ್ರದೊಂದಿಗೆ ಭಾರತ ಒಡಂಬಡಿಕೆ ಮಾಡಿಕೊಂಡ ಅತ್ಯಂತ ವೇಗವಾಗಿ ಮುಕ್ತಾಯಗೊಂಡ ಮುಕ್ತ ವ್ಯಾಪಾರ ಒಪ್ಪಂದಗಳಲ್ಲಿ ಒಂದಾಗಿದೆ. ವಿಕಸಿತ ಭಾರತ 2047ರ ದೃಷ್ಟಿಕೋನಕ್ಕೆ ಅನುಗುಣವಾಗಿ, ಅಭಿವೃದ್ಧಿ ಹೊಂದಿದ ಆರ್ಥಿಕತೆಗಳೊಂದಿಗೆ ಭಾರತ ಬೆಳೆಯುತ್ತಿದ್ದು, ತೊಡಗಿಕೊಳ್ಳುವಿಕೆಯಲ್ಲಿ ಇದು ಮಹತ್ವದ ಹೆಜ್ಜೆಯಾಗಿದೆ. ಕಳೆದ ಮೂರುವರೆ ವರ್ಷಗಳಲ್ಲಿ, ಭಾರತವು ಅಂತಿಮಗೊಳಿಸಿರುವ ಏಳನೇ ಮುಕ್ತ ವ್ಯಾಪಾರ ಒಪ್ಪಂದ ಇದಾಗಿದೆ. ಒಟ್ಟಾರೆಯಾಗಿ, ಭಾರತವು ಒಂಭತ್ತು ಎಫ್ ಟಿ ಎ ಗಳನ್ನು ಅಂತಿಮಗೊಳಿಸಿದ್ದು, ಇದರಲ್ಲಿ 38 ಅಭಿವೃದ್ಧಿ ಹೊಂದಿದ ಆರ್ಥಿಕತೆಗಳು ಸೇರಿವೆ. ಒಟ್ಟಾರೆಯಾಗಿ, ಈ ಒಪ್ಪಂದಗಳು ಜಾಗತಿಕ ಜಿಡಿಪಿಯ ಸರಿಸುಮಾರು ಶೇಕಡ 65 ರಿಂದ 70 ರಷ್ಟು ವ್ಯಾಪಿಸಲಿವೆ.



# ಜಾಗತಿಕ ಆರ್ಥಿಕತೆಯಲ್ಲಿ ಭಾರತ ಪ್ರಮುಖ ಆಧಾರಸ್ತಂಭ

*ಭಾರತ ಮತ್ತು ದಕ್ಷಿಣ ಕೊರಿಯಾ ಸಾವಿರಾರು ವರ್ಷಗಳ ಹಿಂದಿನ ಸಾಂಸ್ಕೃತಿಕ ಸಂಬಂಧಗಳನ್ನು ಹಂಚಿಕೊಂಡಿವೆ. ಎರಡೂ ರಾಷ್ಟ್ರಗಳ ನಡುವಿನ ದ್ವಿಪಕ್ಷೀಯ ಸಂಬಂಧಗಳಿಗೆ ಹೊಸ ದಿಕ್ಕು ನೀಡುವ ಉದ್ದೇಶದಿಂದ, ಕೊರಿಯಾ ಅಧ್ಯಕ್ಷ ಲೀ ಜೇಮ್ಯುಂಗ್ ಅವರು ಏಪ್ರಿಲ್ 19ರಿಂದ 21ರ ವರೆಗೆ ಭಾರತಕ್ಕೆ ಅಧಿಕೃತ ಭೇಟಿ ನೀಡಿದರು. ಈ ಭೇಟಿಯ ಸಮಯದಲ್ಲಿ ಹಡಗು ನಿರ್ಮಾಣ, ಕಡಲ ಭಾಗದಲ್ಲಿ ಸರಕು ಸಾಗಣೆ ಮತ್ತು ಪರಿಸರ ಸೇರಿದಂತೆ ಹಲವಾರು ಪ್ರಮುಖ ವಿಷಯಗಳ ಕುರಿತು ಎರಡೂ ದೇಶಗಳ ನಡುವೆ ಒಪ್ಪಂದಗಳನ್ನು ಮಾಡಿಕೊಳ್ಳಲಾಯಿತು ಮತ್ತು ಒಟ್ಟಾಗಿ ಮುಂದುವರಿಯಲು ನಿರ್ಧಾರ ತೆಗೆದುಕೊಳ್ಳಲಾಯಿತು.*

8 ವರ್ಷಗಳ ನಂತರ ಕೊರಿಯಾ ಅಧ್ಯಕ್ಷರು ಭಾರತಕ್ಕೆ ಅಧಿಕೃತ ಭೇಟಿ ನೀಡಿದರು. ಇದು ಅಧ್ಯಕ್ಷ ಲೀ ಜೇ-ಮ್ಯುಂಗ್ ಅವರ ಮೊದಲ ಭೇಟಿಯೂ ಆಗಿತ್ತು. ಈ ಭೇಟಿಯ ಸಮಯದಲ್ಲಿ, ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಪ್ರಜಾಪ್ರಭುತ್ವ ಮೌಲ್ಯಗಳು, ಮಾರುಕಟ್ಟೆ ಆರ್ಥಿಕತೆ ಮತ್ತು ಕಾನೂನು ಆಡಳಿತದ ಗೌರವ ಇವೆಲ್ಲವೂ ಎರಡೂ ರಾಷ್ಟ್ರಗಳ ಗುಣಲಕ್ಷಣದಲ್ಲಿ ಹುದುಗಿದೆ ಎಂದು ಹೇಳಿದರು. ಇಂಡೋ-ಪೆಸಿಫಿಕ್ ಪ್ರದೇಶದಲ್ಲಿ ಎರಡೂ ದೇಶಗಳು ಸಾಮಾನ್ಯ ಹಿತಾಸಕ್ತಿಗಳನ್ನು ಸಹ ಹಂಚಿಕೊಂಡಿವೆ. ಈ ಭದ್ರ ಅಡಿಪಾಯಗಳ ಮೇಲೆ ಸಂಬಂಧ ನಿರ್ಮಿಸುವ ಮೂಲಕ, ಕಳೆದ ದಶಕದಲ್ಲಿ ಎರಡೂ ರಾಷ್ಟ್ರಗಳ ನಡುವಿನ ಸಂಬಂಧವು ಹೆಚ್ಚು ಕ್ರಿಯಾತ್ಮಕವಾಗಿದೆ ಮತ್ತು ಸಮಗ್ರವಾಗಿದೆ. ಕೊರಿಯಾ ಅಧ್ಯಕ್ಷರ ಈ ಭೇಟಿಯ ಮೂಲಕ, ಈ ವಿಶ್ವಾಸಾರ್ಹ ಪಾಲುದಾರಿಕೆಯು ಈಗ ಭವಿಷ್ಯದ ಪಾಲುದಾರಿಕೆಯಾಗಿ ವಿಕಸನಗೊಳ್ಳಲಿದೆ. ಚಿಪ್‌ಗಳ ತಯಾರಿಕೆಯಿಂದ ಹಿಡಿದು ಹಡಗುಗಳ ನಿರ್ಮಾಣದ ತನಕ, ಪ್ರತಿಭೆಯಿಂದ ಹಿಡಿದು ತಂತ್ರಜ್ಞಾನ ಅಭಿವೃದ್ಧಿವರೆಗೆ ಮತ್ತು ಪರಿಸರದಿಂದ ಹಿಡಿದು ಇಂಧನ ಉತ್ಪಾದನೆವರೆಗೆ, ಪ್ರತಿಯೊಂದು ವಲಯದಲ್ಲೂ ಸಹಕಾರ ಹೆಚ್ಚಿಸಲು ಹೊಸ ಅವಕಾಶಗಳು ಸಾಕಾರಗೊಳ್ಳುತ್ತಿವೆ.

ವಿಶ್ವದ 4ನೇ ಅತಿದೊಡ್ಡ ಆರ್ಥಿಕತೆಯಾಗಿ 1.4 ಶತಕೋಟಿ ಜನರಿಗೆ ನೆಲೆಯಾಗಿರುವ ಭಾರತವು, ಜಾಗತಿಕ ಆರ್ಥಿಕತೆಯ ಪ್ರಮುಖ ಆಧಾರಸ್ತಂಭವಾಗಿ ನಿಂತಿದೆ ಎಂದು ಕೊರಿಯಾ ಅಧ್ಯಕ್ಷ ಲೀ ಜೇ-ಮ್ಯುಂಗ್ ಹೇಳಿದರು. ಭಾರತ ಮತ್ತು ದಕ್ಷಿಣ ಕೊರಿಯಾ ನಡುವಿನ ದ್ವಿಪಕ್ಷೀಯ ವ್ಯಾಪಾರವು ಪ್ರಸ್ತುತ 27 ಶತಕೋಟಿ

## ತಿಳಿವಳಿಕೆ ಒಡಂಬಡಿಕೆ

- ಬಂದರು ವಲಯದಲ್ಲಿ ಸಹಕಾರ.
- ಕೈಗಾರಿಕಾ ಸಹಕಾರ ಸಮಿತಿ ಸ್ಥಾಪನೆ.
- ಉಕ್ಕಿನ ಪೂರೈಕೆ ಸರಪಳಿಗಾಗಿ ತಂತ್ರಜ್ಞಾನ ಮತ್ತು ವ್ಯಾಪಾರ ಕ್ಷೇತ್ರಗಳಲ್ಲಿ ಸಹಕಾರ.
- ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ಯಮ ವಲಯದಲ್ಲಿ ಸಹಕಾರ.
- ಸಾಗರ ಪರಂಪರೆಯ ಕ್ಷೇತ್ರದಲ್ಲಿ ಸಹಕಾರ.
- ಎನ್‌ಪಿಸಿಐ ಇಂಟರ್ ನ್ಯಾಷನಲ್ ಪೇಮೆಂಟ್ಸ್ ಲಿಮಿಟೆಡ್ ಮತ್ತು ಕೊರಿಯಾ ಹಣಕಾಸು ದೂರಸಂಪರ್ಕ ಮತ್ತು ಕ್ಲಿಯರಿಂಗ್ ಸಂಸ್ಥೆ(ಕೆಎಫ್‌ಟಿಸಿ) ನಡುವೆ ಒಪ್ಪಂದ.
- ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳಲ್ಲಿ ಸಹಕಾರ.
- ಭಾರತ-ಕೊರಿಯಾ ಡಿಜಿಟಲ್ ಪಾಲುದಾರಿಕೆ ಮಾರ್ಗಸೂಚಿ
- ಹವಾಮಾನ ಮತ್ತು ಪರಿಸರ ಕ್ಷೇತ್ರಗಳಲ್ಲಿ ಸಹಕಾರ.
- 2026–2030ರ ಅವಧಿಗೆ ಭಾರತ ಮತ್ತು ದಕ್ಷಿಣ ಕೊರಿಯಾ ನಡುವೆ ಸಾಂಸ್ಕೃತಿಕ ವಿನಿಮಯ.
- ಸಾಂಸ್ಕೃತಿಕ ಮತ್ತು ಸೃಜನಶೀಲ ಕೈಗಾರಿಕೆಗಳಲ್ಲಿ ಸಹಕಾರ.
- ಕ್ರೀಡಾ ವಲಯದಲ್ಲಿ ಸಹಕಾರ.



## ಘೋಷಣೆಗಳು...

- ಆರ್ಥಿಕ ಭದ್ರತಾ ಸಂವಾದ ಆರಂಭ
- ಗಣ್ಯಾತಿ ವ್ಯಕ್ತಿಗಳ ಭೇಟಿ ಕಾರ್ಯಕ್ರಮ ಆರಂಭ
- ಹವಾಮಾನ ಬದಲಾವಣೆ, ಆರ್ಕ್ಟಿಕ್ ಮತ್ತು ಕಡಲ ಸಹಕಾರ ಸೇರಿದಂತೆ ಜಾಗತಿಕ ವಿಷಯಗಳ ಕುರಿತು ಉಭಯ ವಿದೇಶಾಂಗ ಸಚಿವಾಲಯಗಳ ನಡುವೆ ಸಂವಾದ ಆರಂಭ
- ಇಂಡೋ-ಪೆಸಿಫಿಕ್ ಸಾಗರಗಳ ಉಪಕ್ರಮ(ಐಪಿಒಐ)ದಲ್ಲಿ ದಕ್ಷಿಣ ಕೊರಿಯಾದ ಭಾಗವಹಿಸುವಿಕೆ
- ಅಂತಾರಾಷ್ಟ್ರೀಯ ಸೌರ ಮೈತ್ರಿಕೂಟದಲ್ಲಿ ದಕ್ಷಿಣ ಕೊರಿಯಾದ ಭಾಗವಹಿಸುವಿಕೆ ಮತ್ತು ಜಾಗತಿಕ ಹಸಿರು ಬೆಳವಣಿಗೆಯ ಸಂಸ್ಥೆ(ಜಿಜಿಜಿಐ)ಯಲ್ಲಿ ಭಾರತದ ಸದಸ್ಯತ್ವ
- 2028–29 ವರ್ಷವನ್ನು ಭಾರತ-ದಕ್ಷಿಣ ಕೊರಿಯಾ ಸ್ನೇಹ ವರ್ಷವಾಗಿ ಆಚರಣೆಗೆ ನಿರ್ಧಾರ

## ಮುಖ್ಯಾಂಶಗಳು...

- ವ್ಯಾಪಾರ ಸಹಕಾರ ಸುಗಮಗೊಳಿಸಲು ಕೈಗಾರಿಕಾ ಸಹಕಾರ ಸಮಿತಿ ರಚಿಸಲಾಗಿದೆ
- ಕೊರಿಯಾದ ಕಂಪನಿಗಳು, ವಿಶೇಷವಾಗಿ ಸಣ್ಣ ಮತ್ತು ಮಧ್ಯಮ ಉದ್ಯಮಗಳು (ಎಸ್‌ಎಂಇ) ಭಾರತಕ್ಕೆ ಪ್ರವೇಶಿಸಲು ಅನುಕೂಲವಾಗುವಂತೆ ಕೊರಿಯಾ ಕೈಗಾರಿಕಾ ಟೌನ್ ಶಿಪ್ ಗಳನ್ನು ಸ್ಥಾಪಿಸಲಾಗುವುದು
- ಎರಡೂ ದೇಶಗಳ ನಡುವಿನ ವ್ಯಾಪಾರ ಒಪ್ಪಂದವನ್ನು ಮುಂದಿನ ವರ್ಷದೊಳಗೆ ನವೀಕರಿಸಲಾಗುವುದು ಅಥವಾ ಪರಿಷ್ಕರಿಸಲಾಗುವುದು
- 2028ರಲ್ಲಿ ಭಾರತದಲ್ಲಿ ಭಾರತ-ಕೊರಿಯಾ ಸ್ನೇಹ ಉತ್ಸವ ಆಯೋಜಿಸಲಾಗುವುದು
- ಜನರಿಂದ ಜನರಿಗೆ ಸಂಬಂಧಗಳನ್ನು ಬಲಪಡಿಸಲು ಶಿಕ್ಷಣ, ಸಂಶೋಧನಾ ಸಹಭಾಗಿತ್ವ ಮತ್ತು ಪ್ರವಾಸೋದ್ಯಮ ಉತ್ತೇಜಿಸಲಾಗುವುದು



ಡಾಲರ್ ಗೆ ತಲುಪಿದ್ದು, 2030ರ ವೇಳೆಗೆ ಈ ಸಂಖ್ಯೆಯನ್ನು 50 ಶತಕೋಟಿ ಡಾಲರ್ ಗೆ ವಿಸ್ತರಿಸುವ ಗುರಿ ನಿಗದಿಪಡಿಸಲಾಗಿದೆ. ಹೆಚ್ಚುವರಿಯಾಗಿ, ಎರಡೂ ರಾಷ್ಟ್ರಗಳ ನಡುವಿನ ಆರ್ಥಿಕ ಸಂಬಂಧಗಳನ್ನು ಸುಗಮಗೊಳಿಸಲು "ಭಾರತ-ಕೊರಿಯಾ ಹಣಕಾಸು ವೇದಿಕೆ"ಯನ್ನು ಆರಂಭಿಸಲಾಗಿದೆ. ●

# ಕಥಕ್‌ಗೆ ಹೊಸ ಆಯಾಮ ನೀಡಿದವರು ಯಾರು?



***ಕಥಕ್ ನೃತ್ಯದ ಸಾಂಪ್ರದಾಯಿಕ ಎಲ್ಲೆಗಳನ್ನು ದಾಟಿ, ಕುಮುದಿನಿ ಲಖಿಯಾ ಅವರು ಅದಕ್ಕೆ ಹೊಸ ನೋಟ ಮತ್ತು ಆಯಾಮ ನೀಡಿದ್ದಲ್ಲದೆ, ತಮ್ಮ ಇಡೀ ಜೀವನವನ್ನು ಅದಕ್ಕಾಗಿ ಮುಡಿಪಾಗಿಟ್ಟರು. ಅವರು ಕಥಕ್ ನೃತ್ಯವನ್ನು ಕಲಿತಿದ್ದಲ್ಲದೆ, ಅದನ್ನು ಅಪಾರ ಜನರಿಗೆ ಕಲಿಸಿದರು. ಅದಕ್ಕಾಗಿಯೇ ಅವರ ಹೆಸರನ್ನು ಈಗ ಕಥಕ್‌ಗೆ ಸಮಾನಾರ್ಥಕವೆಂದು ಪರಿಗಣಿಸಲಾಗಿದೆ. ಕಲ್ಪನೆ ಮತ್ತು ನವೀನ ಪ್ರಸ್ತುತಿಗಳ ಮೂಲಕ ಅವರು ಕಥಕ್ ನೃತ್ಯಕ್ಕೆ ಹೊಸ ಆಯಾಮ ನೀಡಿದರು. ಭಾರತೀಯ ಶಾಸ್ತ್ರೀಯ ನೃತ್ಯದ ಶ್ರೇಷ್ಠ ಪ್ರತಿಪಾದಕರಲ್ಲಿ ಒಬ್ಬರೆಂದು ಪರಿಗಣಿಸಲ್ಪಟ್ಟರು, ಅವರು ಭಾರತೀಯ ಶಾಸ್ತ್ರೀಯ ನೃತ್ಯ ಲೋಕಕ್ಕೆ ಶ್ರೀಮಂತ ಮತ್ತು ಶಾಶ್ವತ ಪರಂಪರೆಯನ್ನು ಬಿಟ್ಟುಹೋದರು...***

**ಜನನ: ಮೇ 17, 1930 | ಮರಣ: ಏಪ್ರಿಲ್ 12, 2025**

ಭಾರತದ ಪ್ರಸಿದ್ಧ ನೃತ್ಯಗಾರ್ತಿ ಮತ್ತು ಕಥಕ್‌ಗೆ ಹೊಸ ರೂಪ ಮತ್ತು ಆಯಾಮ ನೀಡಿದ ದಾರ್ಶನಿಕಿ ಕುಮುದಿನಿ ಲಖಿಯಾ ಅವರು 1930 ಮೇ 17ರಂದು ಗುಜರಾತ್‌ನ ಅಹಮದಾಬಾದ್‌ನಲ್ಲಿ ಜನಿಸಿದರು. ಬಾಲ್ಯದಿಂದಲೇ ಅವರು ಕಲೆಗಳ ಕಡೆಗೆ ಸ್ವಾಭಾವಿಕ ಒಲವು ಹೊಂದಿದ್ದರು. ಪರಿಣಾಮವಾಗಿ, ಅವರು ತಮ್ಮ 7ನೇ ವಯಸ್ಸಿನಲ್ಲೇ ಕಥಕ್ ತರಬೇತಿ ಆರಂಭಿಸಿ, ಈ ಕ್ಷೇತ್ರದಲ್ಲಿ ಪ್ರಮುಖ ಕಲಾವಿದರಾಗುವ ಹಾದಿಯಲ್ಲಿ ಸಾಗಿದರು. 1960ರ ದಶಕದಲ್ಲಿ ಕಥಕ್ ನೃತ್ಯ ಶೈಲಿಯನ್ನೇ ಪರಿವರ್ತಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ, ಏಕವ್ಯಕ್ತಿ ನೃತ್ಯ ವಿಭಾಗದ ಮಿತಿಗಳನ್ನು ಮೀರಿ ಅದನ್ನು ಗುಂಪು ನೃತ್ಯ ಪ್ರಕಾರವಾಗಿ ವಿಕಸನಗೊಳಿಸಿದರು. ಇದಲ್ಲದೆ, ಅವರು ಕಥಕ್ ನೃತ್ಯ ಪ್ರದರ್ಶನಗಳಲ್ಲಿ ಸಮಕಾಲೀನ ನಿರೂಪಣೆಗಳನ್ನು ಸೇರಿಸುವಂತಹ ನಾವೀನ್ಯತೆಗಳನ್ನು ಪರಿಚಯಿಸುವ ಮೂಲಕ ನೃತ್ಯ ಪ್ರಾಕಾರವನ್ನು ಪುನರುಜ್ಜೀವನಗೊಳಿಸಿದರು.

ಕಥಕ್ ನೃತ್ಯಕ್ಕೆ ವೇದಿಕೆಯಲ್ಲಿ ಹೊಸ ರೂಪ, ತತ್ವಶಾಸ್ತ್ರ ಮತ್ತು ಸೌಂದರ್ಯ ನೀಡಿದ ಕುಮುದಿನಿ ಲಖಿಯಾ, 1964ರಲ್ಲಿ ಅಹಮದಾಬಾದ್‌ನಲ್ಲಿ ಕದಂಬ್ ಸ್ಕೂಲ್ ಆಫ್ ಡ್ಯಾನ್ಸ್ ಅಂಡ್ ಮ್ಯೂಸಿಕ್ ಸಂಸ್ಥೆ ಸ್ಥಾಪಿಸಿದರು, ಇದು ಭಾರತೀಯ ನೃತ್ಯ ಮತ್ತು ಸಂಗೀತಕ್ಕೆ ಸಮರ್ಪಿತವಾದ ಸಂಸ್ಥೆಯಾಗಿದೆ. ಈ ಸಂಸ್ಥೆಯು ತನ್ನ ಸಂಪೂರ್ಣ ಗಮನ ಮತ್ತು ದೃಷ್ಟಿಯನ್ನು ಕಥಕ್‌ನ ನೃತ್ಯ ತಂತ್ರ, ಶಬ್ದಕೋಶ ಮತ್ತು ಪ್ರಸ್ತುತಿಯ ಅಭಿವೃದ್ಧಿಗೆ ಮೀಸಲಿಟ್ಟಿತು. ಈ ಸಂಸ್ಥೆಯ ಮೂಲಕ ಅವರು ಲೆಕ್ಕವಿಲ್ಲದಷ್ಟು ವಿದ್ಯಾರ್ಥಿಗಳಿಗೆ ತರಬೇತಿ ನೀಡಿದರು, ಮಾರ್ಗದರ್ಶನ ಮಾಡಿದರು. ಅವರು ನವೀನ ಸಮಕಾಲೀನ ವ್ಯಾಖ್ಯಾನಗಳ ಮೂಲಕ ಕಥಕ್ ಪ್ರದರ್ಶನಗಳಿಗೆ ಹೊಸ ದೃಷ್ಟಿಕೋನ ನೀಡಿದರು. ಈ ಕಾರಣಕ್ಕಾಗಿ, ಕಥಕ್ ಕ್ಷೇತ್ರದಲ್ಲಿ ನವೀನ ಪ್ರಯೋಗಗಳನ್ನು ಪ್ರವರ್ತಕರಾಗಿ ಮಾಡಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಇದಲ್ಲದೆ, ಅವರು ಹಿಂದಿ ಚಲನಚಿತ್ರ 'ಉಮ್ರಾವ್ ಜಾನ್'ಗೆ ನೃತ್ಯ ಸಂಯೋಜನೆ ಮಾಡಿದ್ದಾರೆ.

1987ರಲ್ಲಿ ಭಾರತ ಸರ್ಕಾರವು ಅವರಿಗೆ ಪದ್ಮಶ್ರೀ ಪ್ರಶಸ್ತಿ ನೀಡಿ ಗೌರವಿಸಿತು, ನಂತರ 2010ರಲ್ಲಿ ಪದ್ಮಭೂಷಣ ಪ್ರಶಸ್ತಿ ನೀಡಿತು. 2025ರಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಕಲಾ ಕ್ಷೇತ್ರಕ್ಕೆ ನೀಡಿದ ಕೊಡುಗೆಗಳಿಗಾಗಿ ಮರಣೋತ್ತರವಾಗಿ ಪದ್ಮವಿಭೂಷಣ ಪ್ರಶಸ್ತಿ ಪ್ರದಾನ ಮಾಡಿದರು. ಕುಮುದಿನಿ ಲಖಿಯಾ ಅವರ ಮೊಮ್ಮಗ ಅವರ ಪರವಾಗಿ ಪ್ರಶಸ್ತಿ ಸ್ವೀಕರಿಸಿದರು. ಸರಿಸುಮಾರು 75 ವರ್ಷಗಳ ಕಾಲ ನಡೆದ ಸುದೀರ್ಘ ಮತ್ತು ಯಶಸ್ವೀ ನೃತ್ಯ ವೃತ್ತಿಜೀವನದಲ್ಲಿ ಅವರು 50ಕ್ಕೂ ಹೆಚ್ಚು ದೇಶಗಳಲ್ಲಿ ಕಥಕ್ ನೃತ್ಯ ಪ್ರದರ್ಶನ ನೀಡಿದ್ದಾರೆ.

ಅವರು 2025 ಏಪ್ರಿಲ್ 12ರಂದು ಬೆಳಗ್ಗೆ ತಮ್ಮ 94ನೇ ವಯಸ್ಸಿನಲ್ಲಿ ನಿಧನರಾದರು. ಅವರು ಅಹಮದಾಬಾದ್‌ನಲ್ಲಿರುವ ತಮ್ಮ ನಿವಾಸದಲ್ಲಿ ಕೊನೆಯುಸಿರೆಳೆದರು. ಅವರ ನಿಧನಕ್ಕೆ ಸಂತಾಪ ಸೂಚಿಸಿದ ಪ್ರಧಾನ ಮಂತ್ರಿ ನರೇಂದ್ರ ಮೋದಿ, "ಅತ್ಯುತ್ತಮ ಸಾಂಸ್ಕೃತಿಕ ರಾಯಭಾರಿಯಾಗಿ ಛಾಪು ಮೂಡಿಸಿದ ಕುಮುದಿನಿ ಲಖಿಯಾ ಜಿ ಅವರ ನಿಧನದಿಂದ ತೀವ್ರ ದುಃಖಿತನಾಗಿದ್ದೇನೆ. ಕಥಕ್ ಮತ್ತು ಭಾರತೀಯ ಶಾಸ್ತ್ರೀಯ ನೃತ್ಯಗಳ ಬಗ್ಗೆ ಅವರ ಉತ್ಸಾಹವು ಅನೇಕ ವರ್ಷಗಳಲ್ಲಿ ಅವರ ಅದ್ಭುತ ಕೆಲಸಗಳಲ್ಲಿ ಪ್ರತಿಫಲಿಸುತ್ತಿದೆ. ನಿಜವಾದ ಪ್ರವರ್ತಕರಾಗಿದ್ದ ಅವರು ಅನೇಕ ಪೀಳಿಗೆಗಳ ನೃತ್ಯ ಕಲಾವಿದರನ್ನು ಪೋಷಿಸಿದ್ದಾರೆ. ಅವರ ಲೆಕ್ಕವಿಲ್ಲದಷ್ಟು ಕೊಡುಗೆಗಳಿಗೆ ಮುಂದೆಯೂ ಗೌರವ ಸಿಗಲಿದೆ ಎಂದರು.



**PMO India**
@PMOIndia

भारत को विकसित बनाने का मिशन अनवरत चल रहा है।

और जब मैं विकसित भारत की बात करता हूं... तो उसका सबसे मजबूत स्तंभ भारत की नारीशक्ति है: PM @narendramodi



**Rajnath Singh**
@rajnathsingh

हमें AI का सिर्फ उपयोग ही नहीं, बल्कि उसे सही दिशा भी देनी है। सामूहिक प्रयासों और अंतरराष्ट्रीय सहयोग से ही इसकी शक्ति का सार्थक उपयोग संभव है। भारत इस दिशा में तेज़ी से आगे बढ़ रहा है। भारतीय अब केवल नए मॉडल ही नहीं बना रहे, बल्कि वैश्विक स्तर पर प्रतिस्पर्धी और कई मामलों में बेहतर मॉडल विकसित कर रहे हैं।



**Amit Shah**
@AmitShah

मोदी जी के नेतृत्व में केंद्रीय कैबिनेट ने प्रधानमंत्री ग्राम सड़क योजना-III को ₹83,977 करोड़ की लागत से जारी रखने की स्वीकृति दी है। इसमें ग्रामीण कृषि बाजारों (GrAMs), स्कूलों और अस्पतालों को कनेक्टिविटी से जोड़ने को प्राथमिकता दी गई है। इससे ग्रामीण अर्थव्यवस्था को मजबूती मिलेगी, रोजगार के अवसर बढ़ेंगे और यातायात भी अधिक सुगम होगा।
#CabinetDecisions



**Nitin Gadkari**
@nitin_gadkari

🇮🇳 आयुष्मान भारत संकल्पना स्वस्थ और सेहतमंद भारत की नींव है। प्रधानमंत्री श्री @narendramodi जी के नेतृत्व में 🇮🇳 देश में कार्यान्वित प्रधानमंत्री जन स्वास्थ्य योजना आर्थिक रूप से कमजोर लोगों के लिए वरदान साबित हो रही है।🩺💊💉🩸

#AyushmanBharatDiwas
#आयुष्मान_भारत_दिवस



**Dharmendra Pradhan**
@dpradhanbjp

माननीय प्रधानमंत्री श्री @NarendraModi जी के मार्गदर्शन में देश आज अपनी विरासत को नए आत्मविश्वास के साथ पुनर्स्थापित कर रहा है और कारीगरों की प्रतिभा को वैश्विक पहचान दिलाने का संकल्प निरंतर सशक्त हो रहा है।

इस प्रेरक पहल के लिए आयोजकों को बहुत-बहुत बधाई, जो हमारे बुनकरों और कारीगरों को एक सशक्त मंच प्रदान करते हुए सराहनीय कार्य कर रहे हैं। ऐसे प्रयास 'विकसित भारत 2047' को नई ऊर्जा देते हैं।



**Dr Mansukh Mandaviya**
@mansukhmandviya

'अंत्योदय' के मंत्र और मोदी सरकार के संकल्प से, आज कश्मीर के श्रमिकों को मिला उनका पहला ESIC अस्पताल।

📍 ओमपोरा, बडगाम

ON THE DAY VOTING ENDED IN BENGAL, MODI SHOWCASED GANGA EXPRESSWAY AS UP'S DOUBLE-ENGINE GOVT

# Modi: New eway will be lifeline of UP's development

Times News Network

**Lucknow:** Talking about the speedy construction of the Ganga eway after inaugurating it, PM Narendra Modi said on Wednesday, "This is the style and pace of work of the double-engine govt."

Describing the expressway stretch as akin to a "teertha", Modi said it would become a lifeline for UP's development, opening up new economic opportunities. He added that the corridor would not only facilitate faster travel but also serve as a gateway for industrial growth and employment generation. "Gone are the days when construction of a single road took years. There was a time when projects would languish in files," he said. In an apparent swipe at the opposition, Modi said that foundation plaques used to get installed at the time of polls but projects never materialised even as govts came and went.

He criticised previous govts for ignoring the interests of farmers who faced difficulties of storage and transportation. "Their problems will now be solved and they will get higher incomes," he said. Modi said new industrial corridors would be developed along the Ganga Expressway. "The previous govt did not even dream of industrial corridors in various places, including Hardoi," he said.

The PM said that UP, which was earlier billed as a "BIMARU" state, was now striving to become a $1 trillion economy. "It is a huge target. And this requires equally big preparation," he said. "The economic development of UP is today becoming India's strategic strength as well," he said. "There was a time when UP was identified by its potholed roads. The same state is now home to the maximum number of expressways," he said.

### Ganga eway brings windfall to farmers

PM Modi's inauguration of the Ganga eway was broadcast live across western UP as farmers welcomed the project and the compensation payouts it brought. Nearly 18,000 acres were acquired, with thousands of crores transferred directly to landowners – up to four times rural circle rates and double in urban areas. Biggest payouts included Rs 1,800-2,000 crore in Meerut and Hapur, Rs 1,250 crore in Badaun, Rs 1,100 crore in Shahjahanpur and Rs 236 crore in Amroha, while officials said the eway would create jobs and raise land values. — Rahul Singh

## UP'S LONGEST EXPRESSWAY TO BOOST SPEED AND CONNECTIVITY




# Modi urges citizens to actively participate in Census exercise

HT Correspondent
letters@hindustantimes.com

**NEW DELHI:** Prime Minister Narendra Modi on Sunday urged citizens to actively participate in the Census 2027, calling it a "shared responsibility of all", and appealed to people to make the ongoing exercise a success.

Addressing the nation during his 133rd monthly radio programme, "Mann Ki Baat," the Prime Minister said citizens will have the option to self-enumerate using an app before enumerators visit households. He added that over 10 million households have already been covered in initial listing exercises. "Census 2027 has been made digital... you can enter your information yourself."

This will be India's 16th decennial census and the first to be conducted entirely through digital means. Originally intended for 2021 but delayed by the Covid-19 pandemic, it will now take place in two primary phases across 2026 and 2027.

He further highlighted recent developments in the country's nuclear and renewable energy sectors.

India's civil nuclear programme reached a "historic milestone" after the Fast Breeder Reactor at Kalpakkam in Tamil Nadu achieved criticality—the stage where a reactor sustains a nuclear chain reaction for the first time, he said.

The PM noted that the reactor was built using indigenous technology and described breeder reactors as systems that can generate energy while also producing new fuel.

This comes in the backdrop of the Sustainable Harnessing and Advancement of Nuclear Energy for Transforming India (SHANTI) Bill, 2025, passed by Parliament in December last year. The bill marks an overhaul of India's nuclear energy laws. It replaces older laws from 1962



Narendra Modi

and 2010, and opens up nuclear power to private and foreign participation.

The PM also pointed to progress in renewable energy, saying India's installed wind power capacity has crossed 56 gigawatts, with about 6 GW added in the past year. India now ranks fourth globally in wind energy capacity, he said, citing states like Gujarat, Tamil Nadu, Maharashtra and Rajasthan as key contributors.

On wildlife, he noted the return of blackbucks in Chhattisgarh, saying their population had once declined but has now seen a revival due to sustained conservation efforts.

"Blackbucks have reappeared in Chhattisgarh. Their numbers had once dwindled, but persistent efforts led to increased conservation. Today, they are once again seen roaming the open plains. This marks the return of our lost heritage," he said.

The address also mentioned India's performance at the European Girls' Mathematical Olympiad, where the country ranked sixth, and noted the growing global recognition of Indian cheese varieties following international awards.

Modi concluded the address by recalling historical and cultural milestones, including the upcoming birth anniversary of Rabindranath Tagore and the legacy of the 1857 uprising, while urging citizens to participate actively in national initiatives like the census.

# Census 2027: PM assures citizens of data security, urges keen participation

Our Bureau
New Delhi

Prime Minister Narendra Modi has assured citizens that the information provided by the citizens for the ongoing Census will remain completely secure and confidential, protected by robust digital security.

In his monthly radio address *Mann Ki Baat* on Sunday, the PM urged citizens to participate in the process and make the Census 2027 a success. The PM said Census is a very important campaign currently underway in the country and every Indian must be aware of it. He pointed out that the Indian Census exercise is the largest such exercise in the world.

"Friends, the national Census is not just a government task; it is a responsibility for all of us. Your participation is vital. The information you provide remains completely secure and confidential, protected by robust digital security," he said.



PM Narendra Modi

**The PM said Census is a very important campaign** currently underway in the country and every Indian must be aware of it.

Participation in this Census has also been made easier. "You can now record your information yourself. A self-enumeration facility will be available to you 15 days before the official visit. You can fill in the details at your own convenience," he said.

Once completed, the applicant will receive a unique ID via mobile or email which can be shown to officials who visit at home to confirm the details.

In States where self-enumeration has been completed, the work of house-listing by Census officials has already begun and listing of 1.2 crore families has been completed, he added.

**NUCLEAR TECH**

He remarked, Kalpakkam fast breeder reactor achieving criticality is a "historic milestone." Indian nuclear scientists have brought glory to the country, he said.

# Modi highlights farm benefits as India, NZ sign free trade deal

Rajeev Jayaswal
letters@hindustantimes.com

**NEW DELHI:** India and New Zealand on Monday signed a free trade agreement that Prime Minister Narendra Modi said would raise farmers' incomes, strengthen rural economies and attract billions of dollars in investment, as both countries outlined plans for agricultural partnerships, manufacturing linkages and joint exports to global markets.

The agreement, concluded in just nine months, gives duty-free access to 100% of India's exports to New Zealand and opens the door to agricultural technology partnerships, joint ventures and lower-cost industrial inputs for Indian manufacturers.

In a written message read out at the signing ceremony in New Delhi by Union commerce minister Piyush Goyal, Modi, who was in West Bengal, said the pact would combine New Zea-

continued on →7



Commerce minister Piyush Goyal with his New Zealand counterpart Todd McClay in Delhi on Monday. REUTERS

## 'Working on details of special visa for Indian skilled workers'

Rezaul H Laskar
letters@hindustantimes.com

**NEW DELHI:** New Zealand is putting in place details of an agreement to create a special three-year visa for skilled professionals from India, targeting areas such as healthcare, ICT, engineering and construction as part of the free trade deal, the country's trade minister, Todd McClay, told HT in an interview. The temporary visas will be available to 5,000 Indian professionals.

"...We need these people [as] it helps our economy grow," McClay said.

→Full interview, P8

# On a boat ride, Modi says Ganga flows 'through the soul of Bengal'

Dwaipayan Ghosh | TNN

**Kolkata:** Prime Minister Narendra Modi took a short break from his hectic Bengal poll campaign schedule on Friday to enjoy an early morning boat ride on the Ganga, which, he said, "flows right through the soul of Bengal".

Modi, who had spent the night at Raj Bhavan, reached Man O War Jetty for a walk around 7am. He spent some time along the banks chatting with morning walkers and then hired a boat for a ride on the Hooghly.

BATTLEGROUND WEST BENGAL

PTI



PM Narendra Modi tries his hand at photography during a boat ride on the Hooghly river in Kolkata on Friday

purpose. It was only when we saw PM Modi descending the ghat steps that we realised today was going to be spe-

It still feels unreal."

The other boatmen said they were briefed by the PM's security personnel.



# ಚಾರ್‌ಧಾಮ್ ಯಾತ್ರೆಗೆ ಪಂಚ ಸಂಕಲ್ಪಗಳು

अग्निष्टोमादिभिर्यज्ञैरिष्ट्वा विपुलदक्षिणैः।
न तत्फलमवाप्नोति तीर्थाभिगमनेन यत् ॥

*ಅಂದರೆ...* ದೊಡ್ಡ ಯಜ್ಞಗಳು ಮತ್ತು ದಾನದಂತಹ ಕಾರ್ಯಗಳಿಂದ ನಾವು ಅಪಾರ ಪುಣ್ಯಗಳನ್ನು ಪಡೆಯುತ್ತೇವೆ, ನಿಜ. ಆದರೆ, ತೀರ್ಥಯಾತ್ರೆಗಳಿಂದ ನಮಗೆ ಇನ್ನೂ ಹೆಚ್ಚಿನ ಪುಣ್ಯ ಸಿಗುತ್ತದೆ.

ಉತ್ತರಾಖಂಡದ ಪವಿತ್ರ ದೈವಭೂಮಿಯಲ್ಲಿ ಚಾರ್ ಧಾಮ್ ಯಾತ್ರೆ ಆರಂಭವಾಗಿದೆ. ಬಾಬಾ ಕೇದಾರನಾಥನ ದರ್ಶನ ಸೇರಿದಂತೆ 4 ದೇವಾಲಯಗಳಿಗೆ ಈ ಪವಿತ್ರ ಯಾತ್ರೆ ಭಾರತದ ಶಾಶ್ವತ ಸಾಂಸ್ಕೃತಿಕ ಪ್ರಜ್ಞೆಯ ಆಚರಣೆಯಾಗಿದೆ. ಈ ಯಾತ್ರೆಯ ಹಿನ್ನೆಲೆಯಲ್ಲಿ, ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ರಾಷ್ಟ್ರದ ನಾಗರಿಕರಿಗೆ ಸ್ಫೂರ್ತಿದಾಯಕ ಪತ್ರವೊಂದನ್ನು ಬರೆದು, "ಡಿಜಿಟಲ್ ಉಪವಾಸ" ಮತ್ತು "ನೈಸರ್ಗಿಕ ಸೌಂದರ್ಯವನ್ನು ನಿಜವಾಗಿಯೂ ಅನುಭವಿಸಲು ಪ್ರಯತ್ನಿಸಿ" ಎಂದು ಒತ್ತಾಯಿಸಿದ್ದಾರೆ. ಅವರು ಈ ಕೆಳಗಿನ ಪಂಚ ಸಂಕಲ್ಪಗಳನ್ನು ಅಳವಡಿಸಿಕೊಳ್ಳುವಂತೆ ದೇಶದ ಜನತೆಗೆ ಕರೆ ನೀಡಿದ್ದಾರೆ.

1. **ಸ್ವಚ್ಛತೆಯೇ ಪ್ರಧಾನವಾಗಲಿ:** ತೀರ್ಥಯಾತ್ರೆ ಸ್ಥಳಗಳಲ್ಲಿ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ಸ್ವಚ್ಛತೆ ಕಾಪಾಡಿಕೊಳ್ಳಿ. ನದಿಗಳನ್ನು ಸ್ವಚ್ಛವಾಗಿಡಲು ಕೊಡುಗೆ ನೀಡಿ.
2. **ಪ್ರಕೃತಿ ಮತ್ತು ಪರಿಸರದ ಬಗ್ಗೆ ಸೂಕ್ಷ್ಮತೆ:** ಪವಿತ್ರವಾದ ದೈವಿಕ ಹಿಮಾಲಯಕ್ಕೆ ಸಂವೇದನಾಶೀಲರಾಗಿರಿ. ಪ್ರಕೃತಿಯ ಸಮತೋಲನ ಎತ್ತಿಹಿಡಿಯುವಾಗ ಪರಿಸರ ಸಂರಕ್ಷಣೆಗೆ ಕೊಡುಗೆ ನೀಡಿ.
3. **ಸೇವೆ, ಸಹಕಾರ ಮತ್ತು ಸಾಮರಸ್ಯ:** ಪವಿತ್ರವಾದ ಯಾತ್ರಿಕರು ಪ್ರತಿದಿನ ಯಾವುದಾದರೂ ರೂಪದಲ್ಲಿ ಇತರರಿಗೆ ಕನಿಷ್ಠ ಒಂದು ಸೇವೆ ಮಾಡಬೇಕು.
4. **'ಸ್ಥಳೀಯ ಉತ್ಪನ್ನ'ಗಳನ್ನು ಉತ್ತೇಜಿಸಿ:** ಪ್ರಯಾಣ ಸಮಯದಲ್ಲಿ ನಿಮ್ಮ ಒಟ್ಟು ಖರ್ಚಿನ 5% ಹಣವನ್ನು ಸ್ಥಳೀಯ ಉತ್ಪನ್ನಗಳನ್ನು ಖರೀದಿಸಲು ಮೀಸಲಿಡಿ.
5. **ಶಿಸ್ತು, ಸುರಕ್ಷತೆ ಮತ್ತು ಸಂಯಮಕ್ಕೆ ಬದ್ಧತೆ:** ಸುರಕ್ಷಿತ ಮತ್ತು ಸುಗಮ ಪ್ರಯಾಣ ಖಚಿತಪಡಿಸಿಕೊಳ್ಳಲು ತೀರ್ಥಯಾತ್ರೆ ನಿಯಮಗಳು ಮತ್ತು ಸಂಚಾರ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ.


NEW INDIA
SAMACHAR
FORTNIGHTLY

**RNI NO.: DELENG/2020/78811 MAY 16-31, 2026**

RNI Registered No DELENG/2020/78811 (Publishing Date: April 30,2026 Pages: 42)

**EDITOR IN CHIEF**
**Dhirendra Ojha**
Principal Director General
Press Information Bureau, New Delhi

**PUBLISHED:**
**Kanchan Prasad**
Director General, on behalf of
Central Bureau Of Communication

**PUBLISHED FROM:**
Room No–278, Central Bureau Of Communication, 2nd Floor, Soochna Bhawan, New Delhi -110003